# ಶ್ರೀಮತಿ ಶಾರದಾ ಬಿ. ಹಾನ್‌ಗಲ್

ಕರ್ನಾಟಕದ ಹಿಂದೂಸ್ತಾನಿ ಮಹಿಳಾ ಸಂಗೀತ ಕಲಾವಿದೆಯರಲ್ಲಿ ಅಗ್ರಮಾನ್ಯರಾಗಿ ಧಾರವಾಡದ ಖ್ಯಾತ ಹಿಂದೂಸ್ತಾನಿ ಗಾಯಕಿ ಶ್ರೀಮತಿ ಶಾರಾದಾ ಹಾನ್‌ಗಲ್ ಕರ್ನಾಟಕದ ಮಹಿಳಾ ಸಂಗೀತ ಸಾಧಕೀಯರಲ್ಲಿ ಉಲ್ಲೇಖಿನೀಯರಾಗಿದ್ದಾರೆ. ಕರ್ನಾಟಕದ ಕೇಸರಬಾಯಿ ಕೇರಕರ್ ಎಂದರೆ ತಪ್ಪಿಲ್ಲ. **"ಗಾನ ವಿದ್ಯಾ ಬಡಿ ಕಠೀಣ ಹೈ"** ಎನ್ನುವುದು ಎಲ್ಲರಿಗೂ ತಿಳಿದಂತ ವಿಚಾರ. ಇಂತಹ ಸಂಗೀತ ವಿದ್ಯೆಯನ್ನು ಸಹನೆ ಸಾಧನೆ ತಪಸ್ಸಿನಿಂದ ಒಲಿಸಿಕೊಂಡು, ಜೀವ ಜೀವನವನ್ನೇ ಕಲೆಗಾಗಿ ಸಮರ್ಪಿಸಿಕೊಂಡು ಜೀವನ ಮುಕ್ತರಾದ ಶಾರದಾ ಹಾನ್‌ಗಲ್ ಇವರೇ ಜ್ವಲಂತ ನಿದರ್ಶನ.

ಹಿಂದೂಸ್ತಾನಿ ಸಂಗೀತ ಸೌಂದರ್ಯಕ್ಕೆ ಮಾರು ಹೋಗಿ ಅದರಲ್ಲಿ ಪರಿಣಿತಿ ಪಡೆದು ಸಂಗೀತವನ್ನೇ ಜೀವನಾಡಿಯಾಗಿ ಮಾಡಿಕೊಂಡಿರುವ ಸಂಗೀತ ಶಾರದೆ, ಶಾರದ ಹಾನಗಲ್. ಇವರದು ಆದರ್ಶ ಪ್ರಾಯವಾದ ಬದುಕು.

ಇವರು ಜನಿಸಿದ್ದು **೧೯೨೯**ರಲ್ಲಿ ಧಾರವಾಡವಾದರೂ ಮೂಲತಃ **ಹಾವೇರಿ ಬಳಿಯ ಹಾನಗಲ್** ತಾಲೂಕಿನವರು. ತಂದೆ ಭಿಮರಾವ್, ತಾಯಿ ಭೀಮಾಬಾಯಿ. ಸಣ್ಣ ವಯಸ್ಸಿನಲ್ಲಿಯೇ ಸಂಗೀತ ಅವರ ಒಡನಾಡಿ ಆಯಿತು. ವಿದ್ಯೆಯ ಜೊತೆಗೆ ಸಂಗೀತವನ್ನು ಇವರ ತಾಯಿ ತಂದೆ ಪ್ರೋತ್ಸಾಹಿಸಿದರು. ತಮ್ಮ ಸುಶ್ರಾವ್ಯ ಶಾರೀರ ಹೊಂದಿದ್ದ ಶಾರದಾ ಹಾನ್‌ಗಲ್‌ರವರು ತಮ್ಮ ಕಂಠ ಮಾಧುರ್ಯ ಪ್ರದರ್ಶಿಸುತ್ತಿದ್ದ ಇವರಿಗೆ ಪ್ರೋತ್ಸಾಹಿಸಿ ನೀರೆರೆದು ಮತ್ತಷ್ಟು ಅಭಿರುಚಿ ಹೆಚ್ಚಿಸಿದವರು ಸುಪ್ರಸಿದ್ಧ ಸಾಹಿತಿ **"ಸಾಲಿ ರಾಮಚಂದ್ರರಾವ್"**.

ಶಾರದಾ ಅವರು ಹೈಸ್ಕೂಲಿನಲ್ಲಿ ಇದ್ದಾಗಲೇ ಸಂಗೀತ ಕಾರ್ಯಕ್ರಮಗಳನ್ನು ನೀಡುತ್ತಿದ್ದರು. ಕಾಲೇಜಿನಲ್ಲಿ ಭಕ್ತಿ ಗೀತೆ, ಭಾವ ಗೀತೆಗಳನ್ನು ಕೇಳಿ ಪ್ರೋತ್ಸಾಹಿಸಿದವರು ಅವರ ಕಾಲೇಜಿನ ಪ್ರಾಂಶುಪಾಲರಾದ ರಾ.ಯ.ಧಾರವಾಡಕರ್ ಅವರು. ಶಾರದಾವರು ಬಿ.ಎ.ಪದವಿ ಪಡೆದು ಎಂ.ಎ. ಸಂಖ್ಯಾಶಾಸ್ತ್ರವನ್ನು ಕಲೆತವರು. ಇಷ್ಟಾದರೂ ಸಂಗೀತ ಅಯಸ್ಕಾಂತದಂತೆ ತನ್ನತ್ತ ಸೆಳೆಯಿತು. ಸವಾಯಿಗಂಧರ್ವರ ಸ್ನೇಹಿತರಾದ **ದತ್ತೋಪಂಥ ದೇಸಾಯಿಯವರು,** ಶಾರದಾರವರ ಮೊದಲನೇ ಸಂಗೀತ ಗುರುಗಳು. ಅನಂತರ ಆಗ್ರಾ ಘರಾಣೆಯ ಹನಮಂತರಾವ್ ಮಾಳ್ವೇಕರ್ ಅವರಲ್ಲಿ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತವನ್ನು ಮುಂದುವರೆಸಿದರು. ಸಂಗೀತ ವಿಶಾಲ ಸಮುದ್ರದಂತೆ. ಮುಂದೆ ಇವರು ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯ ಸಂಗೀತ ವಹಾವಿದ್ಯಾಲಯದ ಸಂಗೀತ ವಿಭಾಗದ ಪ್ರಾಧ್ಯಾಪಕರಾಗಿ,

ಮುಖ್ಯಸ್ಥರಾಗಿ ನಂತರ ಅದೇ ಕಾಲೇಜಿನ ಪ್ರಾಚಾರ್ಯರಾಗಿ ಕೆಲಸ ನಿರ್ವಹಿಸುವಾಗ ಹೆಚ್ಚಿನ ಸಂಗೀತ ಕಲಿಯುವದಕ್ಕಾಗಿ ಕೊಲ್ಲಾಪುರದ ಜೈಪುರ ಘರಾಣೆಯ ವಿಖ್ಯಾತ ಗಾಯಕ ಉಸ್ತಾದ್ ಅಲ್ಲಾದಿಯಾ ಖಾನ್‌ರ ಶಿಷ್ಯೆಯಾದ ಶ್ರೀಮತಿ ಲಕ್ಷ್ಮೀಬಾಯಿ ಜಾಧವ ಇವರ ಹತ್ತಿರ ಧಾರವಾಡದಿಂದ ಹೋಗಿ ಬರುತ್ತಿದ್ದರು. ಕಾಲೇಜಿನಲ್ಲಿಯೂ ಎಲ್ಲರಿಗೂ ಬೇಕಾದವರಾಗಿ ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಗುರುಗಳಾಗಿ ಮನೆಯಲ್ಲಿ ಜವಾಬ್ದಾರಿಯುತ ಮಹಿಳೆಯಾಗಿ ಸಂಗೀತವನ್ನು ಕಲಿಯಲು ಹೋಗುತ್ತಿದ್ದರು. ಕೊಲ್ಲಾಪುರದಲ್ಲಿ ಗುರುಗಳ ಮನೆಯಲ್ಲಿಯೇ ೧-೨ ತಿಂಗಳು ಸಂಗೀತ ಕಲಿಯುವದಕ್ಕಾಗಿ ಇರುತ್ತಿದ್ದರು. ಗುರುಗಳು ಇವರನ್ನು ತಮ್ಮ ಮಗಳಂತೆ ನೋಡಿಕೊಳ್ಳುತ್ತಿದ್ದರು. ಬೆಳಗಿನ ಜಾವ ಕೊಲ್ಲಾಪುರದ ಅಂಬಾಬಾಯಿ (ಲಕ್ಷ್ಮೀದೇವಿ) ಗುಡಿಯ ಘಂಟೆ ಬಾರಿಸುತ್ತದೆ. ಆ ವೇಳೆಗೆ ಶಾರದಾ ಹಾನ್‌ಗಲ್ ಇವರನ್ನು ಗುರುಗಳು ಎಬಿಸಿ ಹಾಲುಕೊಟ್ಟು ಸಂಗೀತ ಹೇಳಿಕೊಡುತ್ತಿದ್ದರು. ಇಡೀ ದಿನ ಗುರುಗಳು ಹೇಳಿದ ರಾಗವನ್ನು ಅಭ್ಯಾಸ ಮಾಡುತ್ತಿದ್ದರು. ಇವರ ಗುರುಗಳು ಇವರಿಗೆ "ನೀನು ಧಾರವಾಡಕ್ಕೆ ಹೋಗಬೇಡಾ, ಇಲ್ಲಿಯೆ ನನ್ನ ಮಗಳಾಗಿ ಇಲ್ಲಿಯೇ ಇದ್ದು ಬಿಡು" ಎಂದು ಯವಾಗಲೂ ಹೆಳುತ್ತಿದ್ದರಂತೆ. ಆಗ ಆ ಮಾತಿನಂತೆ ಅವರು ಅಲ್ಲಿ ಇದ್ದಿದ್ದರೆ ಇಡಿ ಹಿಂದುಸ್ತಾನದಲ್ಲಿ ಸಂಗೀತದಲ್ಲಿ ದೊಡ್ಡ ಹೆಸರು ಸಂಪಾದಿಸುತ್ತಿದ್ದರು. ಜಯಪುರ ಘರಾಣೆಯ ಅಪ್ರಚಲಿತ ಪ್ರಚಲಿತ ರಾಗಗಳನ್ನು ಕಲಿತು ಅದರಲ್ಲಿ ಪ್ರಭುತ್ವವನ್ನು ಪಡೆದರು. ಅವರ ಖ್ಯಾಲ್ ಗಾಯಕಿಯು ಹೇಗೆಂದರೆ ಗಣಿತದ ಸೂತ್ರದಂತೆ, ಅವರ ಆಲಾಪ, ತಾನ್, ಬೋಲ್‌ತಾನ್ ಎಲ್ಲವೂ ತಾಲದ ಜೊತೆ ಜೊತೆಗೆ ರಸಸ್ವಾದವಾಗಿ ಹಾಡುತ್ತಿದ್ದರು. ಸುಗಮ ಸಂಗೀತಕ್ಕೆ, ಭಾವ, ಭಕ್ತಿ ಗೀತೆಗಳಿಗೆ ಒಳ್ಳೆ ಧಾಟಿ ಹಚ್ಚಿ ಆಕಾಶವಾಣಿಯಲ್ಲಿ ಸುಗಮ ಸಂಗೀತವನ್ನು ಹಾಡುತ್ತಿದ್ದರು. ಇವರು ಖ್ಯಾಲ್ ಮತ್ತು ಸುಗಮ ಸಂಗೀತದ ಆಕಾಶವಾಣಿಯಲ್ಲಿ ಬಿ.ಹಾಯ್ ಗ್ರೇಡ್ ಕಲಾವಿದರಾಗಿದ್ದರು.

ಇವರು ಸರಳ ಸಜ್ಜನರು. ಕಲಿಸುವಿಕೆಯಲ್ಲಿ ವಿದ್ಯಾರ್ಥಿಗಳಿಗೆ ಒಳ್ಳೆಯ ಗುರುಗಳು. ಇವರ ತರಗತಿಯನ್ನು ಯಾವ ವಿದ್ಯಾರ್ಥಿಯು ತಪ್ಪಿಸುತ್ತಿರಲಿಲ್ಲ. ಹೇಳಿದ್ದನ್ನು ಒಪ್ಪಿಸದಿದ್ದರೆ ಇವರಿಗೆ ತುಂಬಾ ಕೋಪ ಬರುತ್ತಿತ್ತು. ತುಂಬಾ ಸ್ಟ್ರೀಕ್ಟು.

ಧಾರವಾಡ ಆಕಾಶವಾಣಿ ಕೇಂದ್ರದಿಂದ ಶಾಸ್ತ್ರೀಯ ಮತ್ತು ಸುಗಮ ಸಂಗೀತ ಕಛೇರಿ ನೀಡಿದ್ದಾರೆ. ನಾಡಿನ ಅನೇಕ ಪ್ರತಿಷ್ಠಿತ ಸಂಗೀತ ಸಮ್ಮೇಳನಗಳಲ್ಲಿ ಮತ್ತು ಮುಂಬಯ್‌ಯಲ್ಲಿ ನಡೆಯುತ್ತಿದ್ದ ಉ.ಅಲ್ಲಾದಿಯ ಖಾನ್‌ರವರ ಪುಣ್ಯ ದಿನಾಚರಣೆಯಲ್ಲಿ ವರ್ಷ ವರ್ಷವೂ ಸಂಗೀತ ಕಛೇರಿ ನೀಡಿದ್ದಾರೆ. ಮಹಾ ವಿದ್ಯಾಲಯದ ಪ್ರಾಚಾರ್ಯರಾಗಿ, ಕ.ವಿ.ವಿ. ಸೆನಟ್, ಸಿಂಡಿಕೇಟ್ ಸದಸ್ಯರಾಗಿ, ಧಾರವಾಡ ಹಾಗೂ ಗೋವಾ ಕಲಾ ಅಕಾಡಮಿಯ ಸಂಗೀತ ಪರೀಕ್ಷಕರಾಗಿ ಸೇವೆ ಸಲ್ಲಿಸಿದ್ದಾರೆ. ಅನೇಕ ಶಿಷ್ಯರನ್ನು ತಯ್ಯಾರು ಮಾಡಿದ್ದಾರೆ. ಅದರಲ್ಲಿ – ಡಾ॥ ಭಾರತಿ ಕೆ.

ನಾಯಕ, ಡಾ॥ ನಂದಾ ಪಾಟೀಲ್, ಡಾ॥ ಸುಮಿತ್ರಾ ಕಾಡದೇವರ ಮಠ, ವಿನಾಯಕ ತೊರವಿ, ವಿಜಯಾ ಹಿರೇಮಠ, ಸುಧಾ ಅಡಿಕೆ ಮುಂತಾದವರು. ಇವರಿಗೆ **"ಕರ್ನಾಟಕ ರಾಜ್ಯೋತ್ಸವ:" ಪ್ರಶಸ್ತಿ, "ಕೇಂದ್ರ ಸಂಗೀತ ನಾಟಕ ಅಕಾಡಮಿ" ಪ್ರಶಸ್ತಿ "ಕರ್ನಾಟಕ ಸಂಗೀತ ನೃತ್ಯ ಅಕಾಡಮಿ" ಪ್ರಶಸ್ತಿ "ಕರ್ನಾಟಕ ಕಲಾಶ್ರೀ" ಪ್ರಶಸ್ತಿ** ಮತ್ತು ಮೈಸೂರಿನ ವಸುಂಧರಾ ಫರಫಾರ್ಮಿಂಗ ಆರ್ಟ್ಸ ಸೆಂಟರ್ ಇವರಿಗೆ **"ಶೃತಿ ಸಾಗರ" ಪ್ರಶಸ್ತಿ –** ಹೀಗೆ ಮುಂತಾದ ಪ್ರಶಸ್ತಿ ದೊರೆತಿವೆ. ಇವರು ನಿವೃತ್ತಿಯಾದ ಮೇಲೆ ಮೈಸೂರಿನಲ್ಲಿ ಸಂಗೀತ ಕಲಿಸಲು ಹೋಗುತ್ತಿದ್ದರು.

**೭೬** ವರ್ಷಗಳ ತುಂಬು ಜೀವನ ಬಾಳಿ ಸಂಗೀತಕ್ಕಾಗಿಯೇ ಬದುಕಿ **೧೨-೮-೨೦೦೪**ರಲ್ಲಿ **ನಿಧನ**ರಾದರು. ಇವರು ಅಪ್ರತಿಮ ಜೈಪುರ ಘರಾಣಾದ ಗಾಯಕಿ. ನಿಷ್ಠೆ ಸಹನೆಯಿಂದ ಸ್ವರ ಸಾಧನೆಯನ್ನು ತಪಸ್ಸಿನಂತೆ ಮಾಡಿದ ವಿದೂಷಿ ಶಾರದಾ ಹಾನ್‌ಗಲ್ ಇವರು ಇಂದಿನ ಕಲಾವಿದರ ಕ್ಯಾಸೆಟ್, ಸಿ.ಡಿ.ಗಳ ಮೂಲಕ ಪ್ರಚಾರಕ್ಕೆ ನಿಂತಿರುವುದನ್ನು ಕಟುವಾಗಿ ಟೀಕಿಸುತ್ತಿದ್ದರು. ಕೇವಲ ಪ್ರಚಾರದ ದಾರಿಗಿಳಿಯದೆ ಶೃದ್ಧಾ ಭಕ್ತಿಯಿಂದ ಸಾಧನೆಗೆ ಮಹತ್ವ ನೀಡಬೇಕು ಎನ್ನುವ ಗಾಯಕಿ ಶಾರದಾ ಒಳ್ಳೆಯ ಮೌಲ್ಯಗಳ ಪ್ರತಿಪಾದಕರಾಗಿದ್ದರು.

# ಸರೋಜ ಅನಗರಕರ

ಕರ್ನಾಟಕದ ಹಿಂದೂಸ್ತಾನಿ ಸಂಗೀತ ಮಹಿಳಾ ಕಲಾವಿದೆಯರಲ್ಲಿ ಕಲಬುರ್ಗಿ ನಗರದ ಖ್ಯಾತ ಹಿಂದೂಸ್ತಾನಿ ಗಾಯಕಿ ಶ್ರೀಮತಿ ಸರೋಜಾ ಅನಗರಕರ.

**೧೯೭೦-೭೧**ರಲ್ಲಿ ಕರ್ನಾಟಕ ಸರಕಾರ ನಡೆಸುವ ಸಂಗೀತ ವಿದ್ವತ್ ಪರೀಕ್ಷಕರಾಗಿ ಸಂಗೀತ ಘಟಾನುಘಟಿಗಳಾದ ಪಂ. ಬಸವರಾಜ ರಾಜಗುರು, ಗಂಗೂಬಾಯಿ ಹಾನ್‌ಗಲ್, ಸಿದ್ದರಾಮ ಜಂಬಲದಿನ್ನಿ ಮತ್ತು ಪಂ. ಮರಾಠೆ ಇವರುಗಳು ಕಲಬುರ್ಗಿಗೆ ಬಂದಿದ್ದರು. ಪರೀಕ್ಷೆಗೆ ಸರೋಜ ಇವರು ಕೂಡಾ ಹಾಜರಿದ್ದರು. ಇವರ ಸಂಗೀತ ಕೇಳಿ ಬಸವರಾಜರಾಜ ಗುರು ಅವರು "ಬೆಳಿಗ್ಗೆಯಿಂದ ಬೇಸೂರು ಕೇಳಿ ಕೇಳಿ ತಲೆ ಕೆಟ್ಟಿತ್ತು. ಈ ಹುಡುಗಿ ಎಷ್ಟು ಇಂಪಾಗಿ ಹಾಡ್ತಾಳೆ ಈ ಹುಡುಗಿ ಹಾಡು ಕೇಳಿದ ಮ್ಯಾಲೆ ಮನಸ್ಸಿಗೆ ಆನಂದ ಅನಸ್ತು ಗಂಗಕ್ಕಾ" ಅಂತಾ ಸಂತೋಷ ಪಟ್ಟರು. ಇದರಲ್ಲಿ ರಾಜ್ಯಕ್ಕೆ ಮೊದಲ ರ್‍ಯಾಂಕ್ ಹಾಗೂ **ಚಿನ್ನದ ಪದಕ** ಪಡೆದರು. ಈ ಸಾಧನೆ ಮಾಡಿದವರು ಸರೋಜ ಅನಗರಕರ.

ಕಲಬುರ್ಗಿ ನಗರದ ಶ್ರೀ ನರಹರಿರಾವ ಅನಗರಕರ್ ಹಾಗೂ ಶ್ರೀಮತಿ ರುಕ್ಮೀಣಿ ನರಸಿಂಹರಾವ ಈ ದಂಪತಿಗಳ ಮೂರನೆಯ ಮಗಳಾಗಿ ಜನ್ಮವೆತ್ತಿದ ಬಾಲಕಿಯೇ ಸಂಗೀತ ಲೋಕದ ಖ್ಯಾತಿಯ ಈ ಸರೋಜ ಅನಗರಕರ. ಏಳು ಜನ ಮಕ್ಕಳಲ್ಲಿ ಹಾಗೂ ಇಡೀ ಮನೆತನಕ್ಕೆ ಅತ್ಯಂತ ಅಕ್ಕರೆಯ ಮಗಳಾಗಿ ಬೆಳದವರು ಈ ಸರೋಜ.

ನೂತನ ವಿದ್ಯಾಲಯದಲ್ಲಿ ಪ್ರಾಥಮಿಕ ಶಿಕ್ಷಣ, ಅಭ್ಯಾಸದಲ್ಲೂ ಅತ್ಯಂತ ಮುಂದೆ **೧೯೬೯-೭೧** ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಸಮಾಜಶಾಸ್ತ್ರ ವಿಷಯದಲ್ಲಿ, ಸ್ನಾತಕೋತ್ತರ (ಎಮ್.ಎ) ಪದವಿ ಪಡೆದು, ಬಿ.ಎಸ್. ಮಾಡಿ ಸರಕಾರಿ ಬಾಲಕಿಯರ ಪದವಿಪೂರ್ವ ಕಾಲೇಜಿನಲ್ಲಿ ಶಿಕ್ಷಕರಾಗಿ ಮುಂದೆ **೧೯೭೨ ರ**ಲ್ಲಿ ವಿಭಾಗೀಯ ಸಂಗೀತ ಅಧೀಕ್ಷಕರೆಂದು ಪದೋನ್ನತಿ ಹೊಂದಿದರು. ನಿವೃತ್ತಿ ಹೊಂದಿದ ನಂತರ ಅವರು ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಕಾಣಿಕೆಯಾದರೆ, ಸಂಗೀತ ಕ್ಷೇತ್ರಕ್ಕೆ ನೀಡಿದ ಅವರ ಸೇವೆ ಹಾಗೂ ಕಾಣಿಕೆ ಅಮೋಗವಾದದ್ದು.

ಕಲಬುರ್ಗಿಯಲ್ಲಿ ಅನಗರಕರ ಅವರ ಮನೆತನವು ತಲತಲಾಂತರದಿಂದ ಸಂಗೀತ ವಾತಾವರಣ ಇರುವಂತಹುದು. ಸರೋಜಾರವರ ಅಜ್ಜ ದಿ. ಶ್ರೀಪತರಾವ್ ಅನಗರಕರ ಉತ್ತಮ ಧೃಪದ ಹಾಗೂ ಧಮಾರ ಗಾಯಕರು. ಇವರ ಸೋದರತ್ತೇ ಶ್ರೀಮತಿ ಗೋದಾವರಿ ಅನಗರಕರ ಉತ್ತಮ ಗಾಯಕಿ. ಇವರ ಎಲ್ಲಾ ಸಹೋದರಿಯರು ಸಂಗೀತ

ಕ್ಷೇತ್ರದಲ್ಲಿ ಹೆಸರು ಮಾಡಿದರೆ. ಒಂದು ಕಾಲದಲ್ಲಿ ಕಲಬುರ್ಗಿಯ ಕಲಾಮಂಡಳ ಅಂದರೆ ಸರಸ್ವತಿಯ ವಾಸಸ್ಥಾನವಾಗಿತ್ತು. ಇದಕ್ಕಾಗಿಯೇ ಎ.ಎನ್ ಅಪ್ಪೆ ಗುರುಗಳ ಹತ್ತಿರ ಅನಗರಕರರವರು ಸಂಗೀತ ಸಾಧನೆ ಪ್ರಾರಂಭಿಸಿದರು. ಸುಮಾರು ಮೂರು ವರ್ಷಗಳ ಕಾಲ ಸತತ ಅಭ್ಯಾಸ ಮಾಡಿದರು. ಅವರಂತಹ ಗುರುಗಳಲ್ಲಿ ಸಂಗೀತ ಸಾಧನೆಯ ನಂತರ ಸರೋಜ ಅನಗರಕರ ಅವರಿಗೆ ಮುಂದೆ ಸಂಗೀತಕ್ಕೆ ತಮ್ಮನ್ನು ತಾವೇ ಅರ್ಪಣೆ ಮಾಡಿಕೊಳ್ಳುವಂತಹ ಅವಕಾಶ ಕೂಡಿ ಬಂದಿತು.

ಏಕೆಂದರೆ ಒಬ್ಬ ಉತ್ತಮ ಗುರುಗಳು ಸಿಗುವುದು ಶಿಷ್ಯರ ಅದೃಷ್ಟ. ಅಂತೆಯೇ ಶ್ರೀಮತಿ ಸರೋಜ ಅನಗರಕರ ಅವರಿಗೆ ಉತ್ತಮ ಗುರುಗಳಾಗಿ ಸಂಗೀತ ಏಕಲವ್ಯ ಎಂದೇ ಖ್ಯಾತಿ ಪಡೆದ ಡಾ॥ ಪಾಂಡುರಂಗರಾವಪತ್ಕಿ ಯವರು ದೊರೆತರು. ಪ್ರತಿದಿನ ಬೆಳಿಗ್ಗೆ ನಾಲ್ಕು ತಾಸು, ಸಾಯಂಕಾಲ ನಾಲ್ಕು ತಾಸು ರಿಯಾಜ್ ಮಾಡಿಸಿ, ಸುಮಾರು ೧೫ ವರ್ಷಗಳ ಕಾಲ ಸತತ ಮಾರ್ಗದರ್ಶನ ನೀಡಿದರು. ಅಂತೆಯೇ ಅನಗರಕರ ಅವರು ಇಂದು ಸಂಗೀತ ಲೋಕದಲ್ಲಿ ತಮ್ಮದೇ ಆದ ಸ್ಥಾನದಿಂದ ಗುರುತಿಸಲ್ಪಡುತ್ತಾರೆ.

ಚಿನ್ನದ ಪದಕ ಪಡೆಯುವ ಮೂಲಕ ಸುಮ್ಮನೆ ಇರದೇ ಮುಂಬೈನ ಗಂಧರ್ವ ಮಹಾವಿದ್ಯಾಲಯದ ಸಂಗೀತ ಅಲಂಕಾರ ಪರೀಕ್ಷೆಯಲ್ಲೂ **೧೯೭೨**ರಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದರು. **೧೯೬೨**ರಿಂದ ಧಾರವಾಡ ಆಕಾಶವಾಣಿ **“ಬಿ”** ಶ್ರೇಣಿಯ ಕಲಾವಿಲದರೆಂದು ಸುಮಾರು **೨೦**ವರ್ಷಗಳ ಕಾಲ ಕಾರ್ಯಕ್ರಮ ನೀಡಿದ ಶ್ರೇಯಸ್ಸು ಇವರದು.

ಇವರು (ಹಾಡಲು ಪ್ರಾರಂಭಿಸಿದರೆ) ಮಂದ್ರ ಸಪ್ತಕ, ಮಧ್ಯಸಪ್ತಕ, ಹಾಗೂ ತಾರ ಸಪ್ತಕದಲ್ಲಿ ಲೀಲಾಜಾಲವಾಗಿ ಆಲಾಪ, ತಾನ್ ಮಾಡಲು ಪ್ರಾರಂಭಿಸಿದರೆ ಯುವ ಕಲಾವಿದರು ಕೂಡಾ ಆಶ್ಚರ್ಯಪಡುವಂತೆ ಹಾಡುತ್ತಾರೆ. ಕಿರಾಣಾ ಘರಾಣೆಯ ಗಾಯಕಿ ಕೇಳಬೇಕೆಂದರೆ ಸರೋಜಾ ಬಾಯಿಯವರ ಗಾಯನ ಕೇಳಬೇಕು. ಅಂದಾಗ ಮಾತ್ರ ಅದರ ಸವಿಯನ್ನು ಸವಿದವರಿಗೆ ಗೊತ್ತು.

ಉದಯಾನ್ಮೂಖ ಕಲಾವಿದರು ಮುಂದೆ ಬರಲಿ ಮತ್ತು ವಿಶ್ವ ತುಂಬೆಲ್ಲ ಶಾಂತಿ ನೆಲಸಲಿ ಎಂಬ ಕಾರಣಕ್ಕಾಗಿ **೧೯೮೮-೮೯**ರಲ್ಲಿ ಸ್ವರಾಂಜಲಿ ಸಂಗೀತ ವಿದ್ಯಾ ಸಂಸ್ಥೆಯನ್ನು ಸರೋಜ ಅನಗರಕರ ಅವರು ಸ್ಥಾಪಿಸಿದರು. ಈ ಸಂಸ್ಥೆಯ ಅಧ್ಯಕ್ಷರು ಶ್ರೀಮತಿ ಗೋದಾವರಿ ಅನಗರಕರ.

ಕಲಬುರ್ಗಿ ನಗರದಲ್ಲಿ ಅನೇಕ ಶಿಷ್ಯರನ್ನು ಸಂಗೀತ ಪ್ರಪಂಚಕ್ಕೆ ನೀಡಿದ ಕೀರ್ತಿ ಶ್ರೀಮತಿ ಸರೋಜ ಅನಗರಕರ ಇವರಿಗೆ ಸಲ್ಲುತ್ತದೆ. ರಮೇಶ ಕುಲಕರ್ಣಿ, ಉಷಾ ಪಟ್ವಾರಿ, ಸುರೇಶ ಪತ್ಕಿ, ಸಂಗೀತಾ ಮಾಹೋರಕರ, ಪೂರ್ಣಿಮಾ ರಾಮಾಚಾರ, ಸ್ನೇಹಾ ಹಂಪಿಹೊಳಿ, ಗಿರಿಜಾ ದೇಶಪಾಂಡೆ, ರಾಘವೇಂದ್ರ ಬಡಶೇಷಿ, ಇನ್ನೂ

ಅನೇಕ ಶಿಷ್ಯರು ಇವರ ಸಂಗೀತ ಗರಡಿಯಲ್ಲಿ ಪಳಗಿ ಸಂಗೀತ ಕ್ಷೇತ್ರದ ಕಾಣಿಕೆಯಾಗಿದ್ದಾರೆ.

ಈ ಕಲಾವಿದೆ ಬಡೋದಾ, ಇಂದೋರ, ಮುಂಬೈ, ಪುಣೆ, ಔರಂಗಾಬಾದ, ಮಲಕಾಪುರ, ಲಾತೋರ, ಉಮರ್ಗಾ, ಕೊಲ್ಲಾಪುರ, ಹೈದ್ರಾಬಾದ್, ರಾಯಚೂರ, ಬಳ್ಳಾರಿ, ಇನ್ನೂ ಅನೇಕ ಕಡೆಗಳಲ್ಲಿ ಯಶಸ್ವಿ ಸಂಗೀತ ಕಾರ್ಯಕ್ರಮ ನೀಡಿ ಶ್ರೋತೃಗಳ ಮನತಣಿಸಿದ್ದಾರೆ.

ಖಯಾಲ್, ಠುಮ್ರಿ, ತರಾನಾ, ದಾಸವಾಣಿ, ಸಂತವಾಣಿ, ವಚನಗಳು, ಭಾವಗೀತೆಗಳು ಸ್ವತಃ ತಾವೇ ಸಂಗೀತ ಸಂಯೋಜನೆ ಮಾಡಿ ಹಾಡುತ್ತಾರೆ. ಅನೇಕ ರಾಗಗಳಿಗೆ ಬೇಸಗಳನ್ನೂ ಸಹಿತ ಸಂಯೋಜನೆ ಮಾಡಿದ್ದಾರೆ.

ಈ ಕಲಾವಿದೆಯ ಎಲ್ಲಾ ಯಶಸ್ವಿಗೆ ಪತಿ ಶಾರದಾ ಕೋಲ್ಹಾರಕರ ಅವರೇ ಕಾರಣ. ಇವರ ಸಾಧನೆಗೆ ಬೆನ್ನಲುಬಾಗಿ ತಾವು ನಿಂತು, ಪ್ರೋತ್ಸಾಹ ನೀಡಿ ಈ ಮಟ್ಟದಲ್ಲಿ ಬೆಳೆಯಲು ಕಾರಣವಾಗಿದ್ದಾರೆ. ಜೊತೆಗೆ ಅವರ ಮಗ ನಿಖಿಲ ಕೂಡಾ ಉತ್ತಮ ಕಲಾವಿದನಾಗಿ ಬೆಳೆಯುತ್ತಿದ್ದಾನೆ. ದಿಂ. ನಾನಾ ಮಹಾರಾಜ ತಾರಣೀಕರ (ಇಂದೂರ) ರ ಭಕ್ತರಾಗಿದ್ದು, ಗುರುಗಳು ಅನಗರಕರ ಅವರಿಗೆ **"ತರಾನಾ ಕಲಾವಿದೆ"** ಎಂದು ಗುರುತಿಸುತ್ತಿದ್ದರು.

ಈ ಅಪ್ರತೀಮ ಪ್ರಬುದ್ಧ ಗಾಯಕಿಗೆ **೨೦೦೧-೨೦೦೨**ರಲ್ಲಿ ಕರ್ನಾಟಕ ಸರಕಾರ **"ಕರ್ನಾಟಕ ಕಲಾಶ್ರೀ"** ಪ್ರಶಸ್ತಿ ನೀಡಿ ಗೌರವಿಸಿದೆ.

# ಡಾ.॥ ಗಂಗೂಬಾಯಿ ಹಾನಗಲ್

ಗಂಗೂಬಾಯಿ ಹಾನಗಲ್ ಇವರು ಯಾರಿಗೆ ತಾನೆ ಪರಿಚಯವಿಲ್ಲಾ? ಸಂಗೀತ ರಸಿಕರಿಗೆಲ್ಲ ಪರಿಚಿತರು. ಇವರು "ಕಿರಾಣಾ ಘರಾಣೆ"ಯ ಗಾಯನದಲ್ಲಿ ಖ್ಯಾತಿ ಪಡೆದ ಹಿಂದುಸ್ತಾನಿ ಗಾಯಕಿ.

ಇವರು ಧಾರವಾಡದಲ್ಲಿ **೧೯೦೩, ಮಾರ್ಚ ೫** ರಂದು ಜನಿಸಿದರು. ಇವರ ತಾಯಿ ಅಂಬಾಬಾಯಿ ಕರ್ನಾಟಕ ಸಂಗೀತದ ವಿದೂಷಿ. ಆಗ ಕರ್ನಾಟಕ ಸಂಗೀತದ ಪ್ರಭಾವವೇ ಜಾಸ್ತಿ. ಹೀಗಾಗಿ ಇವರ ಜೊತೆ ಸಂಗೀತ ಕುರಿತು ಚರ್ಚೆ ನಡೆಸಲು, ಕಚೇರಿ ನಡೆಸಲು ಮೈಸೂರಿನ ಅನೇಕ ಕರ್ನಾಟಕ ಸಂಗೀತಗಾರರು ಧಾರವಾಡ ಹುಬ್ಬಳ್ಳಿಗೆ ಬರುತ್ತಿದ್ದರು. ಈ ರೀತಿ ಸಂಗೀತ ವಾತಾವರಣ ಗಂಗೂಬಾಯಿಯವರ ಮೇಲೆ ತುಂಬಾ ಪ್ರಭಾವ ಬೀರಿತು. ಸಂಗೀತದ ಪ್ರಥಮ ಗುರು ಇವರಿಗೆ ತಾಯಿಯೇ ಗುರುವಾದರು.

ಧಾರವಾಡ ಹುಬ್ಬಳ್ಳಿಗಳಲ್ಲಿ ಅಷ್ಟೋತ್ತಿಗೆ ಹಿಂದೂಸ್ತಾನಿ ಸಂಗೀತದ ಕಂಪನ ಬೀಸಲಾರಂಭಿಸಿತು. ಅಬ್ದುಲ್ ಕರೀಮ್ ಖಾನ್‌ರು ಮೈಸೂರಿಗೆ ಹೋಗಿ ಬರುವಾಗ ಧಾರವಾಡ ಹುಬ್ಬಳ್ಳಿಗಳಲ್ಲಿ ಇವರ ಕಚೇರಿಯನ್ನು ಅಲ್ಲಿಯ ಜನರು ಏರ್ಪಡಿಸುತ್ತಿದ್ದರು. ಆ ಸಮಯದಲ್ಲಿ ಕರೀಮ್ ಖಾನ್‌ರು ಅಂಬಾಬಾಯಿಯವರ ಮನೆಗೆ ಬಂದು ಹೋಗುತ್ತಿದ್ದರು. ಆಗ ಇವರ ಸಂಗೀತ ಕೇಳುತ್ತ ಗಂಗೂಬಾಯಿಯವರಿಗೆ ಹಿಂದುಸ್ತಾನಿ ಸಂಗೀತದತ್ತ ಒಲವು ಹರಿಯಿತು. ಇದನ್ನು ಗಮನಿಸಿ ಅಂಬಾಬಾಯಿ ಮಗಳಿಗೆ ಹಿಂದೂಸ್ತಾನಿ ಸಂಗೀತ ಕಲಿಸಲು ಕರಿಮ್ ಖಾನ್‌ರ ಶಿಷ್ಯ ಹುಲಗೂರು ಕೃಷ್ಣಾಚಾರ್ಯರನ್ನು ನೇಮಿಸಿದರು. ಇವರು ಗಂಗೂಬಾಯಿಯವರು ಸಂಗೀತದಲ್ಲಿ ಎಷ್ಟು ಆಸಕ್ತಿ ಹೊಂದಿದ್ದರೆಂದರೆ ಗ್ರಾಮಫೋನ್ ರಿಕಾರ್ಡಗಳ ಅಂಗಡಿಗೆ ಹೋಗಿ ಹಿಂದುಸ್ತಾನಿ ಗಾಯಕರ ರಿಕಾರ್ಡಗಳನ್ನು ಹಾಕುವಂತೆ ಕೇಳುತ್ತಿದ್ದರು. ಬಾಲಕಿಯ ಆಸಕ್ತಿಗೆ ಮತ್ತು ಮುಗ್ಧತೆಗೆ ಮಾರು ಹೋಗಿ ಗಂಗೂಬಾಯಿಯವರಿಂದ ಹಾಡು ಹೇಳಿಸಿ ನಂತರ ರಿಕಾರ್ಡ ಕೇಳಿಸುತ್ತಿದ್ದರು. ಅವುಗಳನ್ನು ಕೇಳಿ ಅದನ್ನೇ ಗುಣುಗುಣಿಸುತ್ತಿದ್ದರು.

ಸವಾಯ್ ಗಂಧರ್ವರೆಂದೇ ಹೆಸರಾಗಿದ್ದ ರಾಮಭಾವು ಕುಂದಗೋಳಕರ್ ಅವರು ಪುಣೆ ಬಿಟ್ಟು ಕುಂದಗೋಳದಲ್ಲಿಯೇ ಇರುತ್ತಿದ್ದರು. ಗಂಗೂಬಾಯಿಯವರು ಸವಾಯ್ ಗಂಧರ್ವರಲ್ಲಿ ಸಂಗೀತ ಅಭ್ಯಾಸವನ್ನು ಮುಂದುವರಿಸಲು ಪ್ರತಿನಿತ್ಯ ಹುಬ್ಬಳ್ಳಿಯಿಂದ ರೈಲಿನಲ್ಲಿ ಕುಂದಗೋಳಕ್ಕೆ ಹೋಗಿಬರುತ್ತಿದ್ದರು. ಮಗಳಿಗೆ ಹಿಂದೂಸ್ತಾನಿ ಸಂಗೀತದ ಸಾಧನೆಯಲ್ಲಿ ತಮ್ಮ ಕರ್ನಾಟಕಿ ಸಂಗೀತ ಕಚೇರಿ ನಡೆಸುವುದು ತೊಂದರೆಯಾಗಬಾರದೆಂದು ಅಂಬಾಬಾಯಿಯವರು ತಮ್ಮ ಸಾಧನೆ ಮಾಡುವುದನ್ನು ಬಿಟ್ಟರು. ತಾಯಿಯ ತ್ಯಾಗ ಗಂಗೂಬಯಿಯ ಸಾಧನೆ

ಫಲಕೊಟ್ಟಿತು. ಕೆಲವೇ ವರ್ಷಗಳಲ್ಲಿ ಸಂಗೀತದಲ್ಲಿ ಹೆಸರು ಪಡೆದರು.

ಒಳ್ಳೆಯ ಗುರುಗಳಿಗೆ ಒಳ್ಳೆಯ ಶಿಷ್ಯೆ ದೊರೆಯುವುದು ವಿರಳ. ಆದರೆ ಸವಾಯ್ ಗಂಧರ್ವರಿಗೆ ಗಂಗೂಬಾಯಿಯಂತಹ ಉತ್ತಮ ಶಿಷ್ಯೆ ದೊರೆತದ್ದು ತಮ್ಮ ಗಾಯಕಿ ಪರಂಪರೆಯ ಉತ್ಕರ್ಷದ ಕಾಲವೆಂದು ಅವರು ಭಾವಿಸಿದ್ದರು. ಸವಾಯ್ ಗಂಧರ್ವರು ಕಿರಾಣಾ ಘರಾಣೆಯ ಆಧಾರ ಸ್ತಂಭವಾಗಿ ಅದನ್ನು ಕರ್ನಾಟಕದಲ್ಲಿ ಬೆಳೆಸಿದ ಕಾರಣಿ ಪುರುಷರು. ಅಬ್ದುಲ್ ಕರೀಮ್ ಖಾನ್‌ರು ಈ ಘರಾಣೆಯ ಆದ್ಯ ಪ್ರವರ್ತಕರು. ಸ್ವರ ಪ್ರಧಾನವಾದ ಶುದ್ಧಗಾಯನ, ಗಮಕ, ಬೋಲತಾನ್, ಮೀಂಡ್, ಖಟ್ಕಾ, ಫಿರತ್‌ಯುಕ್ತ ತಾನ್‌ಗಳ ಸಮ್ಮಿಲನ, ವೈಶಿಷ್ಟ್ಯಪೂರ್ಣ ಲಯಗಾರಿಕೆ ಈ ಘರಾಣೆಯ ಮುಖ್ಯ ಅಂಶಗಳು. ಗಂಗೂಬಾಯಿಯವರ ಗಾಯನದಲ್ಲಿ ಇವೆಲ್ಲ ಸಮೃದ್ಧವಾಗಿವೆ. ಘರಾಣೆಯ ಗಾಯಕಿಯ ಪರಂಪರೆಯನ್ನು ಚಾಚು ತಪ್ಪದಂತೆ ಕಾಯ್ದುಕೊಂಡು ಬಂದಿದ್ದಾರೆ. ಇತ್ತೀಚೀನ ದಿನಗಳಲ್ಲಿ ಘರಾಣೆಯ ವೈಶಿಷ್ಟ್ಯ ಕುಂದುತ್ತಿರುವುದನ್ನು ಅವರು ಅತ್ಯಂತ ನೋವಿನಿಂದ ಹೇಳುತ್ತಾರೆ.

ಬಾಲ್ಯದಲ್ಲಿ ಗಂಗೂಬಾಯಿಯವರ ಕಂಠ ಅತ್ಯಂತ ಕೋಮಲವಾಗಿತ್ತು. ಟಾನ್ಸಿಲ್ ಚಿಕಿತ್ಸೆಯ ನಂತರ ಕಂಠ ಗಡುಸಾಯಿತು. ಆದರೂ ಅತ್ಯಂತ ಪರಿಶ್ರಮದಿಂದ ಸಾಧನೆ ಮಾಡಿ ಆಕರ್ಷಕ ಕಂಠವಾಗಿಸಿಕೊಂಡ ಅವರ ಸಾಹಸ ಮೆಚ್ಚುವಂತಹುದು. ಪ್ರತ್ಯಕ್ಷವಾಗಿ ಕೇಳದ ಶ್ರೋತೃಗಳು ಅವರೊಬ್ಬ ಪುರುಷ ಗಾಯಕರೆಂದೆ ಭಾವಿಸಿದರೆ ಆಶ್ಚರ್ಯವಿಲ್ಲ.

ಗಂಗೂಬಾಯಿಯವರು ಸಂಯಮ ಸೌಜನ್ಯಯುಕ್ತ ಬದುಕು. ಉಡುಗೆ ತೊಡುಗೆಗಳಲ್ಲೂ ಸರಳತೆ. ಈ ಸರಳತೆ ಸಾರ್ವಜನಿಕ ಅವಹೇಳನಕ್ಕೂ ಕಾರಣವಾದದ್ದುಂಟು.

೧೯೪೪ರಲ್ಲಿ 'ಗಯಾ' ದಲ್ಲಿ ನಡೆದ ಸಂಗೀತ ಸಮ್ಮೇಳನಕ್ಕೆ ಗಂಗೂಬಯಿ ಆಮಂತ್ರಿತರಾಗಿದ್ದರು. ಅಂಥಹ ಥಳಕು ಝುಳರೆಲ್ಲದ ತೀರ ಸರಳ ಉಡುಪಿನಲ್ಲಿ ವೇದಿಕೆಗೆ ಬಂದ ಇವರನ್ನು ನೋಡಿದ ಸಂಘಟಕರು "ಕೇವಲ ಹದಿನೈದು ನಿಮಿಷದಲ್ಲಿ ಕಾರ್ಯಕ್ರಮ ಮುಗಿಸಬೇಕೆಂದು" ಹೇಳಿದರು. ಈಕೆ ತಾನೆ ಏನು ಹಾಡಬಲ್ಲಳು? ಎಂಬುದು ಅವರ ಭವನೆಯಾಗಿತ್ತು. ಪ್ರೇಕ್ಷರನ್ನು ರಂಜಿಸಲು ಮತ್ತು ತಮ್ಮ ಕಲಾಪ್ರೌಢಿಮೆಯನ್ನು ಪ್ರದರ್ಶಿಸಲು ಒಬ್ಬ ಸೃಜನಶೀಲ ಕಲಾವಿದನಿಗೆ ಹದಿನೈದು ನಿಮಿಷ ಸಾಕೆಂದು ಗಂಗೂಬಾಯಿ ವೇದಿಕೆಯೇರಿದರು. ಧೃತ್‌ಲಯದಲ್ಲಿ ಒಂದು ರಾಗ ಹಾಡಿ ನಿಗದಿತ ಸಮಯದಲ್ಲಿ ಕಾರ್ಯಕ್ರಮ ಮುಗಿಸಿದರು.

## ಕರ್ನಾಟಕ ರಾಜ್ಯ ಮಹಿಳಾ ವಿಶ್ವ ವಿದ್ಯಾಲಯದ 'ನಮ್ಮ ಮಹಿಳೆ ನಮ್ಮ ಹೆಮ್ಮೆ' ಯೋಜನೆ.

## 'ಖ್ಯಾತ ಹಿಂದುಸ್ತಾನಿ ಗಾಯಕಿ'

## ಶ್ರೀಮತಿ ನೀಲಾ ಎಂ. ಕೊಡ್ಲಿ



ಕರ್ನಾಟಕದ ಹಿಂದುಸ್ತಾನಿ ಮಹಿಳಾ ಸಂಗೀತ ಕಲಾವಿದೆಯರಲ್ಲಿ ಧಾರವಾಡದ ಖ್ಯಾತ ಹಿಂದುಸ್ತಾನಿ ಗಾಯಕಿ ಶ್ರೀಮತಿ ನೀಲಾ ಎಂ. ಕೊಡ್ಲಿ ಕರ್ನಾಟಕದ ಮಹಿಳಾ ಸಂಗೀತ-ನೃತ್ಯ ಸಾಧಕಿಯರಲ್ಲಿ ಉಲ್ಲೇಖನೀಯರಾಗಿದ್ದಾರೆ. ಜೈಪುರ-ಅತ್ರೌಲಿ ಘರಾಣೆಯ ಅದ್ವಿತೀಯ ಗಾಯಕ ಪಂ. ಮಲ್ಲಿಕಾರ್ಜುನ ಮನಸೂರ ಅವರ ಮಗಳು ಹಾಗೂ ಶಿಷ್ಯೆಯಾಗಿರುವ ಶ್ರೀಮತಿ ನೀಲಾ ಎಂ. ಕೊಡ್ಲಿಯವರು ಧಾರವಾಡ ಆಕಾಶವಾಣಿಯ ಶಾಸ್ತ್ರೀಯ ಹಾಗೂ ಸುಗಮ ಸಂಗೀತದ **'ಎ'** ಗ್ರೇಡ್ ಕಲಾವಿದರಾಗಿದ್ದಾರೆ. ಅವರು ಕರ್ನಾಟಕದ ಹಿಂದುಸ್ತಾನಿ ಸಂಗೀತದ 'ಮೊದಲ ವೀರಶೈವ – ಲಿಂಗಾಯತ ಮಹಿಳಾ ಕಲಾವಿದೆ' ಎಂಬುದು ಅಧ್ಯಯನ ದೃಷ್ಟಿಯಿಂದ ಗಮನಿಸಬೇಕಾದ ಮಾತು.

ಖ್ಯಾತ ಸಂಗೀತಗಾರರ ಮಗಳಾಗಿ, ಆದರ್ಶ ಗೃಹಿಣಿಯಾಗಿ, ಸಂಸಾರದ ಜವಾಬ್ದಾರಿಯೊಂದಿಗೆ ಸಂಗೀತ ಸಾಧನೆ ಗೈಯುತ್ತ, ಪತಿ ಹಾಗೂ ಮಕ್ಕಳ ಯೋಗಕ್ಷೇಮ ನೋಡುತ್ತ, ಎಡಗೈಯಲ್ಲಿ ಸೌಟು, ಬಲಗೈಯಲ್ಲಿ ತಂಬೂರಿ ಹಿಡಿದು ದಿನಕ್ಕೆ ಹತ್ತಾರು ತಾಸು ರಿಯಾಜ್ ಮಾಡುತ್ತ **'ಸ್ವರ ಸಂಸಾರ'**ವನ್ನೂ ಸಮನಾಗಿ ನಡೆಸುತ್ತಿರುವ ಶ್ರೀಮತಿ ನೀಲಾ ಅವರ ಸಾಧನೆ ಮಹಿಳೆಯರಿಗೊಂದು ಮಾದರಿ.

**ಜನನ-ಮನೆತನ**

ಶ್ರೀಮತಿ ನೀಲಾ ಎಂ. ಕೊಡ್ಲಿಯವರು ಜನಿಸಿದ್ದು ಧಾರವಾಡದಲ್ಲಿ. **೧೯೪೫ರ ಡಿಸೆಂಬರ್ ೩೦**ರಂದು. ತಂದೆ ಪದ್ಮವಿಭೂಷಣ ಪಂ. ಮಲ್ಲಿಕಾಜುನ ಮನಸೂರು, ತಾಯಿ ಶ್ರೀಮತಿ ಗಂಗಮ್ಮ ವಿಖ್ಯಾತ ಸಂಗೀತಗಾರರ ಮಗಳಾಗಿ ಜನಿಸಿದ ಶ್ರೀಮತಿ ನೀಲಾ ಅವರಿಗೆ ಎಳವೆಯಲ್ಲಲಿಯೇ ಸಂಗೀತದ ಒಲವು ಬೆಳೆಯಿತು. ಮನೆಯಲ್ಲಿ ನಿತ್ಯ ತಂದೆಯವರ ಸಂಗೀತದ ರಿಯಾಜ್. ಹೆಸರಾಂತ ಸಂಗೀತಗಾರರು ತಂದೆಯವರಿಗೆ ಭೇಟಿಯಾಗಲು ಬಂದು ಸಂಗೀತ ಕುರಿತು ಚರ್ಚಿಸುವ, ಶಿಷ್ಯರಿಗೆ ಸಂಗೀತ ಪಾಠ ಹೇಳಿಕೊಡುವ ಕಾರ್ಯ ನಿತ್ಯದ ದಿನಚರಿ. ಸದಾಕಾಲ ಕಿವಿಗಳಿಗೆ ಸ್ವರಗಳ ಝೇಂಕಾರ. ಹಗಲು–ರಾತ್ರಿ ಸಂಗೀತದ ಆರಾಧನೆ. ಇಂತಹ ಸ್ವರ–ಸಂಸಾರದಲ್ಲಿ ಡಾ. ಮಲ್ಲಿಕಾರ್ಜುನ ಮನಸೂರ ಅವರ ಏಳು ಜನ ಹೆಣ್ಣು ಮಕ್ಕಳಲ್ಲಿ ಎರಡನೆಯ ಮಗಳಾಗಿ ಜನಿಸಿದ ಶ್ರೀಮತಿ ನೀಲಾ (ನೀಲಮ್ಮ) ಅವರಿಗೆ ಕಂಠಸಿರಿ ಹುಟ್ಟಿನೊಂದಿಗೆ ಬಳುವಳಿಯಾಗಿ ಬಂದಿತ್ತು.

ಶ್ರೀಮತಿ ನೀಲಾ ಅವರು ಹತ್ತು ವರ್ಷದ ಬಾಲಕಿಯಾಗಿದ್ದಾಗ ಅವರ ದೊಡ್ಡಪ್ಪ. ಖ್ಯಾತ ರಂಗನಟ ಹಾಗೂ ವಿಖ್ಯಾತ ಹಾರ್ಮೋನಿಯಂವಾದಕ ಪಂ. ಬಸವರಾಜ ಮನಸೂರ ಅವರಿಂದ ಸಂಗೀತ ಶ್ರೀಕಾರ ದೊರೆಯಿತು. ನಾಲ್ಕಾರು ವರ್ಷ ಸಂಗೀತ ತರಬೇತಿ ನಡೆಯಿತು. ಅತ್ತ ಶಾಲೆಗೆ ಹೋಗುತ್ತ ಇತ್ತ ಸಂಗೀತ ಕಲಿಯುತ್ತ ನೀಲಾ ಅವರು ತಮ್ಮ ಬಾಲ್ಯ ಕಳೆದರು.

ದೊಡ್ಡಪ್ಪ ಬಸವರಾಜ ಮನಸೂರ ಅವರಿಂದ ಸಂಗೀತದ ಶ್ರೀಕಾರ ಪಡೆದುಕೊಂಡ ನಂತರ ಶ್ರೀಮತಿ ನೀಲಾ ಅವರು ತಮ್ಮ ತಂದೆ ಪಂ. ಮಲ್ಲಿಕಾರ್ಜುನ ಮನಸೂರ ಅವರಲ್ಲಿ ವಿಧಿವತ್ತಾಗಿ ಜೈಪುರ–ಅತ್ರೌಲಿ ಘರಾಣೆಯ ಸಂಗೀತದ ತಾಲೀಮು ಪಡೆದುಕೊಂಡರು. ಜೈಪುರ ಘರಾಣೆಯ ವಿಶಿಷ್ಟ ಗಾಯಕಿಯನ್ನು ಅವರು ಕರಗತ ಮಾಡಿಕೊಂಡಿದ್ದಾರೆ. ತಂದೆಯವರಿಂದ ಸಂಗೀತ ಪಾಠ ಹೇಳಿಸಿಕೊಂಡು ನಿತ್ಯ ರಿಯಾಜ್‌ದಲ್ಲಿ ತೊಡಗುತ್ತಿದ್ದ ಅವರು ಆಗಾಗ ತಂದೆಯ ಸಂಗೀತ ಕಚೇರಿಯಲ್ಲಿ ತಂಬೂರಿ ಸಾಥ್ ಮಾಡಿದ್ದಾರೆ.

### ಸಂಗೀತ ರತ್ನ ಪದವಿ

**೧೯೭೬**ರಲ್ಲಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ ಸ್ನಾತಕೋತ್ತರ ಸಂಗೀತ ವಿಭಾಗ ಪ್ರಾರಂಭಿಸಿತು. ಅದರ ಪ್ರಥಮ ಗೌರವ ನಿರ್ದೇಶಕರಾಗಿ ಡಾ. ಮಲ್ಲಿಕಾರ್ಜುನ ಮನಸೂರ ಅವರನ್ನು ನಿಯುಕ್ತಗೊಳಿಸಿತು. ಆ ದಿನಗಳಲ್ಲಿ ಪದ್ಮ ವಿಭೂಷಣ ಡಾ.ಗಂಗೂಬಾಯಿ ಹಾನಗಲ್, ಪದ್ಮಭೂಷಣ ಪಂ. ಬಸವರಾಜ ರಾಜಗುರು ಮುಂತಾದ ಹಿಂದುಸ್ತಾನಿ ಸಂಗೀತದ ದಿಗ್ಗಜರು ಸ್ನಾನಕೋತ್ತರ ಸಂಗೀತ ವಿಭಾಗದಲ್ಲಿ ಸಂದರ್ಶನ ಪ್ರಾಧ್ಯಾಪಕರಾಗಿದ್ದರು. ಸಂಗೀತಾಸಕ್ತರಿಗಾಗಿ ಆರು ವರ್ಷಗಳ ಅವಧಿಯ **'ಸಂಗೀತ ರತ್ನ'**ವೆಂಬ ಸ್ನಾತಕೋತ್ತರ ಪದವಿಗೆ ತತ್ಸಮಾನವಾದ

ಕೋರ್ಸನ್ನು ಡಾ. ಮನಸೂರ ಅವರು ಪ್ರಾರಂಭಿಸಿದರು. ಶ್ರೀಮತಿ ನೀಲಾ ಅವರು ಆರು ವರ್ಷಗಳ ದೀರ್ಘವಾದ ಸಂಗೀತ ಅಭ್ಯಾಸಮಾಡಿ ಕರ್ನಾಟಕ ವಿಶ್ವವಿದ್ಯಾಲಯದಿಂದ **'ಸಂಗೀತ ರತ್ನ' ೧೯೮೦** ರಲ್ಲಿ ಪದವಿಯನ್ನು ಪಡೆದರು.

**ಆದರ್ಶ ಗೃಹಿಣಿ**

ಶ್ರೀಮತಿ ನೀಲಾ ಅವರ ದಾಂಪತ್ಯ ಜೀವನ ತುಂಬ ಸಮೃದ್ಧ ಹಾಗು ಸಂತೃಪ್ತ. ಶ್ರೀಮತಿ ನೀಲಾ ಅವರ ಪತಿ ಡಾ. ಎಂ. ಸಿ. ಕೊಟ್ಲಿಯವರು ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾಗಿ, ವಿಭಾಗದ ಮುಖ್ಯಸ್ಥರಾಗಿ ನಿವೃತ್ತಿಹೊಂದಿ ಈಗ ಧಾರವಾಡದ ತಮ್ಮ ಸ್ವಗೃಹ **'ಭಾಗ್ಯಶ್ರೀ'** ಯಲ್ಲಿ ವಿಶ್ರಾಂತಿ ಜೀವನ ನಡೆಸುತ್ತಿದ್ದಾರೆ. ಮಡದಿ ಶ್ರೀಮತಿ ನೀಲಾ ಅವರ ಸಂಗೀತ ಸಾಧನೆಗೆ, ಕಲಾಭಿವೃದ್ಧಿಗೆ ತುಂಬಾ ಪ್ರೋತ್ಸಾಹ, ಪ್ರೇರಣೆ ನೀಡುತ್ತಿದ್ದಾರೆ. ನನ್ನ ಸಂಗೀತ ಸಾಧನೆ ಮತ್ತು ಅಭಿವೃದ್ಧಿಗೆ ನನ್ನ ಪತಿ ದೇವರ ಪ್ರೋತ್ಸಾಹ ಮುಖ್ಯ ಕಾರಣ ಎಂದು ಶ್ರೀಮತಿ ನೀಲಾ ಅವರು ಹೇಳುವ ಮಾತು ಆದರ್ಶ ದಂಪತಿಗಳ ನಿಜವಾದ ಮಾತಾಗಿದೆ. ಗಂಡ–ಮಕ್ಕಳ ಯೋಗ ಕ್ಷೇಮ ನೋಡಿಕೊಂಡು ನಿತ್ಯ ಹತ್ತಾರು ತಾಸು ಈಗಲೂ ರಿಯಾಜ್ ಮಾಡುವುದನ್ನು ನೋಡಿದರೆ ಮನವರಿಕೆಯಾಗುತ್ತದೆ.

ಡಾ. ಎಂ.ಸಿ. ಕೊಡ್ಲಿಯವರು ಅರ್ಥಶಾಸ್ತ್ರ ವಿಷಯದಲ್ಲಿ ತಜ್ಞರು ಮೇಧಾವಿಗಳು. ಅವರು ಮೂಲತಃ ಲಕ್ಷ್ಮೇಶ್ವರ ಹತ್ತಿರದ ಸುಲ್ತಾನ ಪೂರದವರು. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಅನೇಕ ವರ್ಷ ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿ ಕೆಲಸ ಮಾಡಿದವರು. ಅವರು ಕರ್ನಾಟಕ ವಿಶ್ವವಿದ್ಯಾಲಯದ ಹಿಂದಿನ ಕುಲಪತಿಗಳಾಗಿದ್ದ ಡಾ. ಡಿ. ಎಂ. ನಂಜಂಡಪ್ಪನವರ ಮಾರ್ಗದರ್ಶನದಲ್ಲಿ ಅರ್ಥಶಾಸ್ತ್ರದಲ್ಲಿ ಪಿ. ಎಚ್. ಡಿ. ಮಾಡಿ ಡಾಕ್ಟರೇಟ್ ಪಡೆದವರು. ಡಾ. ನಂಜುಂಡಪ್ಪನವರು ಅಚ್ಚುಮೆಚ್ಚಿನ ವಿದ್ಯಾರ್ಥಿಗಳಲ್ಲೊಬ್ಬರು ಶಿಸ್ತಿನ ಸಿಪಾಯಿಗಳು.

ಶ್ರೀಮತಿ ನೀಲಾ ಹಾಗೂ ಡಾ. ಎಂ.ಸಿ.ಕೊಡ್ಲಿ ದಂಪತಿಗಳಿಗೆ ಎರಡು ಗಂಡು ಮಕ್ಕಳು. ಹಿರಿಯ ಮಗ ಅರುಣ ಕೊಡ್ಲಿ ಎಮ್.ಎಸ್.ಸಿ., ಎಮ್.ಫಿಲ್ ಪದವೀಧರ. ಭುವಿಜ್ಞಾನ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದವರು. ಅವರು ಈಗ ಇಲಕಲ್ಲಿನಲ್ಲಿ ನೆಲೆಸಿ ಗ್ರಾನೇಟ್ ಉದ್ಯಮದಲ್ಲಿ ನಿರತರಾಗಿ ಅವರಲ್ಲಿ ಅಪಾರ ಖ್ಯಾತಿ ಪಡೆದಿದ್ದಾರೆ. ಎರಡನೇಯ ಮಗ ಶ್ರೀ ಉದಯ ಕೊಡ್ಲಿ ಧಾರವಾಡದ ಟೈವಾಕ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ.

**ವಚನ ಗಾಯನ**

ಶ್ರೀಮತಿ ನೀಲಾ ಎಂ.ಕೊಡ್ಲಿಯವರು ಖಯಾಲ್ ಹಾಡುಗಾರಿಕೆಯಂತೆ ಬಸವಾದಿ ಶಿವಶರಣರ ವಚನಗಳನ್ನು

ಸುಶ್ರಾವ್ಯವಾಗಿ ಹಾಡುತ್ತಾರೆ. ಅವರು ಹಾಡುವ ವಚನಗಾಯನ ಕೇಳುವುದೇ ಒಂದು ಆನಂದ. ತಂದೆಯವರ ಮಾರ್ಗದರ್ಶನದಲ್ಲಿ ಖಯಾಲ್ ಹಾಗೂ ವಚನ ಗಾಯನದ ಪರಂಪರೆಯನ್ನು ಅವರು ಮುಂದುವರೆಸಿಕೊಂಡು ಬರುತ್ತಿದ್ದಾರೆ.

ಶ್ರೀಮತಿ ನೀಲಾ ಎಂ. ಕೊಡ್ಲಿಯವರು ಹಾಡಿದ **'ವಚನಾಮೃತ'** ಎಂಬ ಸಿ.ಡಿ. ಬಂದಿದೆ. ಅದರಲ್ಲಿ ಅವರು ಬಸವಣ್ಣ ಅಕ್ಕಮಹಾದೇವಿ, ನೀಲಾಂಬಿಕೆ, ಮುಪ್ಪಿನ ಷಡಾಕ್ಷರಿ ಅವರು ರಚಿಸಿರುವ ವಚನ, ಸ್ವರವಚನಗಳನ್ನು ಹಾಡಿದ್ದಾರೆ. ಕನ್ನಡದ ವಚನ, ಸ್ವರವಚನಗಳ ಧ್ವನಿ ಸುರುಳಿ, ಸಿ.ಡಿ.ಗಳಲ್ಲಿ **'ವಚನಾಮೃತ'** ವಿಶಿಷ್ಟ ಮೆರುಗನ್ನು ಪಡೆದಿದೆ.

**ಆಕಾಶವಾಣಿ 'ಎ' ಗ್ರೇಡ್ ಕಲಾವಿದೆ**

ಶ್ರೀಮತಿ ನೀಲಾ ಎಂ.ಕೊಡ್ಲಿಯವರು ಧಾರವಾಡ ಆಕಾಶವಾಣಿಯ ಹಿಂದುಸ್ತಾನಿ ಶಾಸ್ತ್ರೀಯ ಹಾಗೂ ಸುಗಮ ಸಂಗೀತದ **'ಎ'** ಗ್ರೇಡ್ ಕಲಾವಿದರಾಗಿ ಕಳೆದ **೩೫** ವರ್ಷಗಳಿಂದ ನಿರಂತರವಾಗಿ ಸಂಗೀತ ಕಾರ್ಯಕ್ರಮ ನೀಡುತ್ತ ಬಂದಿದ್ದಾರೆ. ಧಾರವಾಡ ಆಕಾಶವಾಣಿಯಲ್ಲದೆ ಮಂಗಳೂರು, ಗುಲಬರ್ಗಾ, ಮೈಸೂರು ಮತ್ತು ಬೆಂಗಳೂರು ಆಕಾಶವಾಣಿ ಕೇಂದ್ರಗಳಿಂದ ತಮ್ಮ ಶಾಸ್ತ್ರೀಯ ಹಾಗೂ ಸುಗಮ ಸಂಗೀತವನ್ನು ಸಾದರಪಡಿಸಿದ್ದಾರೆ. ಮುಂಬೈ, ದೆಹಲಿ, ಪುಣೆ ಹಾಗೂ ಗೋವಾ ಮುಂತಾದ ಮಹಾನಗರಗಳಲ್ಲಿ ಸಂಗೀತ ಕಾರ್ಯಕ್ರಮ ನೀಡಿ ಶ್ರೋತೃಗಳ ಮನಸ್ಸಿಗೆ ಆನಂದ ನೀಡಿದ್ದಾರೆ. ಬೆಂಗಳೂರು ಹಾಗೂ ಹೈದ್ರಾಬಾದ್ ದೂರದರ್ಶನ ಕೇಂದ್ರಗಳಿಂದ ಅವರು ತಮ್ಮ ಸಂಗೀತ ಕಾರ್ಯಕ್ರಮ ನೀಡಿದ್ದಾರೆ. **೧೯೮೩**ರಲ್ಲಿ ಆಕಾಶವಾಣಿಯ ರಾಷ್ಟ್ರೀಯ ಸಂಗೀತ ಕಾರ್ಯಕ್ರಮ ನೀಡುವುದು ಸಂಗೀತಗಾರರ ಒಂದು ಹೆಮ್ಮೆಯ ಹಾಗೂ ಗೌರವದ ಸಂಕೇತವೆಂದೇ ಹೇಳಬೇಕು.

# ಲಕ್ಷ್ಮೀ ಜಿ ಭಾವೆ.

ಇವರು **೨.೨.೧೯೧೪**ರಲ್ಲಿ ಜನಿಸಿದರು. ತಂದೆ–ಬಾಲಕೃಷ್ಣ ಲಿಮಯೆ. ತಾಯಿ ರಾಧಾಬಾಯಿ ಲಿಮಯೆ. ನೆಲೆಸಿದ್ದು ಬೆಂಗಳೂರು. ಪತಿ – ಗೋವಿಂದ ಭಾವೆ.

ಪ್ರಶಸ್ತಿ – ಕರ್ನಾಟಕ ಸಂಗೀತ ನೃತ್ಯ ಅಕಾಡಮಿ ಪ್ರಶಸ್ತಿ.

ನಿಧನ – ೨೫–೫–೧೯೮೬.

ಇವರು ಮೊದಲು ಮಹಾರಾಷ್ಟ್ರದಲ್ಲಿ ಇದ್ದರು. ಸಂಗೀತೊದ್ಧಾರಕ ವಿಷ್ಣುದಿಗಂಬರ ಪಲುಸ್ಕರ ಇವರ ಹತ್ತಿರ ಸಂಗೀತ ಶಿಕ್ಷಣ ಪಡೆದು, ಗುರುಗಳ ಆಶೀರ್ವಾದ ಹಾಗೂ ಮಾರ್ಗದರ್ಶನ ಪಡೆದು ಮಹಾರಾಷ್ಟ್ರದಿಂದ ಬೆಂಗಳೂರಿಗೆ ಬಂದು ನೆಲಸಿದರು. ಬೆಂಗಳೂರಿನಲ್ಲಿ ಕರ್ನಾಟಕ ಸಂಗೀತದ ಕಂಪು ಹರಡಿತ್ತು. ಹಿಂದುಸ್ತಾನಿ ಸಂಗೀತವೇ ಗೊತ್ತಿಲ್ಲದ ಪ್ರದೇಶದಲ್ಲಿ ಮೊಟ್ಟಮೊದಲು ಹಿಂದೂಸ್ತಾನಿ ಸಂಗೀತವನ್ನು ಮಹಾನಗರ ಬೆಂಗಳೂರಿನಲ್ಲಿ ಪರಿಚಯಿಸಿ ಭಾರತದ ದಕ್ಷಿಣ ಭಾಗದಲ್ಲಿ ಅದಕ್ಕೆ ಭದ್ರ ನೆಲೆಯೊದಗಿಸಿದ ಸಂಗೀತ ದಂಪತಿಗಳಲ್ಲಿ ಶ್ರೀಮತಿ ಲಕ್ಷ್ಮೀ. ಜಿ. ಭಾವೆ ಅಗ್ರಗಣ್ಯರು ಇದಕ್ಕೆ ಬೆಂಬಲವಾಗಿ ಪತಿ ಶ್ರೀ ಗೋವಿಂದ ವಿಠಲ ಭಾವೆಯವರ ಸಹಕಾರ, ಕನ್ನಡಿಗರ ಪ್ರೋತ್ಸಾಹದ ಫಲವಾಗಿ ಬೆಂಗಳೂರಿನಲ್ಲಿ ಸರಸ್ವತಿ ಸಂಗೀತ ವಿದ್ಯಾಲಯ ಸ್ಥಾಪಿಸಿ ನೂರಾರು ಜನ ಆಸಕ್ತರಿಗೆ ಹಿಂದೂಸ್ತಾನಿ ಸಂಗೀತ ಧಾರೆಯೆರದ ಶ್ರೀಮತಿ ಲಕ್ಷ್ಮೀ ಜಿ ಭಾವೆ ಕರ್ನಾಟಕದ ಮಹಿಳಾ ಹಿಂದೂಸ್ತಾನಿ ಗಾಯಕಿಯರಲ್ಲಿ ಅಗ್ರಗಣ್ಯರು. ಇವರ ಪತಿ ಆಚಾರ್ಯ ಗೋವಿಂದ ವ್ಹಿ ಭಾವೆಯವರು ಮಹರ್ಷಿ ವಿಷ್ಣು ದಿಗಂಬರ ಪಲೂಸ್ಕರವರ ಶಿಷ್ಯರು. ಹೀಗಾಗಿ ಶ್ರೀಮತಿ ಲಕ್ಷ್ಮೀ ಜಿ ಯವರಿಗೆ ಪತಿಯಿಂದಲೇ ಸಂಗೀತ ಶಿಕ್ಷಣ ದೊರೆಕಿತು. ಗೋವಿಂದರವರು ಗದಗಿಗೆ ನಾಟಕವಾಡಲು ಹೋದಾಗ ಅಲ್ಲಿಯೇ ವೀರನಾರಾಯಣ ದೇವಾಲಯದಲ್ಲಿ ಸುಂದರಿ (ಲಕ್ಷ್ಮಿ)ರವರನ್ನು ನೋಡಿ ಇವಳನ್ನೆ ಮದುವೆ ಆಗುತ್ತೇನೆ ಅಂತಾ ಗರುಡ ಸದಾಶಿವರಾಯರ ಹತ್ತಿರ ಹೇಳಿದರು. ದಪ್ಪ ಉದ್ದ ಜಡೆಯ ಸುಂದರ **೧೬** ವರ್ಷದವಳು. ಗೋವಿಂದರವರಿಗೆ **೨೬** ವರ್ಷ. ಆದರೂ ಪಟ್ಟು ಹಿಡಿದು ಮದುವೆಯಾದರು.

ಮದುವೆಯ ನಂತರ ಪತಿಯ ತವರೂರಿಗೆ ಮದು ಮಕ್ಕಳು ಸಾಂಗ್ಲಿಗೆ ಹೋದಾಗ ಅಲ್ಲಿ, ಆ ಹಿರಿಯರು ನವದಂಪತಿಗಳನ್ನು ಒಳಕ್ಕೂ ಕರೆಯದೇ ಬಲವಂತದಿಂದ ಹಿಂದಕ್ಕೆ ಕಳುಹಿಸಿದರೂ ಹಿರಿಯರ ಅಸಾದರಣೆ ಮತ್ತು

ಉಪೇಕ್ಷೆಯಿಂದ ನೊಂದುಕೊಂಡು ಇನ್ನೊಮ್ಮೆ ಇಲ್ಲಿ ಕಾಲಿಡಬಾರದು ಎಂದು ನಿಶ್ಚಯಿಸಿ ಗುರು ವಿಷ್ಣು ದಿಗಂಬರ ಪಲುಸ್ಕರ್‌ರವರ ಆಸೆಯಂತೆ ಬೆಂಗಳೂರಿಗೆ ಬಂದು **೧೯೩೦**ರಲ್ಲಿ **"ಸರಸ್ವತಿ ಸಂಗೀತ ವಿದ್ಯಾಲಯ"** ವನ್ನು ಸ್ಥಾಪಿಸಿ ಈಗಲೂ ಸಾವಿರಾರು ವಿದ್ಯಾರ್ಥಿಗಳು ಸಂಗೀತ ಕಲಿಯುವಂತೆ ಮಾಡಿದ್ದಾರೆ.

ಆಗಿನ ದಿವಾನರಾಗಿದ್ದ ಮಿಜಾಂ ಇಸ್ಮಾಯಿಲ್ ಸಾಹೇಬರ ಪತ್ನಿಗೆ ಹಿಂದುಸ್ತಾನಿ ಸಂಗೀತ ಪಾಠ ಹೇಳುವ ಅವಕಾಶ ಸಿಕ್ಕಿತು. ದಿವಾನರು ಕಳಿಸಿದ ಕುದುರೆ ಸಾರೋಟಿನಲ್ಲಿ ಅವರ ಮನೆಗೆ ಹೋಗಿ ಪಾಠ ಮಾಡಿ ಬರುತ್ತಿದ್ದರು. ಆಗ ಕರ್ನಾಟಕ ಸಂಗೀತವನ್ನು ಮೆಚ್ಚುತ್ತಿದ್ದ ಮತ್ತು ಅದಕ್ಕೆ ಒಗ್ಗಿ ಹೋಗಿದ್ದ ಕನ್ನಡಿಗರ ಒಲವನ್ನು ಹಿಂದೂಸ್ತಾನಿ ಸಂಗೀತದ ಕಡೆಗೆ ಸೆಳೆಯುವುದು ಸುಲಭದ ಮಾತಾಗಿರಲಿಲ್ಲ. ಆದರೆ ನಮ್ಮ ಕನ್ನಡಿಗರ ವಿಶಾಲ ಮನೋಭಾವದವರು. ಜೊತೆಗೆ ಉದಾರಿಗಳು. ಒಳ್ಳೆಯದು ಎಲ್ಲಿಂದ ಬಂದರೂ ಸ್ವಾಗತ ಕೋರಲು ತಮ್ಮ ಮನದ ಬಾಗಿಲನ್ನು ಸದಾ ತೆರೆದಿಟ್ಟಿರುತ್ತಾರೆ. ಹೀಗಾಗಿ ಕನ್ನಡಿಗರು ಭಾವೆಯವರ ಬಳಿ ಸಂಗೀತ ಕಲಿಯಲಾರಂಭಿಸಿದರು. ಇವರ ಜೀವನ ತುಂಬಾ ಕಷ್ಟದಿಂದ ಕೂಡಿತ್ತು. ಸಂಗೀತ ವಿದ್ಯಾರ್ಥಿಗಳಿಂದ ಬಂದ ಫೀ ಯಿಂದಲೇ ದಿನ ನೂಕಬೇಕಾಗುತ್ತಿತ್ತು. ಮನೆ ಮನೆಗೆ ಹೋಗಿ ಪಾಠ ಮಾಡಿ ಬರುತ್ತಿದ್ದರು.

ಒಂದು ದಿನ ಶೇಷಾದ್ರಿ ಪುರದಲ್ಲಿ ಒಂದು ನಿವೇಶನದ ಹರಾಜು ನಡೆಯುತ್ತಿತ್ತು. ಲಕ್ಷ್ಮೀ ಜಿ ಯವರ ಪತಿಯವರು ತಮ್ಮ ಆಪ್ತ ಮಿತ್ರ ದಿವಾನ ಮಾಧವ ರಾಯರ ಸಹಾಯದಿಂದ ಆ ನಿವೇಶನವನ್ನು ತೆಗೆದುಕೊಂಡು ಅಲ್ಲಿ ಸಂಗೀತ ಪಾಠ ಮಾಡತೊಡಗಿದರು. ಅದೇ "ಸರಸ್ವತಿ ಸಂಗೀತ ವಿದ್ಯಾಲಯ" ಬೇರೆ ಬೇರೆ ಊರಿಗೆ ಹೋಗಿ ಲಕ್ಷ್ಮೀ ಜಿ ಯವರು ಮಗಳು ಶ್ಯಾಮಲೆಯ ಜೊತೆ ಸಂಗೀತ ಕಾರ್ಯಕ್ರಮ ಕೊಡುತ್ತಿದ್ದರು. ಅರಮನೆಯಲ್ಲೂ ಕಾರ್ಯಕ್ರಮ ನೀಡುತ್ತಿದ್ದರು. ದೊಡ್ಡ ಹಿಂದೂಸ್ತಾನಿ ಕಲಾವಿದೆಯಾಗಿ ರೂಪಗೊಂಡರು. ಇವರ ಮಾತು ಅರಮನೆಯಲ್ಲಿ ನಡೆಯುವಂತೆ ಮಾಡಿದ್ದೆ ಸಾಕ್ಷಿ.

ದೆಹಲಿಯಲ್ಲಿ **೧೯೬೦** ಅಕ್ಟೋಬರದಲ್ಲಿ ನಡೆಯುವ ಯುವ ಸಂಗೀತೋತ್ಸವಕ್ಕೆ ಮಗಳು ಶ್ಯಾಮಲಾ ಆಯ್ಕೆಯಾಗಿದ್ದರು. ಆದರೆ ಪತಿಯ ಆರೋಗ್ಯ ಸರಿ ಇರಲಿಲ್ಲ. ಆದರೂ ಪತಿಯ ಒತ್ತಾಯದ ಮೇರೆಗೆ ಮಗಳನ್ನು ಕರೆದುಕೊಂಡೆ ಲಕ್ಷ್ಮಿ ಜಿ ದೇಹಲಿಗೆ ಹೋದರು. ಅಲ್ಲಿ ಮಗಳಿಗೆ ಪ್ರಥಮ ಬಹುಮಾನ ಗಳಿಸಿ ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದ ಅವರಿಂದ ಬಂಗಾರದ ಮೆಡಲನ್ನು ಗಳಿಸಿ ಸಂತೋಷದಿಂದ ಪತಿಗೆ ತಿಳಿಸಲು ಬಂದಾಗ ರೆಡಿಯೋದಲ್ಲಿ ಮಗಳಿಗೆ ಬಹುಮಾನ ಬಂದ ವಿಚಾರ ಕೇಳಿ ಸಂತೋಷದಿಂದ ನಿಧನರಾಗಿದ್ದರು. ತಾಯಿ ಮಗಳಿಬ್ಬರು ಕೊನೆಗಳಿಗೆಯಲ್ಲಿ ತಾವಿಲ್ಲದೇ ಹೋಯಿತಲ್ಲಾ ಅಂತಾ ಕೊರಗಿದರು. ಸಾಧ್ವಿಮಣಿ ಇದೇ ಕೊರಗಿನಿಂದ ಆರೋಗ್ಯ ಹದಗೆಟ್ಟು **೧೯೮೬**ರಲ್ಲಿ ತೀರಿಕೊಂಡರು.

# ಶ್ರೀಮತಿ ಲಲಿತಾ ಉಭಯಕರ

ಶ್ರೀಮತಿ ಲಲಿತಾ ಉಭಯಕರು ಕರ್ನಾಟಕದ ಹಿಂದೂಸ್ತಾನಿ ಸಂಗೀತದ ಹಿರಿಯ ಮಹಿಳಾ ಕಲಾವಿದರು. ಅವರು ಜನಿಸಿದ್ದು **೧೫-೧-೧೯೨೮** ರಂದು ಮಂಗಳೂರಿನಲ್ಲಿ. ಅಲ್ಲಿಯ ಬಿ.ಎ ಪದವಿ ಪಡೆಯುತ್ತಾ ತಾಯಿಯಿಂದ ಸಂಗೀತ ಶಿಕ್ಷಣವನ್ನು ಬಾಲ್ಯದಿಂದಲೇ ಪಡೆದರು.

ಇವರು ಆಗ್ರಾ ಘರಾಣೆಯ ಗಾಯಕಿ. ಇವರು ಹೆಚ್ಚಿನ ಸಂಗೀತ ಶಿಕ್ಷಣ ಶ್ರೀಯುತ ಚಿದಾನಂದ ನಗರಕರ್, ರಾಮರಾವ್ ನಾಯಕ ಇವರಲ್ಲಿ ಪಡೆದರು.

**೧೯೫೦**ರಲ್ಲಿ ಬೆಂಗಳೂರಿನ ಸಂಗೀಗತ ಸಭೆಯ ಆಶ್ರಯದಲ್ಲಿ ಮತ್ತು ಖ್ಯಾತ ಪಿಟೀಲು ವಾದಕ ಯಹೋದಿ ಮೆನುಹಿನರವರ ಸಮ್ಮುಖದಲ್ಲಿ ಇವರ ಸಂಗೀತ ಕಛೇರಿ ನಡೆಯಿತು. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ ಹಾಗೂ ಮುಂಬಯಿಯಲ್ಲಿ ನಡೆದ ರಾಜ್ಯ ಮಟ್ಟದ ಸಂಗೀತೋತ್ಸವದಲ್ಲಿ ಕಛೇರಿ ನೀಡಿದ್ದಾರೆ.

ಆಕಾಶವಾಣಿಯಿಂದ **೧೯೬೦** ರಿಂದ ಇವರ ಸಂಗೀತ ಪ್ರಸಾರವಾಗುತ್ತಿವೆ. **೧೯೬೨** ರಲ್ಲಿ ಹೈದಾರಾಬಾದಿನಲ್ಲಿ ನಡೆದ ಗಂಧರ್ವ ವಿದ್ಯಾಲಯದ ರಾಷ್ಟ್ರ ಮಟ್ಟದ ಸಂಗೀತೋತ್ಸವ, ಕಲ್ಕತ್ತೆಯಲ್ಲಿ ನಡೆದ ತಾನಸೇನ ಉತ್ಸವ, ಆಕಾಶವಾಣಿಯ ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಮುಂಬೈಯಲ್ಲಿ **೧೯೬೯**ರಲ್ಲಿ ನಡೆದ ಮೆಹಫಿಲ್, ಬೆಂಗಳೂರು ಗಾಯನ ಸಮಾಜ ಮಲ್ಲೇಶ್ವರಂ ಸಂಗೀತ ಸಭೆ, ನಾಗಪುರ ರಸಿಕ ಸಭೆಗಳಲ್ಲಿ ಕಚೇರಿ ಮಾಡಿದ ಖ್ಯಾತಿ ಇವರದು.

ರಷ್ಯಾ ಮತ್ತು ಪಾಶ್ಚಾತ್ಯ ದೇಶಗಳಿಗೆ ಭಾರತದ ಸಾಂಸ್ಕೃತಿಕ ಗೋಷ್ಠಿಯ ಸದಸ್ಯರಾಗಿ ತೆರಳಿ ಕಚೇರಿಗಳನ್ನು ನೀಡಿದ್ದಾರೆ.

ಬೆಂಗಳೂರಿನಲ್ಲಿ **"ಸ್ಮೃತಿ ನಂದನ ಕಲ್ಚರಲ್ ಸೆಂಟರ್"** (S.N.C.C) ಎಂಬ ಸಾಂಸ್ಕೃತಿಕ ಸಂಸ್ಥೆಯನ್ನು ಹುಟ್ಟು ಹಾಕಿ ಸಂಗೀತ ಕಲೆಯ ವಿಕಾಸ ಹಾಗೂ ಅಭಿವೃದ್ಧಿ ಕಾರ್ಯ ಮಾಡುತ್ತ **"ನಾದ ದಾಸೋಹ"** ಕಾಯಕದಲ್ಲಿ ನಿರತರಾಗಿದ್ದಾರೆ. ಶ್ರೀಮತಿ ಲಲಿತಾ ಉಭಯಕರ್‌ರವರಿಗೆ ಕರ್ನಾಟಕ ಸಂಗೀತ ನೃತ್ಯ ಅಕ್ಯಾಡಮಿಯ **"ಕರ್ನಾಟಕ ಕಲಾ ತಿಲಕ"** ಪ್ರಶಸ್ತಿ ನೀಡಿ ಗೌರವಿಸಿದೆ. **(೧೯೮೬-೧೯೮೭)**

## ಡಾ॥ ಸುಲಭಾ ದತ್ತ ನೀರಲಗಿ ಅಥವಾ ಡಾ॥ ಸುಲಭಾ ಡಂಬಳ



ಶ್ರೀಮತಿ ಸುಲಭಾ ಇವರ ಜನ್ಮವು ಬೆಳಗಾಂವಿ ಜಿಲ್ಲೆಯ ಉದಗಟ್ಟಿ ಗ್ರಾಮದಲ್ಲಿ **೦೩-೦೬-೧೯೫೬**ರಲ್ಲಿ ಆಯಿತು. ಇವರು ಅಣ್ಣ ತಮ್ಮ ಅಕ್ಕ ತಂಗಿಯರ ತುಂಬು ಕುಟುಂಬದಿಂದ ಬಂದವರು. ತಂದೆ ತಾಯಿ ಅಣ್ಣಂದಿರ, ಅಕ್ಕ ತಂಗಿಯರ ಪ್ರೀತಿಯಲ್ಲಿ ಬೆಳೆದ ಸುಲಭಾರವರು ಸಹಜವಾಗಿಯೆ ಭಾವನಾ ಜೀವಿ. ಎಲ್ಲರಿಗೂ ಅಕ್ಕರತೆ ಪ್ರೀತಿ ತೋರುವ ಮನಸ್ಸಿನವರು.

ಇವರು ಸಂಗೀತದತ್ತ ಒಲವು ತೋರಿಸಿದಾಗ ಮನೆಯಲ್ಲಿ ತುಂಬು ಪ್ರೋತ್ಸಾಹ ದೊರೆಕಿತು. ಇವರು ಚಿಕ್ಕ ವಯಸ್ಸಿನಲ್ಲಿಯೆ ನೃತ್ಯ  ಮತ್ತು ಸಂಗೀತ ಕಲಿಯುತ್ತಿದ್ದರು. (ಸಂಗೀತ ಗುರುಗಳಾದ) ನಾರಾಯಣ ಮುಜುಂದಾರ ಮತ್ತು ನಂತರ ದಂಡಾಪುರ ಇವರ ಹತ್ತಿರ ಸಂಗೀತ ಶಿಕ್ಷಣವಾಗಿತ್ತು. ಮುಂದೆ ಇವರು ಬಿ.ಎ.ನಲ್ಲಿ ಮೇಜರ್ ಅರ್ಥ ಶಾಸ್ತ್ರ ಮತ್ತು ಮೈನರ್ ವಿಷಯ ಸಂಗೀತವನ್ನು ತೆಗೆದುಕೊಂಡಿದ್ದರು. ನಂತರ **೧೯೭೮**ರಲ್ಲಿ ಕರ್ನಾಟಕ ವಿಶ್ವ ವಿದ್ಯಾಲಯವು ಸಂಗೀತ ವಿಷಯವನ್ನು ಸ್ನಾತಕೋತ್ತರ ಪದವಿಯಲ್ಲಿ (ಎಮ್ ಮ್ಯೂಜಿಕ್) ಯನ್ನು ಪ್ರಾರಂಭಿಸಿದರು. ಅಲ್ಲಿಯ ಸಂಗೀತ ವಿಭಾಗದ ಮುಖ್ಯಸ್ಥರಾಗಿ ಡಾ. ಮಲ್ಲಿಕಾರ್ಜುನ ಮನಸೂರ ಇವರು ಮೊದಲಿಗರಾಗಿದ್ದರು. ಅದೇ ವರ್ಷ ಸುಲಭಾರವರು (ಎಮ್, ಮ್ಯೂಜಿಕ್)ಗೆ ಹಾಜರಾಗಿದ್ದರು. ಅಲ್ಲಿ ಇವರಿಗೆ (ಸಂಗೀತ ವಿಭಾಗದಲ್ಲಿ) ಬಸವರಾಜ ರಾಜಗುರು, ಮಲ್ಲಿಕಾರ್ಜುನ ಮನಸೂರ, ಪಂಚಾಕ್ಷರಿ ಮತ್ತಿಗಟ್ಟಿ, ಸಂಗಮೇಶ್ವರ ಗುರವ, ಜಾನಕಿ ಅಯ್ಯರ್ ಇವರಲ್ಲದೆ ಗಂಗೂಬಾಯಿ ಹಾನ್‌ಗಲ್ ಇಂತಹವರ ಹತ್ತಿರ ಸಂಗೀತ ಕಲಿಯುವ ಸುಯೋಗ ಇವರದಾಗಿತ್ತು. ವಿಶ್ವವಿದ್ಯಾಲಯದ ಮೊದಲನೇ ತಂಡದಿಂದ ಸುಲಭಾರವರು ಎಮ್ ಮ್ಯೂಜಿಕ್ ಪದವಿಯನ್ನು ಪಡೆದವರಾಗಿದ್ದಾರೆ. ಗಂಗೂಬಯಿ ಹಾನ್‌ಗಲ್ ಅವರ ಕಿರಾಣಾ ಘರಾಣಾದ ಬಗ್ಗೆ

ವಿಶೇಷ ಆಸಕ್ತಿ ಹೊಂದಿದ ಸುಲಭಾರವರಿಗೆ ಗಂಗೂಬಾಯಿಯವರ ಹತ್ತಿರ ಹೆಚ್ಚಿನ ಸಂಗೀತ ಕಲಿಯಲು ಆಸಕ್ತಿಯಾಯಿತು. ಸುಲಭಾರವರು ಅಣ್ಣನಾದ ಹನುಮಂತ ಡಂಬಳ ಇವರ ಜೊತೆ ಹೋಗಿ ಗಂಗೂಬಾಯಿಯವರಲ್ಲಿ ತಮ್ಮ ಆಸೆಯನ್ನು ವ್ಯಕ್ತಪಡಿಸಿದರು.

ಆದರೆ ಅಷ್ಟು ಬೇಗನೇ ಯಾವ ಗುರುಗಳೂ ಒಪ್ಪುವುದಿಲ್ಲ. ಮತ್ತು ಒಳ್ಳೆಯ ಗುರುಗಳು ಸಿಗಲು ಪೂರ್ವಜನ್ಮದ ಪುಣ್ಯ ಮತ್ತು ತಂದೆ ತಾಯಿಗಳ ಆಶೀರ್ವಾದವಿದ್ದರೆ ಮಾತ್ರ ಸಾಧ್ಯ. ಸುಲಭಾರವರಿಗೆ ಇವೆರಡೂ ಇದ್ದುದರಿಂದ ಒಳ್ಳೆ ಗುರುಗಳು ಸಿಕ್ಕರು. ಮತ್ತು ಇವರಿಗೆ ಗಂಗೂಬಾಯಿಯವರು *"ಸಂಗೀತ ಕಲಿಯಲು ಬೇಕಾದ ನಿಷ್ಠೆ, ಸತತ ಪರಿಶ್ರಮ, ಮನೋಸ್ಥೈರ್ಯ, ತಾಳ್ಮೆ ನಿನ್ನಲ್ಲಿದ್ದರೆ ಮಾತ್ರ ಸಂಗೀತ ಕಲಿಸುವೆ"* ಎಂದರು. ಅಲ್ಲಿಯೇ ಇದ್ದ ಅವರ

ಪುತ್ರಿ ಕೃಷ್ಣಾ ಹಾನಗಲ್‌ರವರು ಸುಲಭಾರವರಲ್ಲಿದ್ದ ಸಂಗೀತ ಆಸಕ್ತಿ ಗುರುತಿಸಿ ತಮ್ಮ ತಾಯಿಗೆ ಸಂಗೀತ ಕಲಿಸುವಂತೆ ಹೇಳಿದರು. ಮತ್ತು ತಾವು ಕೂಡಾ ಅವಳಿಗೆ ಸಂಗೀತ ಕಲಿಸಲು ತಾಯಿಗೆ ಸಹಾಯ ಮಾಡುವೆನೆಂದರು.

ಅಲ್ಲಿಂದ ಸುಲಭಾರವರ ಸಂಗೀತ ಪಯಣ ಪ್ರಾರಂಭವಾಯಿತು. ದಿನವೂ ಧಾರವಾಡದಿಂದ ಹುಬ್ಬಳ್ಳಿಗೆ ಹೋಗಿ ಬಂದು ಗುರುಗಳು ಹೇಳಿಕೊಟ್ಟದ್ದನ್ನು ಅಲ್ಲಿಯೇ ಅಭ್ಯಾಸ ಮಾಡುತ್ತಿದ್ದರು. ಒಂದೇ ರಾಗವನ್ನು ಸತತ ಐದಾರು ತಿಂಗಳು ಹೇಳಿಕೊಡುತ್ತಿದ್ದರಲ್ಲದೇ ಪರಿಣಿತಿ ಸಾಧಿಸುವವರೆಗೆ ಆ ರಾಗವನ್ನೇ ಮುಂದುವರೆಸುತ್ತಿದ್ದರು. ಒಮ್ಮೊಮ್ಮೆ ಗುರುಗಳು ಶಿಷ್ಯರ ತಾಳ್ಮೆಯನ್ನು ಪರೀಕ್ಷಿಸುವುದಕ್ಕಾಗಿ ಈ ರೀತಿ ಮಾಡುತ್ತಾರೆ. ನಂತರ ದಿನಗಳಲ್ಲಿ ಪರಿಪಕ್ವತೆ ಮೂಡಿಸಲು ಗುರುಗಳು ಶ್ರಮಿಸುತ್ತಿದ್ದಾರೆಂದು ಅರ್ಥವಾಗುತ್ತೆ. ಒಂದೊಂದು ಸಲ ಸುಲಭಾರವರಿಗೆ ಅಳು ಬರುತ್ತಿತ್ತು. ಆಗ ಕೃಷ್ಣಾ ಹಾನಗಲ್‌ರವರೇ *" ಸಂಗೀತ ಕಲಾವಿದರಿಗೆ ಸಹನೆ ಅತ್ಯಗತ್ಯ"* ಎಂದು ಧೈರ್ಯ ತುಂಬುತ್ತಿದ್ದರು. ಸುಲಭಾರವರು ಸಾರ್ವಜನಿಕವಾಗಿ ಕಚೇರಿ ನೀಡುವಷ್ಟು ಪರಿಣಿತಿ ಹೊಂದಿದ್ದಾಳೆಂದು ಗುರುಗಳಿಗೆ ಖಾತ್ರಿಯಾದ ಮೇಲೆ ಅವರೆ ಯುವ ಸಂಗೀತ ಸಮ್ಮೇಳನ, ಕುಂದಗೋಳ ಹಾಗೂ ಪುಣೆಯ ಸವಾಯಿ ಗಂಧರ್ವ ಸ್ಮೃತಿ ಸಂಗೀತೋತ್ಸವಗಳಲ್ಲಿ ಕಚೇರಿ ನೀಡಲು ಅವಕಾಶ ಕಲ್ಪಿಸಿಕೊಟ್ಟು ಸಭಾ ಧೈರ್ಯ ರೂಢಿ ಮಾಡಲು ಪ್ರೇರಣೆ ನೀಡಿದರು.

ಕಿತ್ತೂರಿನ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಸಂಗೀತ ವಿಭಾಗದ ಮುಖ್ಯಸ್ಥೆಯಾಗಿ ಕಾರ್ಯನಿರ್ವಹಿಸುತ್ತಿರುವ ಸುಲಭಾರವರು ಡಾ. ಶಶಿಕಲಾ ಚೌಡಿ ಇವರ ಮಾರ್ಗದರ್ಶನದಲ್ಲಿ *"ಹಿಂದೂಸ್ತಾನಿ ರಾಗ ಪದ್ಧತಿಯಲ್ಲಿ ಸಮಯ ಪ್ರಜ್ಞೆ"* ಎಂಬ ವಿಷಯದ ಮೇಲೆ ಮಂಡಿಸಿದ ಮಹಾಪ್ರಬಂಧಕ್ಕೆ ಕ.ವಿ.ವಿ. ಧಾರವಾಡ ಡಾಕ್ಟರೇಟ ಪದವಿ ಪ್ರಧಾನ ಮಾಡಿದೆ. ಆಕಾಶವಾಣಿ **"ಬಿ ಹೈ"** ಗ್ರೇಡ್ ಕಲಾವಿದರಾಗಿರುವ ಸುಲಭಾರವರು ಆಕಾಶವಾಣಿ, ದೂರದರ್ಶನಗಳಲ್ಲಿ

ಅನೇಕ ಕಾರ್ಯಕ್ರಮ ನೀಡಿದ್ದಾರೆ.

ಗಂಗೂಬಾಯಿಯವರಲ್ಲಿ ೧೫ ವರ್ಷ ಸತತ ಸಂಗೀತ ಅಭ್ಯಾಸ ಮಾಡಿದ ನಂತರ ಹಿಂದೂಸ್ತಾನಿ ಸಂಗೀತ ಕ್ಷೇತ್ರದ ಗುರು-ಶಿಷ್ಯ ಪರಂಪರೆಯ **"ಗಂಡಾಬಂಧನ"** ೧೯೯೨ರಲ್ಲಿ ಧಾರವಾಡದಲ್ಲಿ ಆಗ್ರಾ ಘರಾಣೆಯ ಹಿರಿಯ ಗಾಯಕರದ ಪಂ. ಕೆ.ಜಿ.ಗಿಂಡೆ ಇವರ ಅಧ್ಯಕ್ಷತೆಯಲ್ಲಿ ನಡೆಯಿತು.

ಮಾತೃ ಹೃದಯದ ಅಂಥ ಮಹಾನ್ ವಿಶ್ವವಿಖ್ಯಾತ ಗಾಯಕಿಯ ಶಿಷ್ಯೆಯಾಗಿ ಅವಕಾಶ ದೊರೆತದ್ದು ನನ್ನ ಸುದೈವ ಎನ್ನುವ ಸುಲಭಾ ಗುರುಗಳ ಅಚ್ಚುಮೆಚ್ಚಿನ ಶಿಷ್ಯೆ. ಮತ್ತು ಪ್ರತಿಭಾವಂತ ಕಲಾವಿದೆಯಾಗಿ ಹೊರಹೊಮ್ಮಿದ್ದಾರೆ.

**ಕಾರ್ಯಕ್ರಮಗಳು:**

ಪುಣೆಯ ಸವಾಯಿ ಗಂಧರ್ವ ಸಂಗೀತ ಸಮಾರೋಹ SPICMACAY ವತಿಯಿಂದ ಭೂಪಾಲದಲ್ಲಿ, ಶಕುನಗಾನ ಮತ್ತು ಕಲಾ ಅಕಾಡಮಿ ಶಿಶಿ ಮತ್ತು ಹುಬ್ಬಳ್ಳಿ ಧಾರವಾಡ ಮುಂತಾದವುಗಳಲ್ಲಿ.

**ಪ್ರಶಸ್ತಿಗಳು:**

ಕರ್ನಾಡಕ ನೃತ್ಯ ಅಕ್ಯಾಡಮಿಯಿಂದ **"ಕರ್ನಾಟಕ ಕಲಾಶ್ರೀ"** ಉಭಯಗಾನ ಚತುರೆ. ಸಹ್ಯಾದ್ರಿ ಸಂಗೀತ ಅಕ್ಯಾಡಮಿಯಿಂದ ಡಾ॥ ಗಂಗೂಬಾಯಿ ಹಾನಗಲ್ ಸ್ಮರಣ", ಇನ್ನೂ ಅನೇಕ ಪ್ರಶಸ್ತಿಗಳು.

**ಸನ್ಮಾನ:**

ಹುಬ್ಬಳ್ಳಿಯಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಕಿರಾಣಾ ಘರಾಣಾ ಸಂಗೀತ ಸಮಾರೋಪದಲ್ಲಿ ಖ್ಯಾತ ಗಾಯಕಿ ಡಾ॥ ಪ್ರಭಾ ಅತ್ರೆಯಲವರಿಂದ ಹುಬ್ಬಳ್ಳಿಯಲ್ಲಿ ಪಂ. ಜಸರಾಜರಿಂದ. ಇನ್ನೂ ಮುಂತಾದವುಗಳು.

ಇವರು ಖ್ಯಾತ ಗಾಯಕಿಯಲ್ಲದೇ ಜನಪರ ಅನೇಕ ಕಾರ್ಯಕ್ರಮಗಳನ್ನು ತಮ್ಮ ಗುರುಗಳ ಹೆಸರಿನಲ್ಲಿ ಗುರುಪೂರ್ಣಿಮೆಯಂದು ಜರುಗಿಸಿದ್ದಾರೆ.

**ಸಾಧನೆ:**

"ಹಿರಿಯ ಮಹಿಳಾ ಸಂಗೀತ ಸಾಧಕರು" ಲೇಖನ ಮತ್ತು ಡಾ॥ಗಂಗೂಬಾಯಿ ಹಾನಗಲ್, ಪಂ. ಭೀಮಸೇನ

ಜೋಷಿ, ಪಂ. ಮಾಧವ ಗುಡಿ ಮುಂತಾದವರ ಬಗ್ಗೆ ಬರೆದ ಲೇಖನಗಳು ವಿಜಯ ಕರ್ನಾಟಕ, ಪ್ರಜಾವಾಣಿ ಪತ್ರಿಕೆಗಳಲ್ಲಿ ಬಂದಿವೆ.

ಇವರ ಈ ಸಂಗೀತ ಸಾಧನೆಗೆ ಬೆನ್ನಲುಬಾಗಿ ತುಂಬು ಪ್ರೋತ್ಸಾಹ ಕೊಟ್ಟಂತಹವರು ಇವರ ಪತಿ ಶ್ರೀ ದತ್ತಾ ನೀರಲಗಿಯವರು. ಹೆಣ್ಣಿನ ಯಶಸ್ಸಿನ ಹಿಂದೆ ಪುರುಷನಿದ್ದಾನೆ – ಎಂಬುದಕ್ಕೆ ಇವರೇ ನಿದರ್ಶನ.

# ಶ್ರೀಮತಿ ಸವಿತಾ ಅಮರೇಶ



**ಜನನ:** ೧-೪-೧೯೭೦

**ಸ್ಥಳ:** ಸೊಲ್ಲಾಪುರ

ಭಾರತೀಯ ಶಾಸ್ತ್ರೀಯ ಸಂಗೀತ ಮನುಷ್ಯನ ಭಾವ ಸಂಚಾರವನ್ನು ಧ್ಯಾನ ಮತ್ತು ಅನುಭಾವದ ನೆಲೆಯಲ್ಲಿ ದೀಪ್ತಿಗೊಳಿಸುವತ್ತ ಕೇಂದ್ರೀಕೃತವಾಗಿದೆ. ನಾದ ಮತ್ತು ಚೈತನ್ಯದ ಅಸ್ತಿತ್ವವನ್ನು ಅನ್ವೇಷಿಸುವ ಕ್ರಮ ಸಂಗೀತದ್ದಾಗಿದೆ. ರಾಗದ ಸುಂದರ ನಿರೂಪಣೆ, ಬಂದೀಷದ ಸ್ಪಷ್ಟ ನಿವೇದನೆ, ಲಯದ ಮೇಲೆ ನವಿರಾದ ಹಿಡಿದ, ಶೃತಿಬದ್ಧವಾದ ಸುರೇಲಿ ತಾನುಗಳು, ಶ್ರೋತೃಗಳ ಮೇಲೆ ಪರಿಣಾಮಕಾರಿಯಾಗಿ ಪ್ರಭಾವ ಬೀರುವ ಮಧುರ ಧ್ವನಿ ಇವೆಲ್ಲವೂ ಸವಿತಾ ಅಮರೇಶ್ವರರ ವಿಶೇಷಗಳಾಗಿವೆ. ಭಾರತೀಯ ಹಿಂದೂಸ್ತಾನಿ ಸಂಗೀತ ಕ್ಷೇತ್ರದ ಜೈಪುರ ಗ್ವಾಲಿಯರ್ ಘರಾಣೆಯ ಭರವಸೆಯ ಹೆಸರು.

ಇವರು ಸಂಗೀತ ಪ್ರೇಮಿಗಳ ಮನೆಯಲ್ಲಿ ಜನ್ಮ ತಾಳಿದವರು. ೫ ಜನ ಅಕ್ಕ-ತಂಗಿಯರಲ್ಲಿ ಸವಿತಾ ಅಮರೇಶರವರೆ ಮೊದಲಿಗರು. ಇವರ ತಂದೆ ರಾಜಶೇಖರ ಜಂಗಮ ಶೆಟ್ಟಿ ಮತ್ತು ತಾಯಿ ಚಾರುಮತಿ ಬಿಜಾಪುರ ಜಿಲ್ಲೆಯ ಬಬೇಳೇಶ್ವರದವರು. ಇವರಿಬ್ಬರೂ ತುಂಬಾ ಸಂಗೀತ ಪ್ರೇಮಿಯಾಗಿದ್ದು ಸಂಗೀತಗಾರರನ್ನೆ ಮನೆಗೆ ಕರೆದುಕೊಂಡು ಬಂದು ತುಂಬು ಅತಿಥ್ಯ ನೀಡುವರು. ೫ ಜನ ಹೆಣ್ಣು ಮಕ್ಕಳಿದ್ದರೂ ಅವರಿಗೆ ಸಂಗೀತ ಕಲಿಯಲು ಪ್ರೋತ್ಸಾಹ ಕೊಟ್ಟು ಅದಕ್ಕಾಗಿ ಅವರಲ್ಲಿ ಸಂಗೀತದ ಅಭಿರುಚಿ ಬೆಳೆಯುವಂತೆ ಮಾಡಿದರು. ರಾಜಶೇಖರವರು ಸರಕಾರಿ ನೌಕರರಾಗಿದ್ದು ಮೇಲಿಂದ ಮೇಲೆ ಬೇರೆ ಬೇರೆ ಊರಿಗೆ ಬದಲಾವಣೆಯಾಗುತ್ತಿತ್ತು. ಬೇರೆ ಬೇರೆ ಊರಿಗೆ ಹೋದಲ್ಲೆಲ್ಲ ಮಕ್ಕಳಿಗೆ ವಿದ್ಯಾಭ್ಯಾಸದ ಜೊತೆಗೆ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತವನ್ನು ಕೇಳಿಸುವುದು ಮತ್ತು

ಕಲಿಸಲು ವ್ಯವಸ್ಥೆ ಮಾಡುತ್ತಿದ್ದರು. ಆಗೆಲ್ಲ ಅಲ್ಲಿಗೆ ಬಂದಂತಹ ಸಂಗೀತಗಾರರನ್ನು ತಮ್ಮ ಮನೆಯಲ್ಲಿ ಇಳಿಸಿಕೊಂಡು ಉಪಚರಿಸುತ್ತಿದ್ದರು. ಹೀಗೆ ಬಂದವರಲ್ಲಿ ಖ್ಯಾತ ಗಾಯಕರಾದ ಶ್ರೀ ಜಂಬಲದಿನ್ನಿ ಯವರು. ಅವರ ವಚನಗಳನ್ನು ಕೇಳಿಸುತ್ತಾ ಮಕ್ಕಳಿಗೂ ಕಲಿಸಿದರು. ನಂತರ ರಾಯಚೂರಿಗೆ ಬಂದರು. ಅಲ್ಲಿ ಶ್ರೀ ನರಸಿಂಹಲು ವಡವಾಟಿ ಇವರಲ್ಲಿ ಸವಿತಾರವರ ಶಾಸ್ತ್ರೀಯವಾಗಿ ಸಂಗೀತ ಶಿಕ್ಷಣ ಆರಂಭವಾಯಿತು. ಮುಂದೆ ಸಣ್ಣ ಪುಟ್ಟ ಕಯ್ಯುರಮವನ್ನು ಕೊಡುತ್ತ ಬಂದರು. ಒಮ್ಮೆ ಡಾ॥ ಮಲ್ಲಿಕಾರ್ಜುನ ಮನಸೂರರವರು ಇವರ ಮನೆಗೆ ಬಂದಾಗ ಸಂಗೀತ ಕೇಳಿ ಧಾರವಡದಲ್ಲಿ ತಮ್ಮ ಶಿಷ್ಯ ಶ್ರೀ ಪಂಚಾಕ್ಷರಿ ಮತ್ತಿಗಟ್ಟಿಯವರಲ್ಲಿ ಸಂಗೀತ ಕಲಿಯಲು ಕಳಿಸುವಂತೆ ಹೇಳಿದರು.

ಆಕಾಶವಾಣಿ ಧಾರವಾಡ ನಿಲಯದವರು ನಡೆಸುತ್ತಿದ್ದ ಗಾಯನ ಸ್ಪರ್ಧೆಗಳಲ್ಲಿ ಸ್ಪರ್ಧಿಯಾಗಿ ಸವಿತಾರವರು ಭಾಗವಹಿಸಿದ್ದರು. ಗಾಯನ ಕೇಳಿ ಪಂಚಾಕ್ಷರಿ ಮತ್ತಿಗಟ್ಟಿಯವರು ಸಂಗೀತ ಹೇಳಿಕೊಡಲು ಒಪ್ಪಿಕೊಂಡರು. ಅದೇ ಸಂದರ್ಭದಲ್ಲಿ ಕರ್ನಾಟಕ ವಿ.ವಿ.ದ ಸಂಗೀತ ವಿಭಾಗದಲ್ಲಿ ಸಂಗೀತ ರತ್ನ ಪದವಿ ಪಡೆಯಲ್ಲಿ ಸೇರಿಕೊಂಡರು. ಆಗ ಮತ್ತಿಗಟ್ಟಿಯವರ ಮನೆಯಲ್ಲಿ ಇವರು ವಾಸವಾಯಿತು. ಗುರುಗಳು ಸಮಯ ಸಂದರ್ಭಾನುಸಾರವಾಗಿ ಸಂಗೀತ ಕಲಿಸುತ್ತಿದ್ದರು. ಅವರ ಗಾಯನ ಪದ್ಧತಿ ಜೈಪುರ, ಅತ್ರೋಲಿ, ಘರಾಣೆಯದಾಗಿತ್ತು. ಈ ಪದ್ಧತಿಯು ಸವಿತಾರವರಿಗೆ ಕ್ಲಿಷ್ಟಕರವಾಗಿ ಭಾಸವಾಗುತ್ತಿತ್ತು. ಮತ್ತು ಅವರು ಕಲಿಸುವ ರಾಗಗಳು ಅಪ್ರಚಲಿತ, ಜೋಡು ರಾಗಗಳಾಗಿದ್ದವು. ಅವುಗಳನ್ನು ರಾಗದ ಶುದ್ಧತೆ ಕೆಡದಂತೆ ಹಾಡುವುದು ಪ್ರಯಾಸದ ಕೆಲಸವಾಗಿತ್ತು. ಗುರು ಶಿಷ್ಯರ ತಾಳ್ಮೆ ಶ್ರಮ ಇವುಗಳಿಂದ ಸವಿತಾರವರು ತುಂಬಾ ಪರಿಶ್ರಮ ಪಟ್ಟು ಅಭ್ಯಾಸ ಮಾಡಿದರು. ತಪ್ಪಿದರೆ ಗುರುಗಳು ಬಯ್ದು ತಿದ್ದಿ ಮಗಳಿಗೆ ಸಂಗೀತ ಕಲಿಸುವಂತೆ ಕಲಿಸಿದರು. ಸಂಗೀತವು ಒಂದು ತಪಸ್ಸು ಇದ್ದಂತೆ. ಕಲಿಕೆ ಅಷ್ಟು ಸರಳವಲ್ಲ.

ಶ್ರೀ ಮತ್ತಿಗಟ್ಟಿ ಗುರುಗಳು ಅನೇಕ ಕಾರ್ಯಕ್ರಮಗಳಿಗೆ ಜೊತೆಯಲ್ಲಿ ಸವಿತಾರವರನ್ನು ಕರೆದುಕೊಂಡು ಹೋಗುತ್ತಿದ್ದರು. ಅಂತಹ ಕಾರ್ಯಕ್ರಮಗಳಲ್ಲಿ ಮುಂಬೈ ಕಾರ್ಯಕ್ರಮವು ತುಂಬಾ ಮಹತ್ವ ಪೂರ್ಣವಾಗಿತ್ತು. ಗುರುಗಳು ಇವರಿಗೆ ತಮ್ಮ ಘರಾಣೆಯ ರಾಗಗಳಲ್ಲಿ – ಗೌರಿ, ಬಹದ್ದೂರಿ ತೋಡಿ, ಘರಜ ನಾಯರೆ, ಕಾನ್ಹಡಾ, ಲಾಜವಂತಿ ಇನ್ನೂ ಅನೇಕ ಅಪ್ರಚಲಿತ ರಾಗಗಳನ್ನು ಕಲಿಸಿದ್ದಾರೆ. ಮುಂದೆ ಇವರು ಖ್ಯಾತ ಗಾಯಕಿ ಶ್ರೀಮತಿ ಜಯಶ್ರೀ ಪಾಟ್ನೇಕರ ಬೆಳಗಾವಿ ಇವರ ಹತ್ತಿರ ಸಂಗೀತ ಶಿಕ್ಷಣ ಪ್ರಾರಂಭಿಸಿದರು.

**ಇವರು ಪ್ರಮುಖ ಗಾಯನ ಕಛೇರಿಗಳು:**

೧ ಕನ್ನಡ ವಿ.ವಿ.ಹಂಪಿ. ೧೯೯೨ ಮತ್ತು ೧೯೯೫

೨ ಕರ್ನಾಟಕ ಮಹಿಳಾ ಸಮ್ಮೇಳನ ೧೯೮೭

೩ ಯುವಜನ ಸಂಗೀತೋತ್ಸವ ೧೯೮೮

ಸೌತ ಸೆಂಟ್ರೆಲ್ ಝೋನ್, ಕಲ್ಚರಲ್ ಸೆಂಟರ್ ನಾಗಪುರ ಏರ್ಪಡಿಸಿದ ಯುವಜನ ಸಂಗೀತೋತ್ಸವ ಗಾಯನ, ಪುಣೆ ಮತ್ತು ತಿರುಪತಿ. ಹೀಗೆ ಮೈಸೂರು, ಮೂಡುಬಿದಿರೆ ಇನ್ನೂ ಅನೇಕ ಕಡೆ ಕಾರ್ಯಕ್ರಮ ಕೊಟ್ಟಿರುತ್ತಾರೆ.

**ಸಂಗೀತ ಶಿಕ್ಷಣ:**

ವಿಶಾರದಾ, ವಿದ್ವತ್, ಸಿನಿಯರ್ (ಪ್ರಥಮ ರ್‍ಯಾಂಕ), ಸಂಗೀತ ರತ್ನ ಪ್ರಥಮ ದರ್ಜೆ.

**ಸಾಧನೆ:**

ಆಕಾಶವಾಣಿಯಲ್ಲಿ ಶಾಸ್ತ್ರೀಯ ಸಂಗೀತ ಮತ್ತು ಸುಗಮ ಸಂಗೀತದಲ್ಲಿ ಬಿ. ಗ್ರೇಡ್.

**ಧ್ವನಿ ಸುರುಳಿ:**

ವಚನ ಗಾನ ನಮನ, MSIL ಕಂಪನಿ, ವಚನ ಸಂಗೀತ ಸೌರಭ, ಮುಂತಾದವುಗಳು.

ಒಟ್ಟಿನಲ್ಲಿ ಮಹಿಳೆಯಲ್ಲಿ ಸಂಗೀತ ಸಾಧನೆ ಮಾಡಿದ ನವಯುವ ಕಲಾವಿದೆಯರಲ್ಲಿ ಇವರು ಜೈಪುರ ಘರಾಣೆಯ ಸಂಗೀತದ ಭರವಸೆಯ ಹೆಸರು.

# ಶ್ರೀಮತಿ ಅನುರಾಧಾ ಧಾರೇಶ್ವರ

ಸಾಹಿತ್ಯ ಮತ್ತು ಸಂಗೀತ ಕ್ಷೇತ್ರದ ಕಾಶಿ ಹಾಗೂ ಗಂಧರ್ವರ ಸೀಮೆ ಎಂದು ಬಣ್ಣಿಸಲಾದ ಧಾರವಾಡದ ಪರಿಸರದಲ್ಲಿ ಬೆಳೆದು ತಮ್ಮ ಸುಶ್ರಾವ್ಯ ಕಂಠದಿಂದ ಸುಗಮ ಸಂಗೀತವನ್ನು ಜನಸಾಮಾನ್ಯರ ಮನೆ ಬಾಗಿಲಿಗೆ ಮುಟ್ಟಿಸುವಲ್ಲಿ ಹಿರಿಯ ಗಾಯಕಿ ವಿದುಷಿ ಅನುರಾಧಾ ಅವರು. ಅನುಕರಣೀಯ ಸಾಧನೆ ಮಾಡಿದ್ದಾರೆ.

“ *ಓ ನನ್ನ ದೇಶ ಬಾಂಧವರೇ ಕಂಬನಿಗಳೆರಡಾ ಬೆಮ್ಮಿ. ಪ್ರಾಣಾಹುತಿ ನೀಡಿದ ಅವರಾ ಸಂಸ್ಮರಿಸಿರಿ ಆ ಬಲಿದಾನಾ ----*” ಈ ಅನುಪಮ ದೇಶಭಕ್ತಿ ಗೀತೆಯನ್ನು ಕನ್ನಡದಲ್ಲಿ ಕವಿ ರಾಘವೇಂದ್ರ ಇಟಗಿಯವರು ಬರೆದರೆ, ಇದನ್ನು ಅನುರಾಧಾರವರು **೬೦**ರ ದಶಕದಲ್ಲಿ ಪಾಕಿಸ್ತಾನ ಯುದ್ಧದ ಸಮಯದಲ್ಲಿ ಎದೆ ಕರಗುವಂತೆ ಹಾಡಿ ಶ್ರೋತೃಗಳ ಹೃದಯ ತಂತಿ ಮೀಟಿದ ಪ್ರತಿಭಾವಂತ ಗಾಯಕಿ ಶ್ರೀಮತಿ ಅನುರಾಧಾ ಧಾರೇಶ್ವರ. ಅದರ ಸಾಹಿತ್ಯ ಹಾಗೂ ಭಾವಕ್ಕೆ ಲೋಪವಾಗದಂತೆ ಕೊರಳೆತ್ತಿ ಸುಮಧುರವಾಗಿ ಹಾಡಿ ಎಲ್ಲರಲ್ಲೂ ರಾಷ್ಟ್ರ ಭಕ್ತಿಯನ್ನು ಮಿಂಚಿನ ಸೆಳೆಕು ತಂದ ಖ್ಯಾತಿ ಈ ಗಾಯಕಿಯದು.

ಇವರಿಗೆ ತಾಯಿಯೇ ಮೊದಲು ಗುರು. ಬೆಳಗಿನ ಜಾವ ಇವರ ತಾಯಿಯು ಹಾರ್ಮೋನಿಯಂ ಜೊತೆ ದೇವರ ನಾಮಗಳನ್ನು ಹಾಡುತ್ತಿದ್ದರು. ದಿನವು ಕೇಳಿ ಇವರ ಮೇಲೆ ಗಾಢ ಪ್ರಭಾವ ಬೀರಿತು. ಸಹಜವಾಗಿಯೇ ಸಂಗೀತದತ್ತ ಒಲವು ಮೂಡಿತು. ಮನೆಯಲ್ಲಿ ತಂದೆ ತಾಯಿಗಳ ಪ್ರೋತ್ಸಹವು ಇತ್ತು.

ಅನುರಾಧಾರವರ ತಂದೆ ಪೋಲಿಸ ಇಲಾಖೆಯಲ್ಲಿದ್ದುದರಿಂದ ರಾಣೆಬೆನ್ನೂರಿಗೆ ವರ್ಗವಾಗಿತ್ತು. ಅಲ್ಲಿಯೇ ಮುಲ್ಕಿ ಪರೀಕ್ಷೆಯವರೆಗೂ ಅಭ್ಯಾಸ. ಅಲ್ಲಿ ಭಾರತ ಸೇವಾ ದಳದಲ್ಲಿ ದೇಶಭಕ್ತಿ ಗೀತೆ ಹಾಡುವ ಅವಕಾಶ ಇವರಿಗೆ ದೊರೆಯಿತು. ಹೀಗಾಗಿ ಮಧುರ ಕಂಠದ ಬಾಲಕಿಗೆ ಸುಗಮ ಸಂಗೀತ ಹೇಳುವಲ್ಲಿ ಹೆಚ್ಚಿನ ಪ್ರೋತ್ಸಾಹ ದೊರೆಕಿತು. **೧೯೫೩**ರಲ್ಲಿ ಧಾರವಾಡಕ್ಕೆ ವಲಸೆ ಬಂದ ನಂತರ ಈ ಕೋಗಿಲೆಗೆ ಮಾಮರದ ತೋಟವೇ ಸಿಕ್ಕಂತಾಯಿತು. ಶಾಲೆಯ ಅಧ್ಯಯನದ ಜೊತೆಗೆ ಆಕಾಶವಾಣಿಯ ಗಿಳಿವಿಂಡು ಕಾರ್ಯಕ್ರಮದಲ್ಲಿ ಬಾಲಕಲಾವಿದೆಯಾಗಿ ಸೇರಿಕೊಂಡರು. ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ ಶ್ರೀ ಎಸ್.ಜಿ.ನಾಡಗೇರರವರು ಅನುರಾಧಾರವರ ಸಂಗೀತದ ಗುಂಗು ಅರಿತು ಅವಕಾಶ ಸಿಕ್ಕಾಗಲೆಲ್ಲ ಇವರ ಸಾಧನೆಗೆ ಪ್ರೋತ್ಸಾಹಿಸಿದರು. ವಿವಿಧ ಸಂಘಟನೆಗಳು ಏರ್ಪಡಿಸುವ ಗಾಯನ ಸ್ಪರ್ದೆಗಳಲ್ಲಿ ಭಾಗವಹಿಸಿ ಪ್ರಶಸ್ತಿ ತೆಗೆದುಕೊಳ್ಳುತ್ತಿದ್ದರು.

ಮುಂದೆ ಖ್ಯಾತ ಸಂಗೀತ ತಜ್ಞರಾದ ಹುಬ್ಬಳ್ಳಿಯ ಶ್ರೀ ರಾಮಚಂದ್ರ ದಿಕ್ಷಿತ ಇವರ ಬಳಿ ಸಂಗೀತ

ಶಿಕ್ಷಣವನ್ನು ಪಡೆದರು. ಗುರು ದಿಕ್ಷಿತರು ಶಿಷ್ಯಳಿಗೆ ಭಾಷಾ, ಉಚ್ಚಾರ, ಶೃತಿ, ಲಯ, ಭಾವಗಳ ಒಳತೋಟಿಯನ್ನು ತಿಳಿಸಿ, ಸುಗಮ ಸಂಗೀತದ ಗರಡಿ ಸಾಧನೆಗೆ ಅನುವು ಮಾಡಿಕೊಟ್ಟರು.

ಬಡತನದ ಬವಣೆಯಲ್ಲೂ ಪರಿಶ್ರಮದಿಂದ ಕಲಿತ ವಿದ್ಯೆ ಹಾಗೂ ನಿರಂತರ ನಿಷ್ಠೆಯ ಸಾಧನೆಯಿಂದ ಇವರ ಕಂಠಶ್ರೀ ಹದಗೊಂಡಿತು. ವರಕವಿ ಬೇಂದ್ರೆ, ಕುವೆಂಪು, ಆನಂದಕರ, ಡಿ.ಎಸ್.ಕರ್ಕಿ, ಚನ್ನವೀರ ಕಣವಿ, ಶಿವರುದ್ರಪ್ಪಾ, ಎನ್ಕೆ ಮೊದಲಾದ ಪ್ರಸಿದ್ಧ ಕವಿಗಳ ಕವನಗಳು ಇವರ ಕಂಠದಲ್ಲಿ ಹೊಸ ಹೊಳಪು ಪಡೆದವು. ಕಲಾವಿದೆಯ ಪ್ರತಿಭೆ ಮತ್ತು ಪರಿಸ್ಥಿತಿ ಅರಿತು ಧಾರವಾಡ ಭಾಷಲ್‌ಮಿಶನ್ ವಿದ್ಯಾರ್ಥಿನಿಯರ ಪ್ರೌಢಶಾಲೆಯಲ್ಲಿ ಸಂಗೀತ ಶಿಕ್ಷಕಿಯಾಗಿ ಉದ್ಯೋಗವು ಸಿಕ್ಕಿತು. ಸುಗಮ ಸಂಗೀತ ಕಲಾವಿದೆಯಾಗಿ ಭಾವಗೀತೆಗಳ ಹಾಡುಗಾರಿಕೆಯಲ್ಲಿ ಚಿರಪರಿಚಿತರಾದರು. ಸತತ ಸಾಧನೆಯಿಂದಾಗಿ ಆಕಾಶವಾಣಿಯ **"ಬಿ ಹೈ"** ಗ್ರೇಡ್ ಕಲಾವಿದೆಯಾಗಿ, ಆಯ್ಕೆಗೊಂಡಾಗ ಬಾನುಲಿಯಲ್ಲಿ ಗೀತ ಗಾಯನಕ್ಕೆ ಅವಕಾಶ ಸಿಕ್ಕಿತು. ಹಿಂದಿ ಭಜನೆ, ಕೊಂಕಣಿ ಗೀತೆಗಳು, ಮರಾಠಿಯ ಗೋಡವಾಣಿ ಹಾಗೂ ಸಂಸ್ಕೃತ ಗೇಯ ರಚನೆಗಳನ್ನು ಸಾಹಿತ್ಯ ಲೋಪವಾಗದಂತೆ ಭಾವ ಹಾಗು ರಸಕ್ಕೆ ಒತ್ತು ನೀಡಿ ಲೀಲಾಜಾಲವಾಗಿ ಹಾಡಿ ನಾಡಿನ ಎಲ್ಲರ ಮನೆ ಮಾತಾದರು. ಇವರು ಧಾರವಾಡದ ಕಲೋದ್ಧಾರಕ ಸಂಘದಲ್ಲಿ ನಾಟಕಗಳಲ್ಲಿ ಅಭಿನಯಿಸಿ ಜನಮೆಚ್ಚುಗೆಗೆ ಪಾತ್ರರಾದರು. ಇವರ ಬಾಳ ನೌಕೆಗೆ ಬಾಲಕೃಷ್ಣ ಧಾರೇಶ್ವರ ಜೊತೆಯಾದುದು ಮುಂಬಯಿಯಲ್ಲಿ. ಪುನಃ ಧಾರವಾಡಕ್ಕೆ ಬಂದ ಅನುರಾಧಾ **೧೯೬೭**ರಲ್ಲಿ ಧಾರವಾಡ ಆಕಾಶವಾಣಿಯಲ್ಲಿ ಅನೌನ್ಸರಾಗಿ ನೇಮಕಗೊಳ್ಳುವವರೆಗೂ ಸಂಗೀತ ಶಿಕ್ಷಕಿಯಾಗಿ ಅದೇ ಶಾಲೆಯಲ್ಲಿ ಕಾರ್ಯ ನಿರ್ವಹಿಸಿದರು. ಮುಂದೆ ಇವರು ಉದ್ಯೋಗ ಕುಟುಂಬ ಎರಡನ್ನು ನಿಭಾಯಿಸುತ್ತಾ ಸಂಗೀತ ಸಾಧನೆ ಮಾಡುತ್ತಾ B.Music ಪದವಿಯನ್ನು ಪಡೆದರು.

ಅನುರಾಧಾ ಧಾರೇಶ್ವರ ಅವರ ಸಂಗೀತಕ್ಕಾಗಿ ಅರಸಿ ಬಂದ ಪ್ರಶಸ್ತಿಗಳು ಅನೇಕ. – ಕರ್ನಾಟಕ ಸಂಗೀತ ನೃತ್ಯ ಅಕಾಡಮಿಯ **೧೯೮೮-೮೯**ರಲ್ಲಿ ಕರ್ನಾಟಕ ಕಲಾತಿಲಕ ಪ್ರಶಸ್ತಿ.

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ – **೧೯೯೫**ರಲ್ಲಿ ಹಲವಾರು ಸಂಘಸಂಸ್ಥೆಗಳು ಇವರ ಸಂಗೀತ ಸಾಧನೆಗೆ ಮೆಚ್ಚಿ ಗೌರವಿಸಿವೆ.

ಸುಗಮ ಸಂಗೀತ ಕ್ಷೇತ್ರದಲ್ಲಿ ಸ್ವಂತ ಪರಿಶ್ರಮದಿಂದ ಸಂಗೀತ ಕೈಂಕರ್ಯ ಸಲ್ಲಿಸುತ್ತ ಪಲ್ಲವಿಸಿದ ಹಿರಿಯ ಕಲಾವಿದೆ ಶ್ರೀಮತಿ ಅನುರಾಧಾ ಧಾರೇಶ್ವರ. ಸುಗಮ ಸಂಗೀತ ಲೋಕದಲ್ಲಿ ಅಪೂರ್ವ ಸಾಧನೆ ಗೈದದ್ದಕ್ಕಾಗಿ ರಾಜ್ಯ ಸರಕಾರ **೧೯೯೮**ನೆ ಸಾಲಿನ **"ಸಂತ ಶಿಶುನಾಳ ಷರೀಳಫ್ ಪ್ರಶಸ್ತಿ"** ಯನ್ನು ಇವರಿಗೆ ನೀಡಿ ಗೌರವಿಸಿದೆ.

ಆಕಾಶವಾಣಿಯಲ್ಲಿ ಮೂವತ್ತು ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತಗೊಂಡ ನಂತರ ಸುಗಮ ಸಂಗೀತ

ಕಲಾ ಸೇವೆಗೆ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆ. ಪತಿ ಬಾಲಕೃಷ್ಣ ಹಾಗೂ ಮಗ ವಿನಯ ಇವರ ಸಣ್ಣ ಕುಟುಂಬದಲ್ಲಿ ಸಂತೋಷ ಹಾಗೂ ನೆಮ್ಮದಿಯ ಜೀವನ ಕಳೆಯುತ್ತಿರುವರು.

ಇಂದಿನ ಪ್ರಚಾರದ ಅಬ್ಬರದಲ್ಲಿ ಸಿಲುಕಿದ ಈಗಿನ ಕಲಾವಿದರಿಗೆ ಇವರ ಸದ್ದುಗದ್ದಲವಿಲ್ಲದ ಸಂಗೀತ ಸೇವೆಯ ಸಾಧನೆ ಒಂದು ಮಾದರಿ.

## ಶ್ರೀಮತಿ ಜಾನಕಿ ಅಯ್ಯರ

ಇವರು ಪುಣೆಯಲ್ಲಿ **೨೭-೧೧-೧೯೩೨**ರಲ್ಲಿ ಜನಿಸಿದರು. ವಿದ್ಯೆ ಏಕೋ ಇವರಿಗೆ ಹತ್ತಲ್ಲಿಲ್ಲಾಂತ ಕಾಣುತ್ತೆ. ಕೇವಲ ಎಸ್.ಎಸ್.ಎಲ್.ಸಿ. ಮುಗಿಸಿ ಸಂಗೀತದತ್ತ ಒಲವು ಹರಿಸಿದರು.

ಜಾನಕಿ ಅಯ್ಯರವರು **೧೯೫೧** ರಿಂದ ಪ್ರಹ್ಲಾದ ಜೋಷಿ, ವಿಠಲರಾವ್ ಸರದೇಶಮುಖ, ಹೀರಾಬಾಯಿ ಬಡೋದೇಕರ್, ಪ್ರಭುದೇವ ಸರದಾರ್ ಇವರಲ್ಲಿ ಸಂಗೀತ ಶಿಕ್ಷಣ ಪಡೆದುಕೊಂಡರು.

ಗಂಧರ್ವ ಮಹಾವಿದ್ಯಾಲಯದ **"ಸಂಗೀತ ವಿಶಾರದಾ"** ಪರೀಕ್ಷೆಯಲ್ಲಿ ತೇರ್ಗಡೆಯಾದರು.

**೧೯೫೨** ರಿಂದ ಆಕಾಶವಾಣಿಯ ವಿವಿಧ ಕೇಂದ್ರಗಳಿಂದ ಇವರ ಕಚೇರಿಗಳು ಪ್ರಸಾರವಾಗುತ್ತಿತ್ತು. **"ಎ"** ಶ್ರೇಣಿಯ ಕಲಾವಿದೆ. ದೂರದರ್ಶನದಲ್ಲಿ ಕಾರ್ಯಕ್ರಮ ನೀಡಿದ್ದಾರೆ.

ಇವರು ಕರ್ನಾಟಕ ವಿ.ವಿ. ದ ಸಂಗೀತ ವಿಭಾಗದಲ್ಲಿ ಅತಿಥಿ ಉಪನ್ಯಾಸಕರಾಗಿ ಠುಮ್ರಿ ಹೇಳುತ್ತಿದ್ದರು. ಇವರ ತಪ್ಪಿಸುತ್ತಿರಲ್ಲಿಲ್ಲ. ವಾರದಲ್ಲಿ ೨ ದಿನ ಮಾತ್ರ ತರಗತಿ ಇತ್ತು. ಆ ಎರಡು ದಿನಕ್ಕೆ ವಿದ್ಯಾರ್ಥಿಗಳು ಕಾತರದಿಂದ ಕಾಯುತ್ತಿದ್ದರು. ಹಾಗಿತ್ತು ಅವರ ಠುಮ್ರಿ ಗಾನ ತರಗತಿ.

ಇವರು ರಾಷ್ಟ್ರೀಯ ರೇಡಿಯೋ ಸಂಗೀತ ಕಾರ್ಯಕ್ರಮವನ್ನು ಕೊಟ್ಟಿದ್ದಾರೆ. ಲಘು ಶಾಸ್ತ್ರೀಯ, ಲಘು ಸಂಗೀತ ಗಾಯನ ಕಚೇರಿಗಳು ರೇಡಿಯೋದಲ್ಲಿ ಪ್ರಸಾರವಾಗುತ್ತವೆ.

**ಪ್ರಶಸ್ತಿ ಮತ್ತು ಪುರಸ್ಕಾರ:**

ಮುಂಬಯಿಯ ಸುರ್ ಸಿಂಗಾರ ಸಂಸದ್ ವತಿಯಿಂದ ಜಾನಕಿ ಅಯ್ಯರವರಿಗೆ **"ಸುರಮಣಿ"** ಪ್ರಶಸ್ತಿಯನ್ನು ಕೊಟ್ಟು ಗೌರವಿಸಿದೆ.

# ಶ್ರೀಮತಿ ಉಷಾ ಧಾತಾರ

**ಜನನ:** ೨೬-೦೩-೧೯೩೨

**ಜನ್ಮ ಸ್ಥಳ:** ವಿಜಾಪುರ

**ಮನೆತನ:** ತಂದೆ ಶ್ರೀನಿವಾಸರಾವ್

ಉಷಾ ದಾತಾರ ಮ್ಯಾಡಂ ಅಂದ್ರೆ ಎಲ್ಲ ಸಂಗೀತ ವಿದ್ಯಾರ್ಥಿಗಳಿಗೆ ಅಚ್ಚುಮೆಚ್ಚು. ಕರ್ನಾಟಕ ವಿಶ್ವವಿದ್ಯಾಲಯ ಸಂಗೀತ ಮಹಾವಿದ್ಯಾಲಯ ಧಾರವಾಡದಲ್ಲಿ ಸಂಗೀತ ಪ್ರಾಧ್ಯಾಪಕರಾಗಿದ್ದರು. ಇವರು ತುಂಬಾ ಮೆದು (ಸರಳ ಸ್ವಭಾವದವರು. ಎಲ್ಲರಿಗೂ ಸಹಾಯ ಮಾಡುವ ಗುಣ ಇವರದಾಗಿತ್ತು. ವಿದ್ಯಾರ್ಥಿಗಳಿಗೆ ಸಂಗೀತವಲ್ಲದೇ ಬೇರೆ ಬೇರೆ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸಿ ಅವರಿಗೆ ಸಹಾಯ ಕುಡಾ ಮಾಡುತ್ತಿದ್ದರು.

ಇವರು ವಿಜಾಪುರದಲ್ಲಿ **೨೬-೦೩-೧೯೩೨**ರಲ್ಲಿ ಸಂಗೀತ ಪರಿಣಿತರ ಮನೆಯಲ್ಲಿ ಜನಿಸಿದರು. ಇವರ ತಂದೆ ಶ್ರೀನಿವಾಸರಾವ್ ಸಂಗೀತ ಪರಿಣಿತರು. ಅಜ್ಜ ರಾಘವೇಂದ್ರರಾಯರು ಪ್ರಸಿದ್ಧ ಕೀರ್ತನಕಾರರಾಗಿದ್ದರು.

ಇವರ ಸಂಗೀತ ಶಿಕ್ಷಣ ವಿಜಾಪುರ ರಂಗಾಚಾರ್ಯ ಕಾಖಂಡಕಿಯವರಲ್ಲಿ. ನಂತರ ಹುಬ್ಬಳ್ಳಿಯ ಆರ್.ಜಿ.ದೇಸಾಯಿಯವರಲ್ಲಿ ಪ್ರೌಢ ಶಿಕ್ಷಣ ಸಂಗೀತ ವಿಶಾರದಾ ಪರೀಕ್ಷೆಯಲ್ಲಿ ತೇರ್ಗಡೆ.

**ಕಾರ್ಯಕ್ರಮಗಳು:**

ಪ್ರಥಮ ಕಚೇರಿ ಮಹಿಪತಿ ದಾಸರ ಆರಾಧನಾ ಸಂದರ್ಭ. ನಂತರ ಜಮಖಂಡಿ ಆರ್ಟ್ಸ್ ಸರ್ಕಲ್. ಗದಗ ಆರ್ಟ್ಸ್ ಸರ್ಕಲ್, ರಾಯಚೂರ ಕನ್ನಡ ಸಂಘ, ಮುಂಬಯಿ ಕನ್ನಡ ಸಂಘ, ಮುಂತಾದ ಸಂಘ ಸಂಸ್ಥೆಗಳಲ್ಲಿ, ಮತ್ತು ಮೈಸೂರು ದಸರಾ ಉತ್ಸವ, ಹೈದ್ರಾಬಾದ್ ಮುಂತಾದ ಕಡೆಗಳಲ್ಲಿ ಸಂಗೀತ ಕಚೇರಿ ನಡೆಸಿಕೊಟ್ಟಿದ್ದಾರೆ.

ಉಷಾ ದಾತಾರವರು ಠುಮ್ರಿ, ಭಜನ್, ಭಾವಗೀತೆ ರಂಗಗೀತೆಗಳನ್ನು ಹಾಡುತ್ತಾರೆ.

## ಶ್ರೀಮತಿ ಕಮಲಾಬಾಯಿ ರಾಜೇಸಾ ತಾಳಿಕೋಟೆ

ಶ್ರೀಮತಿ ಕಮಲಾಬಾಯಿಯವರು ೧೯೨೩ ರಲ್ಲಿ ಬಿಜಾಪುರದಲ್ಲಿ ಜನಿಸಿದರು.

ಇವರು ಹಿರಿಯ ಕಲಾವಿದೆ. ನಾಟಕದಲ್ಲಿ ತುಂಬಾ ಹೆಸರು ಮಾಡಿದ್ದರು. ನಾಟ್ಯ ಸಂಗೀತಗಳನ್ನು ಸುಶ್ರಾವ್ಯವಾಗಿ ಹಾಡಬಲ್ಲವರಾಗಿದ್ದರು.

ಇವರು ಶ್ರೀ ಕಿಷನ್‌ರಾವ್ ರೇಳಿಕರ್, ವ್ಯಾಸ ದಿನಕರರಾವ್ ಪಾಠೇಕರ್, ಶ್ರೀ ರಾಮಕೃಷ್ಣ ಬುವಾ ವಜೆ ಮುಂತಾದ ಸಂಗೀತಗಾರರ ಹತ್ತಿರ ಇವರು ಸಂಗೀತ ಕಲಿತರುವವರು.

ಕನ್ನಡ, ಹಿಂದಿ, ಮರಾಠಿ, ಭಾಷೆಯಲ್ಲಿ ಸುಲಲಿತವಾಗಿ ಹಾಡುವ ಈ ಹಿರಿಯ ಕಲಾವಿದೆ ಆಕಾಶವಾಣಿಯ ಮುಂಬೈ ಔರಂಗಾಬಾದ, ಧಾರವಾಡ ಕೇಂದ್ರಗಳಿಂದ ತಮ್ಮ ಕಚೇರಿ ನಡೆಸಿಕೊಟ್ಟಿದ್ದಾರೆ. ಮುಂಬೈಯ ಕಲ್ಯಾಣಗಾಯನ ಸಮಾಜ, ಪುಣೆಯ ಭಾರತ ಗಾಯನ ಸಮಾಜವೂ ಸೇರಿದಂತೆ ಅನೇಕ ಉತ್ಸವಗಳಲ್ಲಿ ಶ್ರೀಮತಿ ಕಮಲಾಬಾಯಿಯವರ ಕಾರ್ಯಕ್ರಮಗಳು ಪ್ರಸಿಧ್ಧಿ ಪಡೆದಿವೆ.

**ಸಾಧನೆ:**

ಗಂಧರ್ವ ಮಹಾವಿದ್ಯಾಲಯದ ಸಂಗೀತದಲ್ಲಿ ಎಂ.ಎ ಪಧವಿಧರರಾದ ಕಮಲಾಬಾಯಿಯವರು ಆಕಾಶವಾಣಿಯ **"ಎ"** ಶ್ರೇಣಿ ಗಾಯಕಿ. ಅಸ್ವಟ್ ರಾಗದಲ್ಲಿ ವೈಶಿಷ್ಟ್ಯತೆ ಪಡೆದಿರುವ ಇವರ ಧ್ವನಿ ಸುರುಳಿಯನ್ನು ಹೆಚ್.ಎಂ.ವಿ. ಕಂಪನಿ ಬಿಡುಗಡೆ ಮಾಡಿದೆ.

# ಶ್ರೀಮತಿ ಕೃಷ್ಣಾಬಾಯಿ ರಾಮದುರ್ಗ

ಶ್ರೀಮತಿ ಕೃಷ್ಣಾಬಾಯಿ ರಾಮದುರ್ಗ ಅವರು ತೋರಣಗಲ್ಲಿನಲ್ಲಿ ಹುಟ್ಟಿ, ಬೆಳಗಾವಿ ಜಿಲ್ಲೆಯ ರಾಮದುರ್ಗದಲ್ಲಿ ಬೆಳೆದು ಪಂ. ಸವಾಯಿ ಗಂಧರ್ವರಲ್ಲಿ ಸಂಗೀತ ಶಿಕ್ಷಣ ಪಡೆದು ಕರ್ನಾಟಕದ ತುಂಬೆಲ್ಲ ಪ್ರಚಾರ ಪಡೆದವರು. ಕರ್ನಾಟಕದ ಹಿರಿಯ ತಲೆಮಾರಿನ ಹಿಂದುಸ್ತಾನಿ ಗಾಯಕಿಯರಲ್ಲಿ ಒಬ್ಬರು. ಸಂಗೀತ ಕಲೆ ಕೃಷ್ಣಾಬಾಯಿ ಅವರಿಗೆ ಆನುವಂಶಿಕವಾಗಿ ಬಂದ ಸಂಪತ್ತು. ಸಂಗೀತಾರಾಧಕರ ಆವಾಸ ಸ್ಥಾನವಾಗಿದ್ದ ಇವರ ಮನೆಯು ಕೃಷ್ಣಾಬಾಯಿ ಅವರ ಕಲಾ ವಿಕಾಸಕ್ಕೆ ಸುಗಮ ದಾರಿ ಮಾಡಿತು. ಮನೆಯಲ್ಲಿ ಆಗಾಗ್ಗೆ ನಡೆಯುತ್ತಿದ್ದ ಕಲಾವಿದರ ನಾದ ತರಂಗಗಳು ಕೃಷ್ಣಾಬಾಯಿ ಅವರ ಸೂಕ್ತ ಪ್ರತಿಭೆಗೆ ಸ್ಪಷ್ಟ ಸ್ವರೂಪ ನೀಡಲು ನೆರವಾಯಿತು. ಹೀಗೆ ಪರಂಪರೆಯಿಂದ ಒಲಿದು ಬಂದ ಈ ಕಲೆಯನ್ನು ಇವರು ಉಳಿಸಿ ಬೆಳೆಸಿಕೊಂಡರು.

ಮೊಟ್ಟಮೊದಲು ಸಖಾರಾಮ ಭವಾಕೇತ್ತರ್‌ರಿಂದ ಸಂಗೀತ ಶಿಕ್ಷಣ ಪಡೆದು ಸವಾಯಿ ಗಂಧರ್ವರಲ್ಲಿ ಉನ್ನತ ಶಿಕ್ಷಣ ಪಡೆದು **'ಗಾನ ಚೂಡಾಮಣಿ'**ಯಾದರು. ಸಂಗೀತದ ಜೊತೆಗೆ ನೃತ್ಯ, ಅಭಿನಯಗಳಲ್ಲೂ ಹೆಸರು ಪಡೆದಿದ್ದ ಕೃಷ್ಣಾಬಾಯಿ ಅವರು ಸದ್ಗುಣ, ಸಹೃದಯ ಸಂಪನ್ನೆ. ಔದಾರ್ಯ ಇವರ ಹುಟ್ಟುಗುಣ.

ಪ್ರತಿವರ್ಷ ಸಂಗೀತ ಕಲಾ ಕೋವಿದ ಉ. ಅಬ್ದುಲ್ ಕರೀಮ ಖಾನ್‌ರ ಪುಣ್ಯತಿಥಿಯನ್ನು ಆಚರಿಸುತ್ತಿದ್ದುದು ವಿಶಿಷ್ಟವಾಗಿತ್ತು. ಭಾರತದ ಪ್ರಮುಖ ನಗರಗಳಲ್ಲಿ ಸಂಗೀತ ಕಛೇರಿಗಳನ್ನು ನಡೆಸಿ ಕೃಷ್ಣಾಬಾಯಿ ಅಪಾರ ಜನಮನ್ನಣೆ ಪಡೆದು ಕರ್ನಾಟಕದ ಕೀರ್ತಿಯನ್ನು ರಾಷ್ಟ್ರಮಟ್ಟದಲ್ಲಿ ಮೆರೆಸಿದರು. ತಮ್ಮ ಸಂಗೀತ ಸಂಪ್ರದಾಯವನ್ನು ವ್ಯಾಪಕವಾಗಿ ಹರಡುವಂತೆ ಮಾಡಿದರು. ಕೃಷ್ಣಾಬಾಯಿ ಅವರ ಸಂಗೀತ ಕಲಾ ಸೇವೆಯನ್ನು ಮನಗಂಡ ಕರ್ನಾಟಕ ಸಂಗೀತ ನೃತ್ಯ ಅಕ್ಯಾಡೆಮಿ **೧೯೬೪-೬೫** ಸಾಲಿನ ವಾರ್ಷಿಕ ಪ್ರಶಸ್ತಿ ನೀಡಿ ಗೌರವಿಸಿತು.

# ಶ್ರೀಮತಿ ಲತಾ ಜಹಾಗೀರದಾರ

ಮಹಾನ್ ಸಂಗೀತಗಾರರೆಲ್ಲ ಹುಟ್ಟುತ್ತ ಅಜ್ಞಾತರು, ಬೆಳೆಯುತ್ತ ಜ್ಞಾತರು. ಹುಟ್ಟಿದ ಊರಿಗೆ ಬೆಳೆದ ನಾಡಿಗೆ ಬಾಳಿದ ಸಮಾಜಕ್ಕೆ ವಿಶೇಷ ಮನ್ನಣೆಯನ್ನು ಸಾಧಿಸಿ ಕೊಡುತ್ತಾರೆ. ಶಾಶ್ವತ ಕೀರ್ತಿಯನ್ನು ತಂದುಕೊಡುತ್ತಾರೆ. ಈ ಮಹಾನ್ ಸಂಗೀತಗಾರರು. ಇದಲ್ಲವೇ ಜೀವನದ ಸಾರ್ಥಕತೆ !

ತಮ್ಮ ಸಂಗೀತದಿಂದ ನಾಡಿನ ತುಂಬೆಲ್ಲ ಮನೆ ಮಾತಾಗಿರುವ ಶ್ರೀಮತಿ ಲತಾ ಜಹಾಗೀರದಾರ ಅವರು ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ಅಗರಖೇಡ ಗ್ರಾಮದ ದಿ. ಕೆ.ಆರ್. ಜಹಾಗೀರದಾರ ಮತ್ತು ಶ್ರೀಮತಿ ಗೋದಾವರಿಬಾಯಿ ಅವರ ಪುತ್ರಿ. ನಾಡಿನ ಹೆಸರಾಂತ ನಾಟಕಕಾರ, ಸಾಹಿತಿ ಶ್ರೀರಂಗ ಮೊಮ್ಮಗಳು. **೨೬**ನೇ ಸೆಪ್ಟೆಂಬರ್ **೧೯೫೪**ರಲ್ಲಿ ಸಾಹಿತಿ, ಸಂಗೀತಗಾರರ ತವರು ಧಾರವಾಡದಲ್ಲಿ ಜನಿಸಿದ ಲತಾ ಅವರು ಪುಟ್ಟ ಬಾಲಕಿಯಾಗಿರುವಾಗಲೇ ತಮ್ಮ ತಾಯಿ ಹಾಡುತ್ತಿದ್ದ ದೇವರನಾಮಗಳನ್ನು ಕೇಳಿ ಅನುಕರಣೆ ಮಾಡುತ್ತ ಸಂಗೀತದತ್ತ ಒಲವು ಬೆಳೆಸಿಕೊಂಡರು. ಸಂಗೀತದ ಕುರಿತು ಇವರಿಗಿರುವ ಆಸಕ್ತಿ, ಒಲವು ಗುರುತಿಸಿ ಇವರ ಪಾಲಕರು ವಿಜಯಪುರ (ವಿಜಾಪುರ)ದ ವಿದ್ವಾನ್ ಬಸಪ್ಪ ಹರಕಲ್ಲ ಇವರ ಹತ್ತಿರ ಸಂಗೀತ ಶಿಕ್ಷಣ ಕೊಡಿಸಿದರು. ಇವರ ಮಾರ್ಗದರ್ಶನದಲ್ಲಿ ಸಂಗೀತ ಕಲಿತು ವಿದ್ವತ್ ಪರೀಕ್ಷೆಯಲ್ಲಿ **ಕರ್ನಾಟಕ ರಾಜ್ಯಕ್ಕೆ ಎರಡನೇ ಸ್ಥಾನವನ್ನು** ಪಡೆದರು.

ವಿದ್ಯಾರ್ಥಿ ದೆಸೆಯಿಂದಲೇ ತಮ್ಮಲ್ಲಿರುವ ಪ್ರತಿಭೆಯನ್ನು ಅನಾವರಣಗೊಳಿಸುತ್ತ ಅನೇಕ ಸಂಗೀತ ಸ್ಪರ್ಧೆಗಳಲ್ಲಿ ಪ್ರಥಮ ಬಹುಮಾನ ಪಡೆದಿದ್ದಲ್ಲದೆ ಕೆಲವು ನಾಟಕಗಳಲ್ಲಿಯೂ ಅಭಿನಯಿಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದರು.

ಸಂಗೀತದ ಜೊತೆಗೆ ಸಂಸ್ಕೃತ ವಿಷಯವನ್ನು ಪ್ರಧಾನ ವಿಷಯವನ್ನಾಗಿ ಆಯ್ದುಕೊಂಡು ಬಿ.ಎ. ಪದವಿಯನ್ನು ಪಡೆದ ಬಳಿಕ ಧಾರವಾಡದಲ್ಲಿ ತಮ್ಮ ಸಂಗೀತವನ್ನು ಮುಂದುವರಿಸಿ ಸುಪ್ರಸಿದ್ಧ ಸಂಗೀತಗಾರರಾದ ದಿ. ಡಾ. ಮಲ್ಲಿಕಾರ್ಜುನ ಮನ್ಸೂರ, ದಿ. ಪಂ. ಬಸವರಾಜ ರಾಜಗುರು, ದಿ. ಪಂ. ರಾಜೀವ ಪುರಂದರೆ ಹಾಗೂ ಪಂ. ಸಂಗಮೇಶ್ವರ ಗುರುವ, ದಿ. ವಿದುಷಿ ಜಾನಕಿ ಅಯ್ಯರ, ದಿ. ಪಂ. ಪಂಚಾಕ್ಷರಿಸ್ವಾಮಿ ಮತ್ತಿಕಟ್ಟಿ ಮುಂತಾದವರ ಮಾರ್ಗದರ್ಶನದಲ್ಲಿ ಸಂಗೀತದಲ್ಲಿ ಸ್ನಾತಕೋತ್ತರ ಪದವಿಯನ್ನು ಪ್ರಥಮ ವರ್ಗದಲ್ಲಿ ಉತ್ತೀರ್ಣರಾದರು. ಜೈಪುರ–ಗ್ವಾಲಿಯರ್–ಕಿರಾನಾ ಘರಾಣೆಗಳನ್ನು ಅಭ್ಯಸಿಸಿ ತಮ್ಮ ಶಾಸ್ತ್ರೀಯ ಸಂಗೀತದಲ್ಲಿ ವಿವಿಧ ಗಾಯನ ಶೈಲಿಗಳನ್ನು ಅಳವಸಿಕೊಂಡಿರುತ್ತಾರೆ. ಡಾ. ಮನ್ಸೂರ ಅವರ ಸಮ್ಮುಖದಲ್ಲಿ (ಶ್ರೀ ರಾಗವನ್ನು) ಪ್ರಸ್ತುತಪಡಿಸಿ ವಿಶೇಷ ಪ್ರಶಂಸೆಗೆ ಪಾತ್ರರಾದರು.

ವರಕವಿ ದ.ರಾ. ಬೇಂದ್ರೆ ವಿರಚಿತ ತುತ್ತಿನ ಚೀಲ ಎಂಬ ಹಾಡು ಹಸಿವು ಎಂಬ ರೂಪದಲ್ಲಿ ಲತಾ ಅವರು ಹಾಡಿದ ಹಾಡು ದೆಹಲಿಯಿಂದ ಎಲ್ಲ ಬಾನುಲಿ ಕೇಂದ್ರಗಳಿಂದ ಏಕಕಾಲಕ್ಕೆ ಪ್ರಸಾರಗೊಂಡು ದೇಶದ ಸಂಗೀತಾಸಕ್ತರ ಗಮನ ಇವರತ್ತ ಹರಿಯುವಂತೆ ಮಾಡಿತು.

ಶ್ರೀಮತಿ ಲತಾ ಅವರು ಆಕಾಶವಾಣಿಯ **'ಎ'** ಗ್ರೇಡ್ ಕಲಾವಿದರಾಗಿದ್ದಾರೆ. ಇವರ ಸುಗಮ ಸಂಗೀತದ ಅನೇಕ ಕಾರ್ಯಕ್ರಮಗಳು ಕರ್ನಾಟಕ ಮಹಾರಾಷ್ಟ್ರಗಳ ಬಾನುಲಿ ಕೇಂದ್ರಗಳಿಂದ ಈಗಲೂ ಪ್ರಸಾರಗೊಳ್ಳುತ್ತವೆ.

ಪ್ರಶಸ್ತಿಗಳು ತಮ್ಮನ್ನು ಅರಸಿಕೊಂಡು ಬರಬೇಕೆನ್ನುವ ಶ್ರೀಮತಿ ಲತಾ ಜಹಾಗೀರದಾರ ಅವರಿಗೆ ಅನೇಕ ಪ್ರಶಸ್ತಿಗಳು ಹುಡುಕಿಕೊಂಡು ಬಂದಿವೆ.

ಶ್ರೀಮತಿ ಲತಾ ಅವರು ಈಗಿನ ಯುವ ಜನಾಂಗ ಆಧುನಿಕ ಶೈಲಿಯ ಸಂಗೀತ ಬಗ್ಗೆ ಹೀಗೆ ಅಭಿಪ್ರಾಯಪಡುತ್ತಾರೆ. ಇತ್ತೀಚಿನ ಸಂಗೀತದಲ್ಲಿ ಶಾಂತಿಯೇ ಇರುವದಿಲ್ಲ. ಕಿವಿ ಗಡಚುವ ಚಿತ್ರ ವಿಚಿತ್ರ ವಾದ್ಯಾಗಳ ನಾದ ಕೇಳಲು ಅಸಹನೀಯ. ಈಗಿನ ಸಂಗೀತ ಮನರಂಜನೆ ಎನಿಸಿದರೂ ಅಷ್ಟೇ ಬೇಗ ಮರೆಯಾಗುತ್ತದೆ. ಶಾಶ್ವತ ಆನಂದ-ಸಂತೋಷ ನೀಡುವದು, ಉಳಿಯುವದು ಶಾಸ್ತ್ರೀಯ ಸಂಗೀತ ಮಾತ್ರ. ವಿಜಯಪುರದ ದರಬಾರ ಮಾಧ್ಯಮಿಕ ಶಾಲೆಯಲ್ಲಿ ಸಂಗೀತ ಶಿಕ್ಷಕಿಯಾಗಿ ಸೇವೆ ಸಲ್ಲಿಸಿರುವರು.

**೨೦೦೫-೦೮** ರವರೆಗೆ ಕರ್ನಾಟಕ ಸಂಗೀತ ನೃತ್ಯ ಅಕ್ಯಾಡೆಮಿ ಮೊದಲ ಮಹಿಳಾ ಸದಸ್ಯೆಯಾಗಿ ಕಾರ್ಯನಿರ್ವಹಿಸಿದ್ದಾರೆ.

ಸ್ವರ ಸಂಯೋಜಕಿಯಾಗಿ ಹೆಸರು ಮಾಡಿದ ಲತಾ ಅವರು, ಮುಂತಾದ ಧ್ವನಿಸುರುಳಿ, ಸಿ.ಡಿ.ಗಳನ್ನು ಹೊರತಂದಿದ್ದಾರೆ. ಇವರು ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ ಮಾತ್ರವಲ್ಲದೇ ಠುಮರಿ, ತರಾನಾ, ಭಾವಗೀತೆ, ಭಕ್ತಿಗೀತೆ, ವಚನ, ಗಝಲ್‌ಗಳು ಮುಂತಾದವುಗಳನ್ನು ಭಾವಪೂರ್ಣ ಹಾಡುತ್ತಾರೆ.

ಇವರಿಗೆ ಸಂಘ-ಸಂಸ್ಥೆಗಳು-ಮಠಗಳು ಮುಂತಾದವುಗಳಿಂದ ಬಿರುದು-ಪ್ರಶಸ್ತಿ-ಸನ್ಮಾನಗಳು ದೊರೆತಿವೆ. **೨೦೧೩-೧೪** ಸಾಲಿನ **'ಕರ್ನಾಟಕ ಕಲಾಶ್ರೀ',** ಮತ್ತು ಕರ್ನಾಟಕ ರಾಜ್ಯೋತ್ಸವ ಸಮಿತಿ, ಬಿಜಾಪುರ ಇವರಿಂದ ಸನ್ಮಾನ ಪತ್ರ.

ನಾಡಿನಾದ್ಯಂತ ಇವರು ಸಂಗೀತ ಕಾರ್ಯಕ್ರಮ ಕೊಡುತ್ತ ಬಂದಿರುವರು. ಅದರಲ್ಲೂ ಸುಗಮ ಸಂಗೀತದಲ್ಲಿ ಹೆಚ್ಚಿನ ಮೆರುಗು ಇರುತ್ತದೆ. ಇವರು ಭಕ್ತಿಗೀತೆ, ಸುಪ್ರಭಾತ ಮುಂತಾದ ಧ್ವನಿಸುರುಳಿಗಳನ್ನು ಹೊರತಂದಿದ್ದಾರೆ.

**ಕಾರ್ಯಕ್ರಮಗಳು:** ಪಟ್ಟದಕಲ್ಲು ಮಹೋತ್ಸವ, ಸಿಂದಗಿಯಲ್ಲಿ ಭಾವಗೀತೆ ಸಂಜೆ, ನವರಸ ಸಂಗೀತೋತ್ಸವ ಮುಂತಾದವುಗಳು.

# ಹಿಂದುಸ್ತಾನಿ ಸಂಗೀತ–ಗಮಕ ವಿದುಷಿ
# ಶ್ರೀಮತಿ ಶಾಂತಾ ಕೌತಾಳ



ಶ್ರೀಮತಿ ಶಾಂತಾ ಅವರು **೧೯೩೨** ಡಿಸೆಂಬರ್ ೫ ರಂದು ವಿಜಯಪುರದಲ್ಲಿ ಜನಿಸಿದರು. ಇವರ ತಂದೆ ರಾಘವಾಚಾರ್ಯ ಉಮರ್ಜಿ. (ಕೋಲ್ಹಾರ). ತಾಯಿ ತುಂಗಾಬಾಯಿ. ಚಿಕ್ಕಂದಿನಲ್ಲಿಯೇ ತಂದೆ–ತಾಯಿಯನ್ನು ಕಳೆದುಕೊಂಡ ಶಾಂತಾ ಅವರು ಬೆಳದಿದ್ದು ಸೋದರಮಾವ ಶಾಮರಾವ್ ತಂಗಡಿ ಅವರ ಆಶ್ರಯದಲ್ಲಿ. ಶಾಮರಾವ್ ಅಂಧ ಕಲಾವಿದರು. ಇವರು ಪ್ರಸಿದ್ಧ ನಾಟಕಕಾರು ಮತ್ತು ಸಂಗೀತ ಕಲಾವಿದರು. ಶ್ರೀಮತಿ ಶಾಂತಾ ಕೌತಾಳ ಸೋದರಮಾವನಿಂದ ಸಂಗೀತದ ಆರಂಭಿಕ ಶಿಕ್ಷಣ ಪಡೆದರು.

**೧೯೪೭**ರಲ್ಲಿ ಶ್ರೀ ಶಾಮರಾವ್ ಕೌತಾಳ (ಮನಗೂಳಿ) ಇವರೊಂದಿಗೆ ಶಾಂತಾ ಅವರ ಮದುವೆ ಜರುಗಿತು. ಪತಿಯ ಉತ್ತೇಜನದಿಂದ ಮತ್ತೆ ಇವರು ಸಂಗೀತಾಭ್ಯಾಸವನ್ನು ಆರಂಭಿಸಿದರು. **೧೯೭೪** ರಲ್ಲಿ ಗೋಕಾಕದಲ್ಲಿ ಶ್ರೀ ಅನಂತ ತೇರದಾಳ ಇವರಿಂದ ಹಿಂದುಸ್ತಾನಿ ರಾಗಗಳನ್ನು ಕಲಿತರು. ಮುಂದೆ ಶ್ರೀ ಈಶ್ವರಪ್ಪ ಮಿಣಚಿ ಇವರಲ್ಲಿ ಮುಂದುವರಿಸಿದರು. ವಿಜಯಪುರದಲ್ಲಿ ಶ್ರೀ ಬಸಪ್ಪ ಹೆರಕಲ್ಲ ಇವರಿಂದ ಮಾರ್ಗದರ್ಶನ ಪಡೆದರು. **೧೯೭೫** ರಿಂದ **೨೦೦೭** ರವರೆಗೆ ಧಾರವಾಡ ಆಕಾಶವಾಣಿಯಲ್ಲಿ ಶಾಂತಾ ಕೌತಾಳರು ಸುಗಮ ಸಂಗೀತ ಕಾರ್ಯಕ್ರಮ ನೀಡಿದ್ದಾರೆ.

ಸುಗಮ ಸಂಗೀತ ಹಾಗೂ ಹಿಂದುಸ್ತಾನಿ ಸಂಗೀತದೊಂದಿಗೆ ಶ್ರೀಮತಿ ಶಾಂತಾ ಅವರು ಗಮಕ ಕ್ಷೇತ್ರದಲ್ಲೂ **೨೦** ವರ್ಷಗಳಿಂದ ಸೇವೆ ಸಲ್ಲಿಸಿದ್ದಾರೆ. ಶ್ರೀ ಸುರೇಂದ್ರ ದಾನಿ ಹಾಗೂ ಶ್ರೀ ರಮಾಕಾಂತ ಟಂಕಸಾಲಿ ಇವರ ಮಾರ್ಗದರ್ಶನದಲ್ಲಿ ಕನ್ನಡ ಕಾವ್ಯಗಳ ವಚನವನ್ನು ಹಿಂದುಸ್ತಾನಿ ರಾಗಗಳಲ್ಲಿ ಮಾಡಿದ್ದಾರೆ.

ಇವರ ವಚನಕ್ಕೆ ಡಾ. ಕೃಷ್ಣ ಕೋಲ್ಹಾರ ಕುಲಕರ್ಣಿ ಹಾಗೂ ಕಲ್ಯಾಣರಾವ್ ದೇಶಪಾಂಡೆ ಇವರು ವ್ಯಾಖ್ಯಾನ ನೀಡಿದ್ದಾರೆ. ಇವರು ತೊರವೆ ರಾಮಾಯಣ, ಗದುಗಿನ ಭಾರತ, ಜೈಮಿನಿ ಭಾರತ, ಬಸವ ಪುರಾಣ, ಹರಿಶ್ಚಂದ್ರ ಕಾವ್ಯ ಮುಂತಾದವುಗಳ ವಾಚನ ಮಾಡಿದ್ದಾರೆ. ತೊರವಿ ನರಸಿಂಹ ದೇವಸ್ಥಾನ **೨೦೧೨,** ಕೋಲ್ಹಾರ ಶಂಕರ ವಿದ್ಯಾಲಯ **೨೦೦೭,** ಅಕ್ಷಯ ಪಾತ್ರೆ ಗದುಗಿನ ಅಖಿಲ ಕರ್ನಾಟಕ ಗಮಕ ಸಮ್ಮೇಳನ ಧಾರವಾಡ **೧೯೯೮** ಭಾರತ, ಹೀಗೆ ಇನ್ನೂ ಅನೇಕ ಕಡೆಗಳಲ್ಲಿ ಗಮಕ ಕಾರ್ಯಕ್ರಮ ನಡೆದಿರುತ್ತವೆ.

ಪುರಂದರದಾಸರ ಪುಣ್ಯತಿಥಿ, ಕನಕದಾಸರ ಜಯಂತಿ, ವ್ಯಾಸರಾಯರ ಆರಾಧನೆ ಮುಂತಾದ ಕಾರ್ಯಕ್ರಮಗಳನ್ನು ಆಯೋಜಿಸಿ ದಾಸರ ಕೀರ್ತನೆ, ಕಾವ್ಯ ವಾಚನ ಮಾಡುತ್ತ ಸಂಗೀತ ಸಾಹಿತ್ಯ ಸೇವೆ ಸಲ್ಲಿಸಿರುವರು. ಇವರು ತೊರವೆ ನರಸಿಂಹ ಸುಪ್ರಭಾತ, ದ್ವಾದಶ ಸ್ತೋತ್ರ, ಗೋಪಿಗೀತ, ಕಾರ್ತಿಕಸ್ವಾಮಿ ಸುಪ್ರಭಾತ ಮುಂತಾದ ಕ್ಯಾಸೆಟ್ಟುಗಳಿಗೆ ಧ್ವನಿ ನೀಡಿದ್ದಾರೆ. ಸರಳ–ಸುಸಂಸ್ಕೃತ ಸ್ವಭಾವದ ಸಜ್ಜನರಾದ ಇವರ ಸಂಗೀತ ಸೇವೆ ಮೆಚ್ಚಿ ಕರ್ನಾಟಕ ಸಂಗೀತ ನೃತ್ಯ ಅಕ್ಯಾಡಮಿ ಇವರಿಗೆ ಕಲಾಶ್ರೀ ಪ್ರಶಸ್ತಿ ನೀಡಿದ್ದಾರೆ. **೮೨**ರ ಇಳಿವಯಸ್ಸಿನಲ್ಲೂ ಇವರ ಸಂಗೀತ ಸಾಹಿತ್ಯ ಸೇವೆ ಅಚ್ಚರಿ ಮೂಡಿಸುವಂಥದು ಎಲೆ–ಮರೆ–ಕಾಯಿಯಂತೆ ಸೇವೆ ಸಲ್ಲಿಸುತ್ತಿರುವ ಇವರು ಶತಾಯುಷಿಗಳಾಗಲಿ ಎಂದು ಹಾರೈಸೋಣ.

**ಪ್ರಶಸ್ತಿಗಳು:** ಕುಂಭಕೋಣದಲ್ಲಿ ವಿಜಯ ದುಂದುಭಿ ಪ್ರಶಸ್ತಿ, ರಾಯಚೂರಿನಲ್ಲಿ ಸಿರಿ ಗೋವಿಂದ ಪ್ರಶಸ್ತಿ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ವಾರ್ಷಿಕ ಸಾಧನಾ ಕಲಾಶ್ರೀ ಪ್ರಶಸ್ತಿ.

**ಕಾರ್ಯಕ್ರಮಗಳು:** ಮೈಸೂರು ದಸರಾ ಚಾಮುಂಡೇಶ್ವರಿ ದೇವಸ್ಥಾನ, ಮೈಸೂರಿನ ಜಗನ್ಮೋಹನ ಪ್ಯಾಲೇಸ್, ಸೋಲಾಪೂರ, ವಿಜಯಪುರ, ಕಲಬುರಗಿ, ಕೊಯಮತ್ತೂರು, ಉಡುಪಿ ಮುಂತಾದವುಗಳು.

ಇಂಥವರ ವಿದ್ವಾಂಸರ ಕಲಾಸೇವೆ ಕರ್ನಾಟಕ ಗಾನಕಲಾ ಪರಿಷತ್ತು ವಿಜಯಪುರದಲ್ಲಿ **೪೫**ನೇ ಹಿರಿಯ ಸಂಗೀತ ವಿದ್ವಾಂಸರ **೨೭**ನೇಯ ಯುವ ಸಂಗೀತ ವಿದ್ವಾಂಸರ ರಾಜ್ಯ ಮಟ್ಟದ ಸಮ್ಮೇಳನದ ವಿದ್ವತ್ ಸದಸ್ಸಿನಲ್ಲಿ ಸನ್ಮಾನಿಸಲು ಹರ್ಷಿಸುತ್ತದೆ.

# ಶ್ರೀಮತಿ ವಿತಾಬಾಯಿ ದತ್ತಾತ್ರೇಯ ಕಾನವಿಂದೆ, ಬೆಳಗಾವಿ

ಖ್ಯಾತ ಸುಗಮ ಸಂಗೀತ ಕಲಾವಿದೆ ಶ್ರೀಮತಿ ವಿತಾಬಾಯಿ ದತ್ತಾತ್ರೇಯ ಕಾನವಿಂದೆ ಅವರು ಜನಿಸಿದ್ದು **೧೯೩೭ ಮೇ ೫** ರಂದು. ಬಾಲ್ಯದಿಂದಲೇ ತಂದೆಯವರ ಭಜನೆಯ ಪ್ರಭಾವ ಇವರ ಮೇಲಾಯಿತು. ಏಳನೇ ವಯಸ್ಸಿನಿಂದಲೇ ಭಜನೆಗಳನ್ನು ಹಾಡಲು ಪ್ರಾರಂಭಿಸಿದ ವಿತಾಬಾಯಿ ಅವರ ಸುಶ್ರಾವ್ಯ ಕಂಠಮಾರ್ಧುರ್ಯ ಎಲ್ಲರ ಗಮನ ಸೆಳೆದು ಪ್ರಶಂಸೆಗಳು ದೊರಕಿದವು. ಇದು ಶಾಸ್ತ್ರೀಯ ಸಂಗೀತ ಕಲಿಕೆಗೆ ಬುನಾದಿ ಹಾಕಿತು. ಆದರೆ ತಂದೆಯ ಉದ್ಯೋಗದ ವರ್ಗಾವಣೆಯ ನಿಮಿತ್ತ ಶಾಲೆಯ ಶಿಕ್ಷಣದ ಜೊತೆಗೆ ಸಂಗೀತಾಭ್ಯಾಸವೂ ಕಷ್ಟವೆನಿಸಿತು. ಒಮ್ಮೆ ಬೆಳಗಾವಿಯಲ್ಲಿ ಪಂ. ರಾಜೀವ ಪುರಂದರೆ ಬುವಾ ಅವರ ಸಂಗೀತ ಕಾರ್ಯಕ್ರಮ ಕೇಳಿ ಪ್ರಭಾವಿತರಾದ ವಿತಾಬಾಯಿ ಅವರು ಪಂ. ರಾಜೀವ ಅವರ ಬಳಿ ತಮ್ಮ ಸಂಗೀತ ಕಲಿಕೆಯ ಅಪೇಕ್ಷೆಯನ್ನು ಅರುಹಿದರು. ಪುಟ್ಟ ಬಾಲಕಿಯ ಸಂಗೀತಾಪೇಕ್ಷೆಯನ್ನು ರಾಜೀವ ಪುರಂದರೆ ಬುವಾ ಅವರು ಹಿಂದುಸ್ತಾನಿ ಶಾಸ್ತ್ರೀಯ ಸಂಗೀತವನ್ನು ಕಲಿಸಲು ಒಪ್ಪಿಕೊಂಡರು. ಇದರ ಫಲವಾಗಿ ಮರಾಠಿ, ಹಿಂದಿ ಭಕ್ತಿಗೀತೆಗಳು ಇವರ ಸುಶ್ರಾವ್ಯವಾಗಿ ಹೊರಹೊಮ್ಮಿದವು. ಮುಂದೆ ಬೆಳಗಾವಿಯ ಪ್ರಸಿದ್ಧ ಗಾಯಕರಾದ ಪಂ. ಮೃತ್ಯುಂಜಯಬುವಾ ಪುರಾಣಿಕಮಠ, ಎ.ವಿ. ಕುಲಕರ್ಣಿ ಅವರಲ್ಲಿ ಮುಂದುವರಿಸಿದರು.

**೧೯೫೮**ರಲ್ಲಿ ಆಕಾಶವಾಣಿ ಕಲಾವಿದರಾಗಿ ಆಯ್ಕೆಯಾದ ಇವರು ತನ್ಮೂಲಕ ಮರಾಠಿ ಸುಗಮ ಸಂಗೀತವನ್ನು ಪ್ರಸ್ತುತಪಡಿಸಿದರು. ಅನೇಕ ಸಭೆ ಸಮಾರಂಭಗಳಲ್ಲಿ, ಗಣೇಶೋತ್ಸವಗಳಲ್ಲಿ ಕನ್ನಡ, ಹಿಂದಿ ಹಾಗೂ ಮರಾಠಿ ಮೂರು ಭಾಷೆಗಳಲ್ಲಿ ಸುಶ್ರಾವ್ಯವಾಗಿ ಭಕ್ತಿಗೀತೆ, ಭಾವಗೀತೆಗಳನ್ನು ಹಾಡಿ ಬೆಳಗಾವಿಯಲ್ಲಿ ಜನಪ್ರಿಯತೆ ಗಳಿಸಿದರು. ಬೆಳಗಾವಿ ಮಾತ್ರವಲ್ಲದೆ ಹುಬ್ಬಳ್ಳಿ, ದಾವಣಗೆರೆ, ಬಾಗಲಕೋಟೆ, ಜಮಖಂಡಿ, ಮಿರಜ, ಸಾವಂತವಾಡಿ, ಗೋವಾ ಗೋಕಾಕ, ಕಾರವಾ, ಶಿರಸಿ, ಮೊದಲಾದ ಕಡೆ ಶ್ರೀಮತಿ ವಿತಾಬಾಯಿ ಅವರು ಕಾರ್ಯಕ್ರಮ ನೀಡಿದ್ದಾರೆ. ಇವರ ಸಂಗೀತ ಕಾಯಕಕ್ಕೆ ಬಾಳಪ್ಪ ಹುಕ್ಕೇರಿ ಪ್ರಶಸ್ತಿ ಲಭಿಸಿದೆ.

ತ್ರಿಭಾಷಾ ಸುಗಮ ಸಂಗೀತ ಗಾಯಕಿಯಾದ ಶ್ರೀಮತಿ ಕಾನವಿಂದೆ ಅವರ ಅನುಪಮ ಸೇವೆಯನ್ನು ಗುರುತಿಸಿ ಸಂಗೀತ ನೃತ್ಯ ಅಕ್ಯಾಡಮಿಯು **೨೦೧೩-೧೪**ರ ಸಾಲಿನ ಕರ್ನಾಟಕ ಕಲಾಶ್ರೀ ವಾರ್ಷಿಕ ಪ್ರಶಸ್ತಿ ನೀಡಿ ಗೌರವಿಸಿದೆ.

# ಶ್ರೀಮತಿ ನಾಗಲಾಂಬಿಕಾ ಚಂದ್ರಶೇಖರ ರಾಯಚೂರು

ಡಾ. ಬಸವರಾಜ ಮತ್ತು ರಾಮದೇವಮ್ಮಣ್ಣಿ ಅವರ ಪುತ್ರಿಯಾಗಿ **೧೯೪೧ ಆಗಸ್ಟ್ ೨** ರಂದು ಜನಿಸಿದ ಶ್ರೀಮತಿ ನಾಗಲಾಂಬಿಕಾ ಅವರ ಹುಟ್ಟೂರು ಸಕಲೇಶಪುರ. ಬಾಲ್ಯದಿಂದಲೇ ಸಂಗೀತದತ್ತ ಒಲವು. ಹೀಗಾಗಿ ಎಳೆವಯಸ್ಸಿನಲ್ಲಿಯೇ ಸಂಗೀತ ಕಲೆಯತ್ತ ಒಲಿದುಬಂದಿತು. ಕರ್ನಾಟಕಿ ಸಂಗೀತ ಗಾಯಕಿ ಸುಬ್ಬಮ್ಮನವರಲ್ಲಿ ಕಲಿಕೆ ಪ್ರಾರಂಭಗೊಂಡಾಗ ನಾಗಲಾಂಬಿಕಾ ಅವರಿಗೆ ೧೦ ವರ್ಷಗಳು. ನಂತರ ಕರ್ನಾಟಕಿ ಸಂಗೀತದ ಸುವಿಖ್ಯಾತ ವಿದುಷಿ ರಾಜಮ್ಮ ಕೇಶವಮೂರ್ತಿ ಅವರಲ್ಲಿ ಆಳವಾದ ಮಾರ್ಗದರ್ಶನ ಪಡೆದರು. ನಂತರ ಖ್ಯಾತ ಕ್ಲ್ಯಾರಿಯೋನೆಟ್ ವಾದಕರಾದ ಪಂ. ನರಸಿಂಹಲು ವಡವಾಟಿ ಅವರಲ್ಲಿ **ಎಂಟು** ವರ್ಷಗಳವರೆಗೆ ಹಿಂದುಸ್ತಾನಿ ಸಂಗೀತಾಭ್ಯಾಸ. ನಂತರ ಪಂ. ಮಾಣಿಕರಾವ್ ರಾಯಚೂರಕರ್ ಅವರಲ್ಲಿ ಮುಂದುವರಿಸಿದರು. ನಂತರದ ವರ್ಷಗಳಲ್ಲಿ ಮೇವಾಟಿ ಘರಾಣೆಯ ಸುಪ್ರಸಿದ್ಧ ಗಾಯಕರಾದ ಪಂ. ಜಸರಾಜ್ ಅವರ ಶಿಷ್ಯರಾದ ಮುಂಬೈನ ಪಂ. ಚಂದ್ರಶೇಖರಸ್ವಾಮಿ ಮೂಲಚಿಂತಿ ಅವರಿಂದಲೂ ಸಂಗೀತದ ಶಿಕ್ಷಣ ದೊರಕಿತು.

ವಿಜ್ಞಾನ ಪದವೀಧರರಾದ ನಾಗಲಾಂಬಿಕಾ ಅವರು ರಾಯಚೂರಿನ ಹಮ್‌ದರ್ಧ ಪ್ರೌಢಶಾಲೆಯಲ್ಲಿ ವಿಜ್ಞಾನ ಶಿಕ್ಷಕಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಗಾಯನದಲ್ಲಿ ಅಪಾರ ಒಲವನ್ನು ಹೊಂದಿದ ನಾಗಲಾಂಬಿಕೆಯವರು ಗುಲಬರ್ಗಾ ಆಕಾಶವಾಣಿ ಕೇಂದ್ರದಲ್ಲಿ ಸುಗಮ ಸಂಗೀತ ಕಲಾವಿದೆಯಾಗಿ ಆಯ್ಕೆಯಾದವರು. ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ, ಸುಗಮ ಸಂಗೀತ, ದಾಸರ ಪದ, ವಚನ ಗಾಯನ ಎಲ್ಲ ಪ್ರಕಾರಗಳ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಿರುವ ಹಿರಿಮೆ ಶ್ರೀಮತಿ ನಾಗಲಾಂಬಿಕಾ ಚಂದ್ರಶೇಖರ ಅವರದು.

*'ನಾನು ನಿನಗೊಲಿದೆ'* ಶೀರ್ಷಿಕೆಯ ಅಕ್ಕಮಹಾದೇವಿಯವರ ವಚನಗಳ ಧ್ವನಿಸುರುಳಿ ಹೊರತಂದಿರುವ ಶ್ರೀಮತಿ ನಾಗಲಾಂಬಿಕಾ ಒಬ್ಬ ಮಹಿಳಾ **ವಚನಕಾರ್ತಿಯ ಪೂರ್ಣ ಹಾಡಿದ ಮೊದಲ ಗಾಯಕಿ** ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಹಂಪಿ ಉತ್ಸವ, ಕರ್ನಾಟಕ ಸಂಗೀತ ನೃತ್ಯ ಅಕ್ಯಾಡೆಮಿ ಅವರು ರಾಯಚೂರಿನಲ್ಲಿ ನಡೆಸಿದ ಜಿಲ್ಲಾ ಸಂಗೀತ ನೃತ್ಯೋತ್ಸವ, ಮೈಸೂರಿನಲ್ಲಿ ನಡೆದ ಪುರಂದರ ಆರಾಧನೋತ್ಸವ, ಬೆಂಗಳೂರು, ಮಾನ್ವಿ ಮೊದಲಾದೆಡೆಗಳಲ್ಲದೆ ಅಮೆರಿಕದ ಉತ್ತರ ಕೆರೊಲಿನಾ, ಸ್ಯಾನ್ ಫ್ರಾನ್ಸಿಸ್ಕೋ ನಗರಗಳಲ್ಲೂ ಶ್ರೀಮತಿ ನಾಗಲಾಂಬಿಕೆಯವರು ಸಂಗೀತ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದಾರೆ.

**೨೦೦೩**ರಲ್ಲಿ ರಾಯಚೂರು ಜಿಲ್ಲಾ ಕನ್ನಡ ರಾಜ್ಯೋತ್ಸವ ಆಚರಣೆಯ ಸಂದರ್ಭದಲ್ಲಿ **'ಕನ್ನಡ ರಾಜ್ಯೋತ್ಸವ'** ಪ್ರಶಸ್ತಿಗೆ ಭಾಜನರಾಗಿರುವ ಶ್ರೀಮತಿ ನಾಗಲಾಂಬಿಕಾ ಚಂದ್ರಶೇಖರ ಅವರ ಅನುಪಮ ಸೇವೆಯನ್ನು ಗುರುತಿಸಿ, ಕರ್ನಾಟಕ ಸಂಗೀತ ನೃತ್ಯ ಅಕ್ಯಾಡೆಮಿಯು **೨೦೧೩-೧೪**ನೇ ಸಾಲಿನ **'ಕರ್ನಾಟಕ ಕಲಾಶ್ರೀ'** ವಾರ್ಷಿಕ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

# ಶ್ರೀಮತಿ ಮಾಲಾಬಾಯಿ ಎಂ. ಬೀಳಗಿ

ಸಂಗೀತಗಾರರ ಮನೆತನದ ಹಿನ್ನೆಲೆಯುಳ್ಳ ಶ್ರೀಮತಿ ಮಾಲಾಬಾಯಿ ಬೀಳಗಿ ಅವರು ಆಕಾಶವಾಣಿ ಹಾಗೂ ದೂರದರ್ಶನದ ಕಲಾವಿದೆಯಾಗಿ ಪ್ರಸಿದ್ಧಿ ಪಡೆದವರು. ೧೯೫೨ ಡಿಸೆಂಬರ್‌ನಲ್ಲಿ ಸುಪ್ರಸಿದ್ಧ ಸಂಗೀತಗಾರರ ಮನೆತನದಲ್ಲಿ ಜನಿಸಿದ ಮಾಲಾಬಾಯಿ ಬೀಳಗಿ ಅವರ ಹುಟ್ಟೂರು ಬಾಗಲಕೋಟ.

ಹಿಂದಿ, ಮರಾಠಿ ಹಾಗೂ ಕನ್ನಡ ಚಿತ್ರರಂಗಗಳ ಸುಪ್ರಸಿದ್ಧ ಹಿನ್ನೆಲೆ ಗಾಯಕಿ ಅಮೀರಬಾಯಿ ಕರ್ನಾಟಕಿ, ಹಿಂದುಸ್ತಾನಿ ಸಂಗೀತ ಗಾಯಕಿಯರಾದ ಗೌರಜಾನ್ ಬೀಳಗಿ ಹಾಗೂ ಪೂರಾಬಾಯಿ ಬೀಳಗಿ– ಇವರೆಲ್ಲರ ಮೊಮ್ಮಗಳೇ ಮಾಲಾಬಾಯಿ ಬೀಳಗಿ ಅವರು. ಅತೀ ಚಿಕ್ಕ ವಯಸ್ಸಿನಲ್ಲಿಯೇ ಮೂರು ವರ್ಷಗಳವರೆಗೆ ಪಂ. ಮಲ್ಲಿಕಾರ್ಜುನ ಭಜಂತ್ರಿ ಅವರಲ್ಲಿ ಅಭ್ಯಸಿಸಿ, ಜಮಖಂಡಿಯ ಚಿತ್ರಮಂದಿರದಲ್ಲಿ ಅಮೋಘ ನಾಟ್ಯ ಪ್ರಸ್ತುತಪಡಿಸಿ ಸಹಸ್ರಾರು ಶ್ರೋತೃಗಳಿಂದ ಶಹಬ್ಬಾಷಗಿರಿಯನ್ನು ಪಡೆದವರು ಮಾಲಾಬಾಯಿ ಬೀಳಗಿ ಅವರು.

ನಂತರ ಸಂಗೀತ ಕಲಿಕೆಗಾಗಿ ತಾಯಿ ರೋಶನಬಿ ಹಾಗೂ ಪತಿ ಮೊಹಮ್ಮದ ಶರೀಫ್ ಅವರಿಂದ ಪ್ರೋತ್ಸಾಗೊಂಡ ಮಾಲಾಬಾಯಿ ಅವರು ಸುಮಾರು ೧೫ ವರ್ಷಗಳ ಕಾಲ ಪಂಡಿತರಾದ ರಂಗಾಚಾರ್ಯ ಕಾಖಂಡಕಿ ಹಾಗೂ ಶ್ರೀನಿವಾಸಾಚಾರ್ಯ ಕಾಖಂಡಕಿ (ರಾಯಚೂರು) ಅವರಲ್ಲಿ ಕಿರಾಣಾ ಘರಾಣೆಯ ಸಂಗೀತವನ್ನು ಆಳವಾದ ಸಂಗೀತಾಧ್ಯಯನಗೈದು ಉದಯೋನ್ಮುಖ ಗಾಯಕಿಯಾಗಿ ಹೊರಹೊಮ್ಮಿದರು.

೧೯೬೬ರಲ್ಲಿ ಧಾರವಾಡ ಆಕಾಶವಾಣಿಯ ಸಂಗೀತ ಕಲಾವಿದೆಯಾಗಿ ಆಯ್ಕೆಯಾದರು. ರಾಜ್ಯದ ಹಾಗೂ ರಾಷ್ಟ್ರದ ವಿವಿಧೆಡೆಗಳಲ್ಲಿ ಅಂದರೆ ಮೈಸೂರು, ಬೆಂಗಳೂರು, ಶಿವಮೊಗ್ಗ, ಬಳ್ಳಾರಿ, ಮುಂಬೈ, ದಿಲ್ಲಿ, ಗೋವಾಗಳಲ್ಲಿ ತಮ್ಮ ಗಾನಸುಧೆಯನ್ನು ಹರಿಸಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸಂಗೀತ ನೃತ್ಯ ಅಕ್ಯಾಡೆಮಿಗಳು ಆಯೋಜಿಸಿದ್ದ ಸಂಗೀತ ಕಾರ್ಯಕ್ರಮಗಳಲ್ಲಿಯೂ ತಮ್ಮ ಗಾಯನ ಕಾರ್ಯಕ್ರಮ ನೀಡಿದ್ದಾರೆ. ಮುಂಬೈನ ಕರ್ನಾಟಕ ಸಂಘದಿಂದ ಆಯೋಜಿತ ಕಾರ್ಯಕ್ರಮದಲ್ಲಿ ಹರಿಸಿದ ಅವರ ಗಾನಸುಧೆಗೆ ವಿವಿಧ ಪತ್ರಿಕೆಗಳಲ್ಲಿ ಶಹಬ್ಬಾಷಗಿರಿಯನ್ನು ಪಡೆದ ಕಲಾವಿದೆಯಾಗಿದ್ದಾರೆ.

ಚಿತ್ತರಗಿಯ ಶ್ರೀ ಮಹಾಂತಸ್ವಾಮಿಗಳವರು ಮಾಲಾಬಾಯಿ ಬೀಳಗಿ ಅವರಿಗೆ ಗಾನಗಂಗಾ ಎಂಬ ಬಿರುದು ನೀಡಿದ್ದಾರೆ. ಪದ್ಮವಿಭೂಷಣ ಡಾ. ಗಂಗೂಬಾಯಿ ಹಾನಗಲ್, ಪಂ. ಬಸವರಾಜ ರಾಜಗುರು ಅವರ ಪ್ರಶಂಸೆಗಳಿಗೆ ಪಾತ್ರರಾಗಿರುವ ಮಾಲಾಬಾಯಿ ಬೀಳಗಿ ಅವರು ಡಾ. ಶಿವರಾಮ ಕಾರಂತರಿಂದ **ಸ್ವರ್ಣಪ್ರಶಸ್ತಿ** ಸ್ವೀಕರಿಸಿದ್ದಾರೆ. ಬಳ್ಳಾರಿಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಲಲಿತಕಲಾ ಅಕ್ಯಾಡೆಮಿ, ಮುಂಬೈನ ಬಸವ ಸೇವಾ ಮಂಡಳ, ಕರ್ನಾಟಕ ಸಂಘಗಳು ಮಾಲಾಬಾಯಿ ಬೀಳಗಿ ಅವರನ್ನು ಸನ್ಮಾನಿಸಿವೆ. ಮಾಲಾಬಾಯಿ ಬೀಳಗಿ ಅವರು ಮೈಸೂರು ದಸರಾ ಪ್ರಶಸ್ತಿ ಹಾಗೂ ಕರ್ನಾಟಕ ರಾಜ್ಯ ಪ್ರಶಸ್ತಿಗೆ ಭಾಜನರಾಗಿದ್ದಾರೆ.

# ಶ್ರೀಮತಿ ಸುರೇಖಾ ಕುಲಕರ್ಣಿ

**೨೨ನೇ ಮಾರ್ಚ್ ೧೯೬೨** ರಂದು ಜನಿಸಿದ ಶ್ರೀಮತಿ ಸುರೇಖಾ ಕುಲಕರ್ಣಿ ಅವರು ಆಕಾಶವಾಣಿಯ ಶಾಸ್ತ್ರೀಯ ಹಾಗೂ ಸುಗಮ ಸಂಗೀತದ **'ಬಿ'** ಶ್ರೇಣಿಯ ಕಲಾವಿದೆ.

**ಗುರುಪರಂಪರೆ:**

ಶ್ರೀ ನಿಡಗುಂದಿ (ಬಿಜಾಪುರ) ಅವರಲ್ಲಿಯೂ ನಂತರ ಪ್ರಖ್ಯಾತ ಗಾಯಕಿಯಾದ ಶ್ರೀಮತಿ ಜಯಶ್ರೀ ಪಾಟ್ನೆಕರ್ ಬೆಳಗಾವಿ ಇವರ ಹತ್ತಿರ ಸಂಗೀತ ಶಿಕ್ಷಣವಾಯಿತು. ಗ್ವಾಲಿಯರ್ ಮತ್ತು ಪಟಿಯಾಲಾ ಘರಾನಾದಲ್ಲಿ ಸಂಗೀತ ಅಭ್ಯಾಸ. ಆಕಾಶವಾಣಿ ಧಾರವಾಡ, ಗುಲ್ಬರ್ಗಾ, ಶಾಸ್ತ್ರೀಯ ಹಾಗೂ ಸುಗಮ ಸಂಗೀತದಲ್ಲಿ **'ಬಿ'** ಗ್ರೇಡ್ ಕಲಾವಿದೆ.

ಸಂಗೀತದ ವಿದ್ವತ್ ಮತ್ತು ಮುಂಬೈನ ಗಂಧರ್ವ ಮಹಾವಿದ್ಯಾಲಯದ ಸಂಗೀತ ಅಲಂಕಾರ ಪದವಿಯನ್ನು ಪ್ರಥಮ ಶ್ರೇಣಿಯಲ್ಲಿ ಪಡೆದಿರುತ್ತಾರೆ.

**ಕಾರ್ಯಕ್ರಮಗಳು:**

ರಾಜ್ಯದ ಬೆಳಗಾವಿ, ಗುಲ್ಬರ್ಗಾ, ರಾಯಚೂರು, ಧಾರವಾಡ, ಹುಬ್ಬಳ್ಳಿ ಅಲ್ಲದೇ ಮೀರಜ, ಪುಣೆ, ಸೊಲ್ಲಾಪುರ ಮುಂತಾದೆಡೆಗಳಲ್ಲಿ ಇವರ ಶಾಸ್ತ್ರೀಯ ಸಂಗೀತ, ವಚನ, ಸಂತವಾಣಿ, ಭಾವಗೀತೆ, ಗಜಲ್ ಕಾರ್ಯಕ್ರಮಗಳನ್ನು ಕೊಟ್ಟಿರುತ್ತಾರೆ.

**ಸಾಧನೆ:**

ಇವರ ಸಂಗೀತಕ್ಕೆ ಆಕಾಶವಾಣಿ ದಿಲ್ಲಿಯಲ್ಲಿ ಶಾಸ್ತ್ರೀಯ ಸಂಗೀತ ಹಾಡುಗಾರಿಕೆಯಲ್ಲಿ ಎರಡನೇ ಬಹಮಾನ ದೊರೆತಿದೆ.

**ಪ್ರಶಸ್ತಿ:**

**೧೯೮೬**ರಲ್ಲಿ ಗದಗದಲ್ಲಿ ಸಂಗೀತ ನೃತ್ಯ ಅಕಾಡಮಿ ಪುರಸ್ಕಾರ ಅಲ್ಲದೇ ಕರ್ನಾಟಕ ಸಾಹಿತ್ಯ ಅಕಾಡಮಿಯ ಪುರಸ್ಕಾರವೂ ದೊರೆತಿದೆ.

# ಶ್ರೀಮತಿ ಸುಗುಣಾ ಚಂದಾವರಕರ್

**ಜನನ:** ೧೬-೭-೧೯೨೬

**ಜನ್ಮಸ್ಥಳ:** ಮುಂಬೈ

**ಮನೆತನ:** ಸಂಗೀತ ಕಲಾವಿದರ ಮನೆತನ. ಇವರ ಅಕ್ಕ ಶಾಂತಿಮತಿಯವರು ಜಯಪುರ್ ಘರಾಣೆಯ ಸಂಗೀತಗಾರರಾದ ಹೆಸರಾಂತ ಮಂಜೀಖಾನ್‌ರಲ್ಲಿ ಸಂಗೀತ ಕಲಿತವರು. ಅಜ್ಜಿಯ ತಂಗಿ ಇಂದುಮತಿ ಹಟ್ಟಿಯಂಗಡಿ, ಖದೀಂ ಹುಸೇನ್ ಖಾನ್‌ರ ಶಿಷ್ಯೆ.

ಬಾಲ್ಯದಲ್ಲಿಯೇ ಸುಗುಣಾ ಚಂದಾವರಕರ್‌ರವರು ಅಕ್ಕನ ಅನುಕರಣೆ ಮತ್ತು ಮಾರ್ಗದರ್ಶನದಲ್ಲಿ ಸಂಗೀತ ಕಲೆತರು. ಇದಲ್ಲದೇ ಕಾರವಾರದಲ್ಲಿ ಇಂದುಮತಿ ಹಟ್ಟಿಯಂಗಡಿ ಇವರಲ್ಲಿ ಸಂಗೀತ ಕಲೆತರು.

ಭಾತಖಾಂಡೆಯವರ ಶಾಸ್ತ್ರಗ್ರಂಥಗಳ ಮನನ ಮತ್ತು ಸಾಧನೆ, ವಿವಾಹದ ನಂತರ **೧೯೫೪**ರಲ್ಲಿ ಹುಬ್ಬಳ್ಳಿಯಲ್ಲಿ ವೆಂಕಟರಾವ್ ರಾಮದುರ್ಗ ಅವರಲ್ಲಿ ಸ್ವಲ್ಪ ಕಾಲ ಸಂಗೀತ ಕಲೆತರು. **೧೯೫೬**ರಲ್ಲಿ ಬಿಜಾಪುರದಲ್ಲಿ ಭೀಮರಾವ್ ನಿಡಗುಂದಿ ಅವರಲ್ಲಿ, **೧೯೫೮** ರಿಂದ **೧೯೬೨** ರವರೆಗೆ ಮೃತ್ಯುಂಜಯ ಬುವಾ ಪುರಾಣಿಕಮಠ ಅವರಲ್ಲಿ ಗ್ವಾಲಿಯರ್ ಘರಾಣೆಯ ಸಂಗೀತ ಮತ್ತು ಸಂಗಮೇಶ್ವರ ಗುರವ ಅವರಿಂದಲೂ ಕಿರಾಣಾ ಘರಾಣೆಯ ಸಂಗೀತ ಹೀಗೆ ಬೇರೆ ಬೇರೆ ಸಂಗೀತ ಗವಾಯಿಗಳಿಂದ ಇವರಿಗೆ ಸಂಗೀತ ಶಿಕ್ಷಣ ದೊರೆತಿದೆ.

ಇವರು ಎಲೆಮರೆಯ ಕಾಯಿಯಂತೆ. ೫ ದಶಕಗಳಿಗೂ ಮೀರಿ ಸಂಗೀತ ಕಾರ್ಯಕ್ರಮ ಕೊಡುತ್ತಾ ಬಂದಿರುವರು. ವಿದುಷಿ ಸುಗುಣಾ ಚಂದಾವರಕರ್ ಇವರು ಬೆಂಗಳೂರು ಮತ್ತು ಧಾರವಾಡ ಆಕಾಶವಾಣಿ ಕಲಾವಿದರು. ಇವರ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಆಕಾಶವಾಣಿಯಲ್ಲಿ ಪ್ರಸಾರವಾಗುತ್ತಿದೆ.

**ಕಾರ್ಯಕ್ರಮಗಳು:**

**೧೯೬೦**ರಲ್ಲಿ ಬೆಳಗಾವಿಯಲ್ಲಿ ಸಂಗೀತ ಸಮ್ಮೇಳನದಲ್ಲಿ, ಧಾರವಾಡ, ಬೆಂಗಳೂರು ಆಕಾಶವಾಣಿ ಕೇಂದ್ರದಿಂದ, ಮುಂಬೈ, ದೆಹಲಿ, ನಾಗಪುರ, ಜಲಗಾಂವ್ ಔರಂಗಾಬಾದ, ಪುಣೆ ಕೇಂದ್ರಗಳಿಂದ ಇವರ ಗಾಯನ ಪ್ರಸಾರವಾಗಿದೆ. ಇನ್ನೂ ಬೇರೆ ಬೇರೆ ಕಡೆಗಳಲ್ಲಿ ಇವರು ಸಂಗೀತ ಕಾರ್ಯಕ್ರಮ ನೀಡಿದ್ದಾರೆ.

ಇವರ ವಿದ್ವತ್ತನ್ನು ಗುರುತಿಸಿ ರಾಜ್ಯದ ಅನೇಕ ಸಂಘ ಸಂಸ್ಥೆಗಳು ಇವರನ್ನು ಗೌರವಿಸಿವೆ. ಅವುಗಳಲ್ಲಿ ರಾಜ್ಯದ ಸಂಗೀತ ನೃತ್ಯ ಅಕಾಡಮಿ **"ಕರ್ನಾಟಕ ಕಲಾಶ್ರೀ"** ಪ್ರಶಸ್ತಿಯನ್ನು ನೀಡಿ ಗೌರವಿಸಿರುವುದು ವಿಶೇಷ. ಇಂತಹ ಒಬ್ಬ ಆದರ್ಶ ಕಲಾವಿದೆಯನ್ನು ಕರ್ನಾಟಕ ಗಾನ ಕಲಾ ಪರಿಷತ್ ವಿಜಾಪುರದಲ್ಲಿ ತನ್ನ **೪೫**ನೇ ಹಿರಿಯ ಸಂಗೀತ ವಿದ್ವಾಂಸರ ಮತ್ತು **೨೭**ನೇ ಯುವ ಸಂಗೀತ ವಿದ್ವಾಂಸರ ರಾಜ್ಯಮಟ್ಟದ ಸಮ್ಮೇಳನದ ವಿದ್ವತ್ ಸದಸ್ಸಿನಲ್ಲಿ ಸನ್ಮಾನಿಸಲಾಗಿದೆ.

# ಶ್ರೀಮತಿ ಸ್ನೇಹಾ ಹಂಪಿಹೊಳಿ

ಕನ್ನಡ ಶೀರ ನೆಲದಂತಿರುವ ಗುಲ್ಬಗಾದಲ್ಲಿ ಜನಿಸಿದ ಶ್ರೀಮತಿ ಹಂಪಿಹೊಳಿ ತಮ್ಮ ಸಂಗೀತ ಅಭ್ಯಾಸವನ್ನು ಶ್ರೀಮತಿ ಸರೋಜಾ ಅನಗರಕ್ ಅವರ ಮಾರ್ಗದರ್ಶನದಲ್ಲಿ ಸತತ ೮ ವರ್ಷಗಳಿಂದ ಪಡೆದು ತಮ್ಮ ಸಿರಿಕಂಟದ ಮೂಲಕ ಸಂಗೀತ ಪ್ರೇಮಿಗಳ ಅಭಿಮಾನಕ್ಕೆ ಪಾತ್ರರಾಗಿದ್ದಾರೆ.

ಸ್ನೇಹಾ ಹಂಪಿಹೊಳಿಯವರು ಸಂಗೀತದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆಯುವದರ ಮೂಲಕ **"ಆರ್ಯಭಟ"** ಪ್ರಶಸ್ತಿಯನ್ನು ಕೂಡಾ ಪಡೆದಿದ್ದಾರೆ. ಆಕಾಶವಾಣಿ ಹಾಗೂ ದೂರದರ್ಶನ ಕಲಾವಿದರಾದ ಇವರ ಗಾಯನ ಸೌರಭ ಮನೆಮನೆಯಲ್ಲೂ ಪಸರಿಸಿದೆ.

ಇವರು ದೇಶದಾದ್ಯಂತ ಸಂಗೀತ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಸುಪ್ರಸಿದ್ಧ ಧ್ವನಿ ಸುರುಳಿ ಸಂಸ್ಥೆಯಾದ ಸಂಗೀತ ಸಂಸ್ಥೆ ಇವರ ಧ್ವನಿ ಸುರುಳಿಯನ್ನು ಬಿಡುಗಡೆ ಮಾಡಿದೆ.

ಇವರು ಹಾಡಿದ ಗೀತ ಪುರಂದರ, ಶ್ರೀ ಪುರಂದರ, ಬಕುಲದ ಹೊಗಳು, ಶ್ರಾವಣ ಸಂಪತ್ತು, ಭಕ್ತಿ ವೈಭವ ಈ ಸಂಸ್ಥೆಯಿಂದ ಬಿಡುಗಡೆ ಹೊಂದಿದೆ. ಇವರು ಹಿಂದೂಸ್ತಾನಿ ಶಾಸ್ತ್ರೀಯ ಹಾಗೂ ಸುಗಮ ಸಂಗೀತ ಈ ಎರಡು ಪ್ರಕಾರಗಳಲ್ಲೂ ಕಾರ್ಯಕ್ರಮ ನೀಡುತ್ತಿದ್ದಾರೆ.

# ಶ್ರೀಮತಿ ಆರ್. ಲೀಲಾಬಾಯಿ ಕಾಯ್ಕಿಣಿ

ಹಿಂದುಸ್ತಾನಿ ಗಾಯಕಿಯಾಗಿ, ಸಂಗೀತ ಶಿಕ್ಷಕಿಯಾಗಿ ಬೆಂಗಳೂರಿನಲ್ಲಿ ಹಿಂದೂಸ್ತಾನಿ ಸಂಗೀತದ ಪ್ರಚಾರ ಮಾಡುತ್ತಿರುವ ಶ್ರೀಮತಿ ಆರ್, ಲೀಲಾಬಾಯಿ ಕಾಯ್ಕಿಣಿ ಅವರು ಕರ್ನಾಟಕದ ಹಿಂದೂಸ್ತಾನಿ ಹಿರಿಯ ಮಹಿಳಾ ಕಲಾವಿದೆಯರಲ್ಲೊಬ್ಬರು.

**೧೯೨೯**ರಲ್ಲಿ ಜನಿಸಿದ ಶ್ರೀಮತಿ ಆರ್. ಲೀಲಾಬಾಯಿ ಕಾಯ್ಕಿಣಿ ಅವರು ಶ್ರೀ ಎಂ.ಎಸ್. ರಾಮಚಂದ್ರ ಜೋಷಿ ಗವಾಯಿ, ಶ್ರೀ ಎಸ್ ರಾಮಚಂದ್ರನ್, ಶ್ರೀ ಮೋಹನ್ ಚಿಕ್ಕರಮನೆ ಮುಂತಾದವರ ಸಂಗೀತ ಗರಡಿಯಲ್ಲಿ ಪಳಗಿದವರು. ಅಖಿಲ ಭಾರತೀಯ ಗಂಧರ್ವ ಮಹಾಮಂಡಳದ ಸಂಗೀತ ಮಾಧ್ಯಮ ಹಾಗೂ ಸಂಗೀತ ವಿಶಾರದಾ ಪದವಿ ಪಡೆದಿದ್ದಾರೆ.

ಬೆಂಗಳೂರಿನ ಆದರ್ಶ ಭವನ ಹಾಗೂ ಶ್ರೀ ಮಹಾಮಾಯ ಸಂಸ್ಥೆಗಳಲ್ಲಿ ಹಲವು ವರ್ಷಗಳಿಂದ ಹಿಂದುಸ್ತಾನಿ ಸಂಗೀತ ಶಿಕ್ಷಕಿಯಾಗಿ ದುಡಿಯುತ್ತಿರುವ ಶ್ರೀಮತಿ ಲೀಲಾಬಾಯಿ ಅವರು ಅನೇಕ ಭಕ್ತಿಗೀತೆಗಳನ್ನು ರಚಿಸಿ, ಸಂಗೀತ ಸಂಯೋಜಿಸಿದ್ದಾರೆ. ಜೊತೆಗೆ ಹಿಂದೂಸ್ತಾನಿ ಸಂಗೀತಕ್ಕೆ ಸಂಬಂಧಪಟ್ಟಂತೆ, ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ ಕಲಾ ಸಂಗ್ರಹ, ಸ್ವರ ಸಂಪದ ಎಂಬ ಪಾರಿಭಾಷಿಕ ಶಬ್ದಕೋಶವು ಹಲವು ಸಂಗೀತ ಕಲಾವಿದರ ಜೀವನ ಚರಿತ್ರೆ, ಹೀಗೆ ಹತ್ತು ಹಲವು ಕೃತಿಗಳನ್ನು ಪ್ರಕಟಿಸಿದ್ದಾರೆ.

ಆಕಾಶವಾಣಿ **"ಬಿ.ಹೈ"** ಶ್ರೇಣಿಯ ಕಲಾವಿದೆಯಾದ ಲೀಲಾಬಾಯಿ ಅವರಿಗೆ **"ನಾದಶ್ರೀ"** ಪ್ರಶಸ್ತಿ **"ಆರ್ಯಭಟ"** ಪ್ರಶಸ್ತಿ ಮುಂತಾದ ಗೌರವ ಪುರಸ್ಕಾರಗಳು ಸಂದಿವೆ. ಶ್ರೀಮತಿ ಆರ್. ಲೀಲಾಬಾಯಿ ಕಾಯ್ಕಿಣಿ ಅವರ ಸಂಗೀತ ನೃತ್ಯ ಅಕಾಡಮಿ **೨೦೦೦-೦೧**ನೇ ಸಾಲಿನ **"ಕರ್ನಾಟಕ ಕಲಾಶ್ರೀ"** ಪ್ರಶಸ್ತಿ ನೀಡಿ ಗೌರವಿಸಿದೆ.

# ಶ್ರೀಮತಿ ನಾಗೂಬಾಯಿ

ಕರ್ನಾಟಕಿ ಸಂಗೀತದ ಭದ್ರಕೋಟೆ ಎನಿಸಿರುವ ಮೈಸೂರಿನಲ್ಲಿ ಹಿಂದುಸ್ತಾನಿ ಸಂಗೀತ ಶಿಕ್ಷಣ ಪಡೆದು ಮೈಸೂರು ಆಸ್ಥಾನದ ವಿದುಷಿಯಾಗಿ ಕಲಾ ಸೇವೆ ಮಾಡಿರುವ ಶ್ರೀಮತಿ ನಾಗೂಬಾಯಿಯವರು ಕರ್ನಾಟಕದ ಹಿರಿಯ ತಲೆಮಾರಿನ ಹಿಂದುಸ್ತಾನಿ ಸಂಗೀತ ಮಹಿಳಾ ಕಲಾವಿದೆಯರಲ್ಲಿ ಪ್ರಮುಖರು.

ಶ್ರೀಮತಿ ನಾಗೂಬಾಯಿಯವರು **೧೪-೧-೧೯೦೩**ರಂದು ಮೈಸೂರಿನಲ್ಲಿ ಜನಿಸಿದರು. ತಾಯಿ ಸಂಗೀತ ವಿದುಷಿ ಚಿನ್ನಮ್ಮನವರಿಂದ ಬಾಲ್ಯದಲ್ಲಿ ಹಿಂದುಸ್ತಾನಿ ಸಂಗೀತ ಅಭ್ಯಾಸ. ನಂತರ ಉಸ್ತಾದ ಹಫೀಜ್ ಖಾನ್, ದುಲ್ಹೇಖಾನ್, ಫಯಾಜ್ ಖಾನ್, ಬರಖತುಲ್ಲಾಖಾನ್, ವಿಲಾಯತ್ ಹುಸೇನ್ ಇವರುಗಳಿಂದ ಸಂಗೀತ ಶಿಕ್ಷಣ ಹಾಗೂ ಮಾರ್ಗದರ್ಶನ ಪಡೆದರು. ಇಸ್ಸಾಸೇಟ್ ಅವರಿಂದ ಗಜಲ್, ಠುಮ್ರಿ, ಗವಾಯಿ ರಾಮಚಂದ್ರಪ್ಪನವರಿಂದ ಪಲ್ಲವಿ, ಖಯಾಲ್ ಗಾಯನವನ್ನು ಕಲಿತರು. **೧೯೩೩** ರಿಂದ **೧೬** ವರ್ಷಗಳ ಕಾಲ ಅರಮನೆಯಲ್ಲಿ ಆಸ್ಥಾನ ವಿದುಷಿಯಾಗಿ ಕೆಲಸ ಮಾಡಿದರು. ಅರಮನೆಯ ವಾದ್ಯ ವೃಂದದ ಮುಖ್ಯಸ್ಥರಾದ ವೆಂಕಟೇಶಯ್ಯನವರಲ್ಲೂ ಸಂಗೀತಾಭ್ಯಾಸ ಮಾಡಿದರು. ಶ್ರೀಮತಿ ನಾಗೂಬಾಯಿಯವರು ಆಗಿನ ಹೈದರಾಬಾದಿನ ನಿಜಮರು, ಕಾಶ್ಮೀರ ಮಹಾರಾಜರು, ಭರತಪುರದ ಮಹಾರಾಜರು, ಕೊಟ್ಟಾಸಂಗಣಿ ರಾಜರು, ಭೋಪಾಲ ನವಾಬರು, ಮೈಸೂರು ಮಹಾರಾಜರು ಮುಂತಾದವರ ಸಮ್ಮುಖದಲ್ಲಿ ಕಚೇರಿ ಮಾಡಿ ಗೌರವಿಸಲ್ಪಟ್ಟಿದ್ದಾರೆ. ಕರ್ನಾಟಕ ಸರ್ಕಾರದಿಂದ ಗೌರವ ಮಾಶಾಸನವನ್ನು ಪಡೆದಿದ್ದಾರೆ.

ವಿದುಷಿ ಶ್ರೀಮತಿ ನಾಗೂಬಯಿಯವರ ಸಂಗೀತ ಸೇವೆಯನ್ನು ಗಮನಿಸಿದ ಕರ್ನಾಟಕ ಸಂಗೀತ ನೃತ್ಯ ಅಕಾಡಮಿ ಅವರಿಗೆ **೧೯೮೭-೮೮ರ "ಕರ್ನಾಟಕ ಸಂಗೀತ ನೃತ್ಯ ಅಕಾಡಮಿ"** ಅವರಿಗೆ **೧೯೮೭-೮೮ರ "ಕರ್ನಾಟಕ ಕಲಾತಿಲಕ"** ಪ್ರಶಸ್ತಿ ನೀಡಿ ಗೌರವಿಸಿದೆ.

# ಕಲಾವತಿ ಎಚ್ ದೊರೆ



ರಾಯಚೂರ ಜಿಲ್ಲೆಯ ಅರಿಕೇರಿ ಸಂಸ್ಥಾನದ ರಾಜವಂಶಸ್ಥರ ಮನೆತನದವರಾದ ಡಾ.ಕಲಾವತಿ ಎಚ್, ದೊರೆ ಇವರು ಹಿಂದೂಸ್ತಾನಿ ಶಾಸ್ತ್ರೀಯ ಮತ್ತು ಸುಗಮ ಸಂಗೀತದಲ್ಲಿ ಎತ್ತಿದ ಕೈ. ಇವರು ಅನೇಕ ಹಿರಿಯ ಗುರುಗಳಾದ ಗೋವಿಂದರಾವ್ ಇನಾಂದಾರ ಮತ್ತು ಇವರಿಗೆ ಪ್ರಾರಂಭಿಕ ಸಂಗೀತ ಶಿಕ್ಷಣ ತಮ್ಮನಾದ ನರಸಿಂಹ ಶಿಗ್ಗಾಂವಿ, ಪತಿ ಡಾ. ಬಸವರಾಜ ರಾಜಗುರು, ಪಂಡಿತ ಪಂಚಾಕ್ಷರಿ ಸ್ವಾಮಿ ಮತ್ತಿಗಟ್ಟಿ, ಪಂಡಿತ ಕೆ.ಜಿ.ಗಿಂಡೆ, ಡಾ.ಕಮಲ ಪುರಂದರೆ, ಶ್ರೀಮತಿ ಜಾನಕಿ ಅಯ್ಯರ್ ಇನ್ನೂ ಅನೇಕ ಸಂಗೀತ ಗವಾಯಿಗಳ ಹತ್ತಿರ ಸಂಗೀತ ವಿದ್ಯೆಯನ್ನು ಕಲಿತು ಒಳ್ಳೆ ಹಾಡು ಹಾಡಿದ್ದಾರೆ. ಉದಾ: ಭಾವಗೀತೆ, ಜನಪದ ಗೀತೆ, ವಚನಗಳು, ದಾಸೋಹ, ಸೊತ್ರಗಳ ಶಾಸ್ತ್ರೀಯ ಸಂಗೀತ ವಿವಿಧ ರೀತಿಯ ಹಾಡುಗಳ ಬೇರೆ ಬೇರೆ ಭಾಗದಲ್ಲಿ, ಉತ್ಸವಗಳಲ್ಲಿ, ಸಮ್ಮೇಳನಗಳಲ್ಲಿ, ಆಕಾಶವಾಣಿ ಹಾಗೂ ದೂರದರ್ಶನದಲ್ಲಿ ಮತ್ತು ಇವರ ಸಂಗೀತ ಗುರುಗಳು ಹಾಗೂ ಪತಿ ಡಾ. ಹನುಮಣ್ಣಾ ನಾಯಕ ದೊರೆಯವರೊಂದಿಗೆ ದೇಶದಾದ್ಯಂತ ಅನೇಕ ಶಾಸ್ತ್ರೀಯ ಕಛೇರಿಯಲ್ಲಿ ಸಂಗೀತ ಸಾಥ್ ನೀಡಿದ್ದಾರೆ.

ಡಾ. ಕಲಾವತಿಯವರು ಎಂ.ಎ., ಪಿ.ಎಚ್.ಡಿ. ಸಂಗೀತ ವಿಷಯದಲ್ಲಿ ಮುಗಿಸಿರುತ್ತಾರೆ. ಇವರು ೨೨ ವರ್ಷ ನಿರಂತರವಾಗಿ ಸಂಗೀತ ಉಪನ್ಯಾಸಕಿಯಾಗಿ ವಿವಿಧ ಮಹಾವಿದ್ಯಾಲಯದಲ್ಲಿ ಸೇವೆ ಸಲ್ಲಿಸಿರುತ್ತಾರೆ.

ಸಂಗೀತ ಶಿಕ್ಷಕಿ ಕೇಂದ್ರಿಯ ವಿದ್ಯಾಲಯ ಗುಲಬರ್ಗಾ, ೧೯೯೧ ರಿಂದ ೧೯೯೨, ಸಂಗೀತ ಉಪನ್ಯಾಸಕಿಯಾಗಿ, ನೂತನ ಮಹಾ ವಿದ್ಯಾಲಯ ಗುಲಬರ್ಗಾ ೧೯೯೩ ರಿಂದ ೧೯೯೭, ಹಿರಿಯ ಉಪನ್ಯಾಸಕಿಯಾಗಿ ಗೋದು ತಾಯಿ ಪದವಿ ಪೂರ್ವ ಮಹಿಳಾ ಮಹಾವಿದ್ಯಾಲಯ ಗುಲಬರ್ಗಾ, ಹೀಗೆ ನಾನಾ ಕಡೆಗಳಲ್ಲಿ ೧೯೯೭ ರಿಂದ ಪ್ರಸ್ತುತ ವಿದ್ಯಾರ್ಥಿನಿಯರಿಗೆ ಸಂಗೀತ ವಿದ್ಯೆ ಕಲಿಸುತ್ತಿದ್ದಾರೆ. ಡಾ. ಕಲಾವತಿಯವರು ಹಿಂದೂಸ್ತಾನಿ ಶಾಸ್ತ್ರೀಯ ಮತ್ತು ಸುಗಮ ಸಂಗೀತ ಕ್ಷೇತ್ರಗಳಲ್ಲಿ ಸಾಧನೆ ಮಾಡಿ ಹೆಸರುವಾಸಿಯಾಗಿರುತ್ತಾರೆ.

ಇವರಿಗೆ ಅನೇಕ ಪ್ರಶಸ್ತಿಗಳು ಬಂದಿರುತ್ತವೆ. ಬಸವೇಶ್ವರ ಸಂಸ್ಥಾನ ಗುಲಬರ್ಗಾದಿಂದ **"ಕಾಯಕ ರತ್ನ" (೧೯೯೪)** ಮಹಾಂತ ಜ್ಯೋತಿ ಪ್ರತಿಷ್ಠಾನ ಗುಲಬರ್ಗಾದಿಂದ **"ಕರ್ನಾಟಕ ಜ್ಯೋತಿ"** ಪ್ರಶಸ್ತಿ,**(೨೦೦೮)**, ಚೈತನ್ಯಮಯಿ ಪ್ರಶಸ್ತಿ ಹೀಗೆ ಹಲವಾರು ಪ್ರಶಸ್ತಿ ಬಂದಿರುತ್ತವೆ.

ಇವರ ಸಂಶೋಧನಾ ಮಹಾಪ್ರಬಂಧ **"ಜೈಪುರ ಘರಾಣೆಯ ಗಾಯಕ ಪಂ. ಸಿದ್ಧರಾಮ ಜಂಬಲದಿನ್ನಿ"** ಒಂದು ಅಧ್ಯಯನ**(೨೦೦೫)**, **"ಆಸ್ಮಿ"** ಪ್ರಕಾಶನ ಧಾರವಾಡದಿಂದ ಪ್ರಕಟಗೊಂಡ ನಾಡೋಸ್ಮಿ ಸ್ಮರಣ ಸಂಚಿಕೆಯಲ್ಲಿ ಹೈದ್ರಾಬಾದ ಕರ್ನಾಟಕ ಪ್ರದೇಶದ ಸಂಗೀತ ಪರಂಪರೆ **೨೦೧೧. ಯು.ಜಿ.ಸಿ.** ಸಹಯೋಗದಿಂದ ಬಸವೇಶ್ವರ ಆರ್ಟ್ಸ್ ಕಾಲೇಜು ಬಾಗಲಕೋಟೆಯಲ್ಲಿ ಆಯೋಜಿಸಿದ ಒಂದು ದಿನದ ವಿಚಾರ ಸಂಕಿರ್ಣದಲ್ಲಿ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದಲ್ಲಿ ಸವಾಲುಗಳು ಮತ್ತು ಅವಕಾಶಗಳು **೨೦೧೧** ಎಂಬಂತೆ ವಿಷಯಗಳ ಬಗ್ಗೆ ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಡಾ॥ ಕಲಾವತಿ ಎಚ್ ದೊರೆಯವರ ಸಾಧನೆ ಅಪಾರ. *"ಸಂಗೀತದಲ್ಲಿ ಎಷ್ಟು ಕಲಿತರೂ, ಕಲಿಸಿದರೂ ಕಡಿಮೆ"* ಎಂದು ಹೇಳುತ್ತ ಡಾ॥ ಕಲಾವತಿ ದೊರೆಯವರು *ಅನ್ನ ದಾಸೋಹಕ್ಕಿಂತ ಸಂಗೀತ ದಾಸೋಹ ಮೇಲು* ಎನ್ನುವುದು ಅವರ ಭಾವನೆ.

ಇವರು ಪದವಿ ಪೂರ್ವ ಪ್ರಥಮ ಮತ್ತು ದ್ವಿತಿಯ ವರ್ಷಗಳ ಸಂಗೀತ ವಿಷಯಕ್ಕೆ ಸಂಬಂಧ ಪಟ್ಟಂತೆ ಪುಸ್ತಕವನ್ನು ಬರೆದಿದ್ದಾರೆ.

# ಶ್ರೀಮತಿ ಲಕ್ಷ್ಮಿ ಶಂಕರ ಜೋಶಿ



ಗುಲಬರ್ಗಾ ಸಂಗಮೇಶ್ವರ ಮಹಿಳಾ ಮಂಡಳದ ಸಕ್ರೀಯ ಸದಸ್ಯೆಯಾಗಿ, ಪ್ರಾಧ್ಯಾಪಕಿಯಾಗಿ, ಗ್ರಹಣಿಯಾಗಿ, ಲೇಖಕಿಯರ ವೇದಕಿಯ ಸದಸ್ಯೆಯಾಗಿ, ಸಂಗೀತಗಾರ್ತಿಯಾಗಿ ಹಲವು ಹತ್ತು ಹವ್ಯಾಸಗಳಲ್ಲಿ ಕೇಳಿ ಬರುತ್ತಿರುವ ಹೆಸರು ಶ್ರೀಮತಿ ಲಕ್ಷ್ಮೀಶಂಕರ ಜೋಶಿ.

ಲಕ್ಷೀ ಇದ್ದಲ್ಲೆಲ್ಲಾ ಹಾಸ್ಯದ ಹೊನಲು ಹರಿಯುತ್ತದೆ. ಅತ್ಯಂತ ಸರಳ ನಿಗರ್ವಿಯಾದ ಇವರಿಗೆ ಸಂಗೀತ ಹಾಗೂ ಸಾಹಿತ್ಯದಲ್ಲಿ ಸಮಾನವಾದ ಆಸಕ್ತಿ. ಗದಗ ಜಿಲ್ಲೆ ರೋಣ ತಾಲ್ಲೂಕಿನ ಹೊಳೆಮಣ್ಣೂರಿನ ಶ್ರೀಮಂತ ಜಮೀನ್ದಾರ ಕುಟುಂಬದಲ್ಲಿ ಜನಿಸಿದ ಇವರು ಜಿವಿಸಿದ್ದು ಗದಗ ಹಾಗೂ ಧಾರವಾಡ ಹಾಗೂ ಗುಲ್ಬರ್ಗಾ. ಗದಗದ ಕೆ.ಎಲ್.ಇ. ಸೊಸೈಟಿ ಮಹಿಳಾ ಕಾಲೇಜಿನಿಂದ ಡಿಗ್ರಿ ಹಾಗೂ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಿಂದ ಕನ್ನಡದಲ್ಲಿ ಎಂ.ಎ. ಹಾಗೂ ಗುಲ್ಬರ್ಗಾ ವಿಶ್ವ ವಿದ್ಯಾಲಯದಿಂದ ಸಂಗೀತದಲ್ಲಿ ಎಂ.ಎ. ಪದವಿ ಪಡೆದಿದ್ದಾರೆ.

ಹಿಂದುಸ್ತಾನಿ ಸಂಗೀತದಲ್ಲಿ ಗಂಧರ್ವ ಮಹಿಳಾವಿದ್ಯಾಲಯ. ಮುಂದೆ ಇವರು ನಡೆಸುವ ವಿಶಾರದಾ ಹಾಗೂ ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿಯಿಂದ ವಿದ್ವತ್ ಪದವಿ ಪಡೆದಿದ್ದಾರೆ. ಜ್ಯೂನಿಯರ್ ಪರೀಕ್ಷೆಯಲ್ಲಿ ಕರ್ನಾಟಕ ರಾಜ್ಯಕ್ಕೆ ಪ್ರಥಮ ರ್‍ಯಾಂಕ್ ಪಡೆದಿದ್ದಾರೆ.

ಪ್ರಸ್ತುತ ಗುಲಬರ್ಗಾದ ನೂತನ ವಿದ್ಯಾಲಯ ಸಂಸ್ಥೆಯ ಪದವಿ ಕಾಲೇಜಿನಲ್ಲಿ ಸಂಗೀತ ವಿಭಾಗದ ಉಪನ್ಯಾಸಕಿಯಾಗಿ ಕಳೆದ ೧೨ ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಡಾ. ಗುರುರಾಜ ದಂಡಾಪುರ ಮಾರ್ಗದರ್ಶನದಲ್ಲಿ ಪಿ.ಎಚ್.ಡಿ. ಅಧ್ಯಯನ ಕೈಗೊಂಡಿದ್ದಾರೆ.

ಆಕಾಶವಾಣಿ ಹಾಗೂ ದೂರದರ್ಶನದ **'ಬಿ'** ಗ್ರೇಡ್ ಕಲಾವಿದೆಯಾದ ಇವರ ರಾಜ್ಯದ ಹಲವಾರು ಕಡೆ

ಕಾರ್ಯಕ್ರಮ ನೀಡಿದ್ದಾರೆ. ಗದಗ, ಧಾರವಾಡ, ಹುಬ್ಬಳ್ಳಿ, ಹಾವೇರಿ, ಬೆಂಗಳೂರ, ಗುಲಬರ್ಗಾ, ಕುಷ್ಠಗಿ, ರಾಯಚೂರು, ಬಳ್ಳಾರಿ, ಹಾಗೂ ಮಹಾರಾಷ್ಟ್ರದ ಪುಣೆಯ ಕನ್ನಡ ಸಂಘದಲ್ಲಿಯೂ ಕಾರ್ಯಕ್ರಮ ನೀಡಿದ್ದಾರೆ. ಹಲವು ನಾಟಕಗಳಿಗೆ ಹಿನ್ನೆಲೆಯಾಗಿ ಹಾಡಿದ್ದಾರೆ. ಸಂಗೀತದಲ್ಲಿ ಹತ್ತು ಹಲವು ಹಾಡುಗಳಿಗೆ ದನಿಯಾದವರೂ ಅತ್ಯಂತ ಸುಮಧುರ ಕಂಠದ ಇವರಿಗೆ ಗದಗದ 'ಕಲಾ ವಿಕಾಸ ಪರಿಷತ್'ನವರು **'ಸಂಗೀತ ವಿಕಾಸ ರತ್ನ'** ಪ್ರಶಸ್ತಿ ಕೊಟ್ಟು ಪುರಸ್ಕರಿಸಿದ್ದಾರೆ.

ಸಾಹಿತ್ಯವಾಗಿಯೂ ಅತ್ಯಂತ ಕ್ರಿಯಾಶೀಲವಾಗಿರುವ ಲಕ್ಷ್ಮೀ ಜೋಶಿ ಇವರು ಉತ್ತರ ಕನ್ನಡ ಜಿಲ್ಲೆ ಹೊನ್ನಾವರದ **'ದೀದಿಪತ್ರ'** ಎನ್ನುವ ಪುಸ್ತಕವೂ ಹೊರಬಂದಿದೆ. ಅನೇಕ ಸಣ್ಣ ಕತೆಗಳು ನಾಡಿನ ವಿವಿಧ ಪತ್ರಿಕೆಗಳಲ್ಲಿ ಬೆಳಕು ಕಂಡಿವೆ. ಸಂಗೀತ ಪುಸ್ತಕಗಳಲ್ಲಿ ಹಲವಾರು ಲೇಖನಗಳು ಬಂದಿವೆ. ಕಥಾ ಸ್ಪರ್ಧೆಯಲ್ಲಿ ಬಹುಮಾನಗಳು ಬಂದಿವೆ. ಅನೇಕ ವ್ಯಕ್ತಿಗಳ ಸಂದರ್ಶನ ಲೇಖನಗಳನ್ನು ಬರೆದು ಪ್ರಕಟಿಸಿದ್ದಾರೆ. ನಾಟಕಗಳನ್ನು ಬರೆದಿದ್ದಾರೆ.

# ಶ್ರೀಮತಿ ಸೀಮಾ ಅಜ್ಜನಗೌಡ ಪಾಟೀಲ

ಜಗದ್‌ವಿಖ್ಯಾತ್ ಸಂಗೀತಗಾರರ ಮನೆತನದಲ್ಲಿ **೧೯೬೮ ಜನೆವರಿ ೧೭**ರಂದು ಜನಿಸಿದರು. ಇವರು ಹುಟ್ಟಿನಿಂದಲೇ ಸಂಗೀತ ವಾತಾವರಣದಲ್ಲಿ ಬೆಳೆದವರು. ತಂದೆ ಅಜ್ಜನಗೌಡ ಪಾಟೀಲ. ತಾಯಿ ಲಕ್ಷ್ಮೀದೇವಿ ಪಾಟೀಲ. ತಂದೆ ಹೆಸರಾಂತ ಸಂಗೀತ ವಿದ್ವಾಂಸರು ಕರ್ನಾಟಕ ವಿಶ್ವಾವಿದ್ಯಾಲಯದ ಸಂಗೀತ ವಿಭಾಗದ ರೀಡರ್. ಇನ್ನೂ ಅಜ್ಜ ಪ್ರಖ್ಯಾತ ಸಂಗೀತ ವಿದ್ವಾಂಸರಾದ ಡಾ.ಮಲ್ಲಿಕಾರ್ಜುನ ಮನಸೂರ, ಇಂತಹ ಪರಿಸರದಲ್ಲಿ ಆಡಿ ಬೆಳೆದ ಇವರು ತಂದೆಯಿಂದ ಅಜ್ಜನಿಂದ ಮತ್ತು ಸೋದರಮಾವನಾದ ಡಾ. ರಾಜಶೇಖರ ಮನಸೂರರಿಂದ ಜೈಪುರ ಘರಾಣೆಯ ಗಾಯಕಿಯನ್ನು ಮೈಗೂಡಿಸಿಕೊಂಡವರು. ಸಂಗೀತದಲ್ಲಿ ಸ್ನಾತಕೋತ್ತರ ಪದವಿಯನ್ನು ಪ್ರಥಮ ಶ್ರೇಣಿಯಲ್ಲಿ ಪಡೆದರು. ಚಿನ್ನದ ಪದಕ ಪಡೆದು ಸಂಗೀತದಲ್ಲಿ ಡಾಕ್ಟರೇಟ್ ಪದವಿ ಪಡೆದು, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕರ್ನಾಟಕ ವಿಶ್ವವಿದ್ಯಾಲಯದ ಸಂಗೀತ ವಿಭಾಗದಲ್ಲಿ ಹಲವಾರು ವರ್ಷ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ಈಗ ಗುಲಬರ್ಗಾದ ಶರಣ ಬಸವೇಶ್ವರ ವಿದ್ಯಾವರ್ಧಕ ಸಂಘದ ಗೋದುತಾಯಿ ಪದವಿ ಮಹಾವಿದ್ಯಾಲಯದಲ್ಲಿ ಸಂಗೀತ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ದೇಶದ ಹಾಗೂ ನಾಡಿನ ಪ್ರತಿಷ್ಠಿತ ಸಂಗೀತ ಸಮ್ಮೇಳನಗಳಲ್ಲಿ ಭಾಗವಹಿಸಿದ್ದಾರೆ. ಮೈಸೂರು ದಸರಾದಂತಹ ಉತ್ಸವಗಳಲ್ಲಿ ಹಲವಾರು ಬಾರಿ ಅರಮನೆಯ ಪ್ರತಿಷ್ಠಿತ ದರ್ಬಾರದಲ್ಲಿ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟಿದ್ದಾರೆ.

# ಶ್ರೀಮತಿ ಸುನಂದಾ ಬಾಲಕೃಷ್ಣ ಸಾಲವಾಡಗಿ



**೧೯೬೩ ಡಿಸೆಂಬರ ೧೮** ರಂದು ಶ್ರೀ ನರಸಿಂಗರಾವ ಕುಲಕರ್ಣಿ ಹಾಗೂ ಶ್ರೀಮತಿ ಪ್ರಮೀಳಾಬಾಯಿ ಕುಲಕರ್ಣಿ ಇವರ ಪುತ್ರಿಯಾಗಿ ಜನಿಸಿದರು. ಸಿಂಧನೂರು ತಾಲೂಕಿನ ಅಲಬನೂರು ಇವರ ತವರು ಮನೆ. ಸುರಪುರ ಇವರ ಪತಿಯ ಮನೆ. ಗಂಗಾವತಿಯಲ್ಲಿ ಇವರ ವಿದ್ಯಾಭ್ಯಾಸ. ಗಂಗಾವತಿಯ ಕಲ್ಮಠದ ಕೊಟ್ಟೂರೇಶ್ವರ ಸಂಗೀತ ವಿದ್ಯಾಲಯದಲ್ಲಿ ಸಂಗೀತ ವಿದ್ಯಾಭ್ಯಾಸ ಪೂರೈಸಿದರು. ಶ್ರೀ ಗೋವಿಂದರಾಜ ಬೊಮ್ಮಲಪುರ, ಶ್ರೀ ಅಂಬಣ್ಣ ಕೊಪ್ಪರದ ಇವರ ಸಂಗೀತ ಗುರುಗಳು. ಹಾಗೂ ಶ್ರೀಮತಿ ಸರೋಜಾ ಅನಗರಕರ ಅವರಲ್ಲಿಯೂ ಸಂಗೀತ ಅಭ್ಯಾಸ ಮಾಡಿದ್ದಾರೆ. ನೂತನ ವಿದ್ಯಾಲಯದಲ್ಲಿ ಎಂ.ಎ (ಸಂಗೀತ) ಮುಗಿಸಿದರು. ಪ್ರಸ್ತುತ ಎಸ್. ವ್ಹಿ ಡಿಗ್ರಿ ಕಾಲೇಜನಲ್ಲಿ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಶಾರದಾ ಸಂಗೀತ ವಿದ್ಯಾಲಯವನ್ನು ಸುರಪುರದಲ್ಲಿ ಸ್ಥಾಪಿಸಿ **೧೦** ವರ್ಷಗಳ ಕಾಲ ಸಂಗೀತ ಪಾಠವನ್ನು ಹೇಳಿಕೊಟ್ಟಿದ್ದಾರೆ. ಈ ಶಾಲೆಯ ಮಕ್ಕಳು ರಾಜ್ಯ ಮಟ್ಟದ ಸಂಗೀತ ಸ್ಪರ್ಧೆಯಲ್ಲಿ ಭಾಗವಹಿಸಿದ ಹೆಗ್ಗಳಿಕೆ ಅಖಿಲ ಭಾರತೀಯ ಗಂಧರ್ವ ವಿದ್ಯಾ ಮಂಡಳ ಮುಂಬಯಿ ಇವರು ನಡೆಸುವ ಸಂಗೀತ ಪರೀಕ್ಷೆಯ ಕೇಂದ್ರವನ್ನು ನಡೆಸುತ್ತಿದ್ದಾರೆ. ಗುಲಬರ್ಗಾದಲ್ಲಿ ಶಾರದಾ ಸಂಗೀತ ಶಾಲೆ ಆರಂಭಿಸಿ **೧೦೦**ಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ಸಂಗೀತ ಪಾಠ ಕಲಿಸುತ್ತಿದ್ದಾರೆ. ಮಕ್ಕಳು ಆಕಾಶವಾಣಿ, ದೂರದರ್ಶನದಲ್ಲಿ ಕಾರ್ಯಕ್ರಮ ನೀಡಿರುತ್ತಾರೆ. ಅಲ್ಲದೇ ರಾಜ್ಯ ಹಾಗೂ ಅಂತರರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಿದ್ದಾರೆ.

ಇವರ ಮಧುರ ಕಂಠದಿಂದ **"ಬಾರೋವೆಂಕಟೇಶ ಮನೆಗೆ", "ಕಳೆದೈತೋ ಪ್ರೀತಿ ಕಳೆದೈತೊ" "ಪಿಳ್ಳಂಗೋವಿಯ**

**ಚಲ್ವ ಕೃಷ್ಣ", "ವಂದಲಿ ಪುರವರ ಹನುಮಂತ"** ಧ್ವನಿ ಸುರಳಿಗಳು ಹೊರಬಂದಿವೆ. ಆಕಾಶವಾಣಿಯಲ್ಲಿ **"ಬಿ"** ಗ್ರೇಡ್ ಕಲಾವಿದೆಯಾಗಿದ್ದಾರೆ. ದೂರದರ್ಶನದಲ್ಲಿಯೂ ಕಾರ್ಯಕ್ರಮ ನೀಡಿದ್ದಾರೆ. ಸುರಪುರ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಹಿಳಾ ಪ್ರತಿನಿಧಿಯಾಗಿ ಭಾಗವಹಿಸಿದ್ದಾರೆ. ಗುಲಬರ್ಗಾದ ಮಹಿಳಾ ಮಂಡಳದ ಸದಸ್ಯೆಯಾಗಿ, ಹರಿದಾಸ ವಿಚಾರ ವಾಹಿನಿ ವೇದಿಕೆ ಸದಸ್ಯೆಯಾಗಿದ್ದಾರೆ. ಸುರಪುರ ಶ್ರೀ ವೇಣುಗೋಪಾಲ ಮಹಿಳಾ ಭಜನಾ ಮಂಡಳಿ ಸ್ಥಾಪಿಸಿ ಸಂಸ್ಥಾಪಕ ಕಾರ್ಯದರ್ಶಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರ ಕಾರ್ಯಕ್ಕೆ ಮೆಚ್ಚಿ ಮಹಾಂತ ಜ್ಯೋತಿ ಪ್ರತಿಷ್ಠಾನ ಗುಲಬರ್ಗಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ಸಂಗೀತ ನೃತ್ಯೋತ್ಸವ – **೨೦೦೮**ರಲ್ಲಿ **"ಕಲಾಜ್ಯೋತಿ"** ಪ್ರಶಸ್ತಿ ನೀಡಿದ್ದಾರೆ. ಸುರುಪುರ ಕನ್ನಡ ಸಾಹಿತ್ಯ ಸಂಘ, ಸುವರ್ಣ ಕರ್ನಾಟಕ ರಾಜ್ಯೋತ್ಸವ ಸಮಾರಂಭದಲ್ಲಿ ಸನ್ಮಾನವನ್ನು ಸ್ವೀಕರಿಸಿದ್ದಾರೆ.

ರಾಜ್ಯದ ಎಲ್ಲಡೆ ಸಂಗೀತ ಕಾರ್ಯಕ್ರಮವನ್ನು ನೀಡಿದ್ದಾರೆ. ರಾಯಚೂರು, ಬಳ್ಳಾರಿ, ವಿಜಾಪುರ, ಗುಲಬರ್ಗಾ, ಯಾದಗೇರಿ, ಬೀದರ, ಬೆಂಗಳೂರು, ಮುಂತಾದ ಜಿಲ್ಲೆಗಳಲ್ಲಿ **"ದಾಸವಾಣಿ"** ಕಾರ್ಯಕ್ರಮವನ್ನು ನೀಡಿದ್ದಾರೆ. ತಿರುಪತಿಯಲ್ಲಿ ನಡೆಯುವ ಸಂಗೀತೋತ್ಸವದಲ್ಲಿ ಸಂಗೀತ ಕಾರ್ಯಕ್ರಮವನ್ನು ನೀಡಿದ್ದಾರೆ. ಪ್ರತಿವರ್ಷ ಸಂಗೀತ ಶಾಲೆಯ ವಾರ್ಷಿಕೋತ್ಸವವನ್ನು ಮಾಡಿ ಮಕ್ಕಳಿಗೆ ಪ್ರೋತ್ಸಾಹಿಸಿದ್ದಾರೆ. ಸಂಗೀತ ಶಿಬಿರಗಳನ್ನು ನಡೆಸಿದ್ದಾರೆ.

# ಶ್ರೀಮತಿ ರೇಣುಕಾ ಹಾಗರಗುಂಡಗಿ



ಸುಗಮ ಸಂಗೀತ ಕಲಾವಿದರಾದ ಶ್ರೀಮತಿ ರೇಣುಕಾ ಹಾಗರಗುಂಡಗಿಯವರು ೧೯೭೦ರಲ್ಲಿ ಗುಲಬರ್ಗಾದ ಶ್ರೀ ಸಿದ್ದರಾಮಪ್ಪ ಹಾಗೂ ಶ್ರೀಮತಿ ರತ್ನಮ್ಮ ಹಾರಗುಂಡಗಿ ದಂಪತಿಗಳ ಉದರದಲ್ಲಿ ಜನಿಸಿದ್ದಾರೆ. ಇವರು ಎಂ.ಎ. ಸಂಗೀತ ಪದವಿಯನ್ನು ಇಂದಿರಾ ಕಲಾ ಸಂಗೀತ ವಿಶ್ವವಿದ್ಯಾಲಯ ಖೈರಾಘಡದಿಂದ ಎಂ.ಎ. ಚಿತ್ರಕಲೆ ಕಲಾ ಪದವಿಯನ್ನು ಗುಲಬರ್ಗಾ ವಿಶ್ವ ವಿದ್ಯಾಲಯದ ಶರಣ ಬಸವೇಶ್ವರ ಮಹಾವಿದ್ಯಾಲಯದಿಂದ ಪಡೆದಿದ್ದಾರೆ.

ಹಿಂದೂಸ್ತಾನಿ, ಶಾಸ್ತ್ರೀಯ ಸಂಗೀತದಲ್ಲಿ ಹೆಚ್ಚಿನ ಪರಿಣಿತಿ ಹೊಂದಿರುವ ಇವರು ಇದುವರೆಗೂ ನೂರಾರು ಸಂಗೀತ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಇವರು ಚಿಕ್ಕಂದಿನಿಂದಲೇ ತಮ್ಮ ತಾಯಿಯವರ ಜಾನಪದ ಹಾಡುಗಳಿಗೆ ಮಾರು ಹೋಗಿ ಮುಂದೆ ದಿವಂಗತ ಪಂ. ಸಿದ್ಧರಾಮ ಜಂಬಲದಿನ್ನಿಯವರ ಪತ್ನಿ ಶ್ರೀಮತಿ ತಾರಾಬಾಯಿ ಜಂಬಲದಿನ್ನಿ ಹಾಗೂ ಶ್ರೀ ಚನ್ನವೀರ ಗವಾಯಿಗಳು, ಮತ್ತು ಶ್ರೀಮತಿ ತಾರಾಬಾಯಿ ಕುಲಕರ್ಣಿ ಇವರ ಮಾರ್ಗದರ್ಶನದಲ್ಲಿ ಅಭ್ಯಾಸ ಮಾಡಿದ್ದಲ್ಲದೇ ರಾಯಚೂರಿನ ಡಾ. ಮಾಣಿಕರಾವ್, ರಾಯಚೂರಕರ್, ಅವರ ಹತ್ತಿರ ತಮ್ಮ ಅಧ್ಯಯನ ಮುಂದುವರೆಸಿದರು.

ಇವರು ಆಕಾಶವಾಣಿ ಹಾಗೂ ದೂರದರ್ಶನ ಖ್ಯಾತ ಕಲಾವಿದರಾಗಿದ್ದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸರ್ಕಾರಿ ಹಾಗೂ ಅರೆಸರ್ಕಾರಿ ಮತ್ತು ಸಾರ್ವಜನಿಕ ಸಂಘ ಸಂಸ್ಥೆಗಳು ಏರ್ಪಡಿಸಿದ ಸಂಗೀತ ಕಛೇರಿಗಳಲ್ಲಿ ತಮ್ಮ ಸುಗಮ ಸಂಗೀತವನ್ನು ಪ್ರಸ್ತುತಪಡಿಸಿದ್ದಾರೆ. ಮೈಸೂರು ದಸರಾ ಕಾರ್ಯಕ್ರಮ, ಆಕಾಶವಾಣಿ ಬೇರೆ ಬೇರೆ ಕಡೆಗಳಲ್ಲಿ ಆಯೋಜಿಸಿದ ಹಲವು ಸಂಗೀತ ಕಾರ್ಯಕ್ರಮಗಳಲ್ಲಿ ತಮ್ಮ ಗಾಯನವನ್ನು ಸುಶ್ರಾವ್ಯವಾಗಿ ಹಾಡಿ ಜನರ

ಮೆಚ್ಚುಗೆ ಪಡೆದಿದ್ದಾರೆ. ಇವರು ಸ್ವರ, ಸಂಯೋಜನೆ ಮಾಡಿದ ಸಿ.ಡಿ. ಯನ್ನು ಬಿಡುಗಡೆ ಮಾಡಲಾಗಿದೆ. ಸ್ಥಳಿಯ ಗುಲಬರ್ಗಾ ವಿಶ್ವವಿದ್ಯಾಲಯ ಶರಣ ಬಸವೇಶ್ವರ ಸಂಸ್ಥಾನ ನೂತನ ವಿದ್ಯಾಸಂಸ್ಥೆ, ಬುದ್ಧ ವಿಹಾರ ಟ್ರಸ್ಟ, ನಾದಲಹರಿ ಚಾರಿಟೇಬಲ್ ಟ್ರಸ್ಟ್ ಈ ಮೊದಲಾದ ಸಂಘ ಸಂಸ್ಥೆಗಳು ಆಯೋಜಿಸಿದ ಕಾರ್ಯಕ್ರಮಗಳಲ್ಲಿ ಹಾಡಿದ್ದಾರೆ. ಹಲವು ಸಂಘ ಸಂಸ್ಥೆಗಳು ಇವರ ಗಾಯನಕ್ಕೆ ಮೆಚ್ಚಿ ಸನ್ಮಾನಿಸಿವೆ. ಸಧ್ಯ ನಗರದ ಹೈದ್ರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಶ್ರೀಮತಿ ವ್ಹಿ.ಜಿ. ಮಹಿಳಾ ಮಹಾವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕಿಯಾಗಿ ಸೇವೆ ಸಲ್ಲಿಸುತ್ತಿದ್ದು ತಮ್ಮ ಮಾರ್ಗದರ್ಶನದಲ್ಲಿ ಅನೇಕ ವಿದ್ಯಾರ್ಥಿನಿಯರಿಗೆ ಸಂಗೀತದ ಸೌರಭವನ್ನು ನೀಡುತ್ತಿದ್ದಾರೆ.

ಶ್ರೀಮತಿ ರೇಣುಕಾ ಹಾಗರಗುಂಡಿಯವರು ಚಿತ್ರಕಲೆಯಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದು ಆ ಕ್ಷೇತ್ರದಲ್ಲೂ ಗಣನೀಯ ಸಾಧನೆಯನ್ನು ಮಾಡಿದ್ದಾರೆ. ಸಧ್ಯ ಅವರು ಪಿ.ಎಚ್.ಡಿ. ಮಾಡುತ್ತಿರುವರು.

# ಡಾ.ಜಯದೇವಿ ಜಂಗಮಶೆಟ್ಟಿ

ಜಯದೇವಿ ಜಂಗಮಶೆಟ್ಟಿಯವರು ಮೂಲತಃ ಧಾರವಾಡದವರು. ಇವರು ಸಂಗೀತ ಪ್ರೇಮಿಗಳ ಮನೆಯಲ್ಲಿ ಜನ್ಮಿಸಿದವರು. ಇವರ ತಂದೆ ನಿವೃತ್ತ ಕೆ.ಇ.ಬಿ. ಇಂಜಿನಿಯರ. ರಾಜಶೇಖರ ಜಂಗಮಶೆಟ್ಟಿಯವರು ತಾಯಿ ಚಾರುಮತಿ. ಜಯದೇವಿಯವರು ದಿನಾಂಕ **೧೭.೭.೧೯೭೪**ರಲ್ಲಿ ಹನುಮಸಾಗರ ಕುಷ್ಟಗಿ ತಾಲ್ಲೂಕ್‌ದಲ್ಲಿ ಜನಿಸಿದರು.

ಜಯದೇವಿಯವರು ತುಂಬಾ ಪರಿಶ್ರಮದ ವ್ಯಕ್ತಿತ್ವದವರು. ಚಿಕ್ಕವರಿರುವಾಗಲೇ ತಮ್ಮ ಸಹೋದರಿಯರ ಜೊತೆ ತಾವು ಕೂಡಾ ಸಂಗೀತ ಕಲಿತರು. ತಂದೆ ರಾಜಶೇಖರರವರು ಮಕ್ಕಳಿಗೆ ಸಂಗೀತ ಕಲಿಸಬೇಕೆಂದು ಇಚ್ಛೆ ಉಳ್ಳವರು. ಜಯದೇವಿಯರಿಗೆ ನಾಲ್ಕು ಜನ ಸಹೋದರಿಯರು. ತಂದೆಯವರು ೫ ಹೆಣ್ಣು ಮಕ್ಕಳಿಗೂ ಸಂಗೀತ ಕಲಿಯಲು ಪ್ರೋತ್ಸಾಹಿಸಿದರು. ಮತ್ತು ತಮ್ಮ ಮನೆಗೆ ಸಂಗೀತಗಾರರನ್ನು ಕರೆದುಕೊಂಡು ಬರುತ್ತಿದ್ದರು. ಹಾಗೂ ಅವರಿಗೆಲ್ಲ ಊಟ, ಉಪಚಾರ, ವಸತಿಯನ್ನು ತುಂಬಾ ಕಾಳಜಿ ಪೂರ್ವಕವಾಗಿ ಮಾಡುತ್ತಿದ್ದರು. ಮತ್ತು ಬಂದಂತಹ ಸಂಗೀತ ಕಲಾವಿದರು ಇವರ ಮಕ್ಕಳ ಕಂಠ ಹಾಗೂ ಹಾಡಿಗೆ ಮಾರು ಹೋಗುವುದಲ್ಲದೇ ಸಂಗೀತದ ಮಾರ್ಗದರ್ಶನ ಮಾಡುತ್ತಿದ್ದರು.

ಹೀಗೆ ಜಯದೇವಿಯವರು ಜೈಪುರ ಘರಾನೆಯ ಸುಪ್ರಸಿದ್ಧ ಗಾಯಕರಾದ ಪಂ. ಪಂಚಾಕ್ಷರಿ ಸ್ವಾಮಿ ಮತ್ತಿಗಟ್ಟಿ ಅವರಲ್ಲಿ **೬** ವರ್ಷಗಳ ಕಾಲ ಸಂಗೀತ ಕಲೆತರು.

ಬೆಳಗಾವಿಯ ಸಂಗೀತ ವಿದೂಶಿ ಶ್ರೀಮತಿ ಜಯಶ್ರೀ ಪಾಟ್ನೆಕರ ಅವರಲ್ಲಿ ಸಂಗೀತ ಅಭ್ಯಾಸ ಮಾಡಿದರು. ಇಷ್ಟೇ ಸಾಕಾಗಲಿಲ್ಲ ಅಂತಾ ಡಾ. ರಾಜಶೇಖರ ಮನ್ಸೂರ ಇವರಲ್ಲಿಯೂ ಸಂಗೀತ ಶಿಕ್ಷಣ ಪಡೆದರು.

ಇವರು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಎಂ.ಮ್ಯೂಸಿಕ್, ಹಾಗೂ ಡಾ॥ ಹೂಗಾರರವರ ಮಾರ್ಗದರ್ಶನದಲ್ಲಿ **"ವಚನ ಗಾಯನ ಪರಂಪರೆ"** ಒಂದು ಸಂಗೀತಾತ್ಮಕ ಅಧ್ಯಯನ ಕುರಿತು ಮಾಡಿದ ಅಧ್ಯಯನಕ್ಕೆ ಪಿ.ಎಚ್.ಡಿ. ಪದವಿಯನ್ನು ಪಡೆದಿದ್ದಾರೆ. ಮತ್ತು ವಿದ್ವತ್, ವಿಶಾರದಾ, ಅಲಂಕಾರ ಪರೀಕ್ಷೆಗಳಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ.

ಜಯದೇವಿಯವರು ಕರ್ನಾಟಕ ಸರಕಾರ ಸಂಗೀತ ನೃತ್ಯ ಅಕಾಡಮಿ ವತಿಯಿಂದ ೩ ವರ್ಷ ಶಿಷ್ಯ ವೇತನವನ್ನು ಪಡೆದಿದ್ದಾರೆ.

ಸರಕಾರದ ಸಂಗೀತ ನೃತ್ಯ ಅಕಾಡಮಿ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ್ದಾರೆ.

ಕರ್ನಾಟಕ ವಿಶ್ವವಿದ್ಯಾಲಯದ ಸಂಗೀತ ಮಹಾವಿದ್ಯಾಲಯದಲ್ಲಿ ಅತಿಥಿ ಉಪನ್ಯಾಸಕಿಯಾಗಿ ಸೇವೆಸಲ್ಲಿಸುತ್ತಿದ್ದಾರೆ.

ಇವರು ಆಕಾಶವಾಣಿಯ ಕಲಾವಿದೆಯಾಗಿ ಶಾಸ್ತ್ರಿಯ ಸಂಗೀತ ಮತ್ತು ಸುಗಮ ಸಂಗೀತ ಕಾರ್ಯಕ್ರಮಗಳನ್ನು ಕೊಡುತ್ತಿದ್ದಾರೆ. ಮತ್ತು ನಾಟಕದಲ್ಲೂ ಪಾತ್ರ ಮಾಡಿರುತ್ತಾರೆ.

**"ವಚನ ಸಂಗೀತ ರತ್ನ ಸಿದ್ಧರಾಮ ಜಂಬಲ್‌ದಿನ್ನಿ"** ಅವರ ಕುರಿತು ಸಂಶೋದಾತ್ಮಕ ಕೃತಿಯನ್ನು ಸಹ ಹೊರತಂದಿದ್ದಾರೆ. ಈ ಕೃತಿಗೆ **"ಅಮ್ಮ ಪ್ರಶಸ್ತಿ"** ಬಂದಿದೆ. ಇನ್ನೂ ಅನೇಕ ಲೇಖನಗಳನ್ನು ಬರೆದಿದ್ದಾರೆ. ಡಾ॥ ಮಲ್ಲಿಕಾರ್ಜುನ ಮನ್ಸೂರ **"ರಾಷ್ಟ್ರೀಯ ಯುವ ಪುರಸ್ಕಾರ", "ಸಾಂಸ್ಕೃತಿಕ ಗುರು"** ಪ್ರಶಸ್ತಿ , **"ಚನ್ನ ಅಕ್ಕ ಪ್ರಶಸ್ತಿ"** ಇನ್ನೂ ಅನೇಕ ಪ್ರಶಸ್ತಿಗಳನ್ನೂ ಪಡೆದಿದ್ದಾರೆ.

ಇವರು ಹುಬ್ಬಳ್ಳಿ, ಬೆಳಗಾವಿ, ಗುಲ್ಬರ್ಗಾ ಇನ್ನೂ ನೂರೆಂಟು ಕಡೆಗಳಲ್ಲಿ ಸಂಗೀತ ಕಾರ್ಯಕ್ರಮ ಕೊಟ್ಟಿದ್ದಾರೆ.

ಇವರು ಹತ್ತು ಹಲವು ಸಂಗೀತ, ವಚನಗಳ ಧ್ವನಿ ಸುರುಳಿಗಳನ್ನು ಹೊರ ತಂದಿದ್ದಾರೆ. ದೂರದರ್ಶನದಲ್ಲೂ ಇವರು ಸಂಗೀತ ಕಾರ್ಯಕ್ರಮಗಳನ್ನು ಕೊಟ್ಟಿರುತ್ತಾರೆ.

ಇವರು ತುಂಬಾ ಚೆನ್ನಾಗಿ ಮಾತು ಕೂಡಾ ಆಡುತ್ತಾರೆ. ಬೇರೆಯವರಿಗೆ ಸಹಾಯ ಕೂಡಾ ಆಡುತ್ತಾರೆ. ಬೇರೆಯವರಿಗೆ ಸಹಾಯ ಕೂಡಾ ಮಾಡುತ್ತಾರೆ. ಒಳ್ಳೆ ಹೃದಯ ವೈಶಾಲ್ಯ ಇವರಿಗಿದೆ.

# ವಿದುಷಿ ಸುರಮಣಿ ಕೃಷ್ಣಾ ಹಾನಗಲ್

ಕೋಮಲ ಕಂಠದ ಕೃಷ್ಣಾ ಹಾನಗಲ್ ತಾಯಿಯ ಹಾದಿಯಲ್ಲೆ ನಡೆದವರು. ತಾಯಿ ಗಂಗೂಬಾಯಿ ಹಾನಗಲ್ ಇವರಿಗೆ ಮಗಳು, ಗೆಳತಿ, ಗಾಯನ ಸಾಥಿ ಎಲ್ಲವೂ ಆಗಿದ್ದರು. ಕೃಷ್ಣಾಗೆ ಸಂಗೀತವು ತಾಯಿಯ ಬಳುವಳಿ. ತಾಯಿ ಮಗಳಿಗೆ ೧೮ ವರ್ಷಗಳ ಅಂತರ. ಸುಮಾರು ೭೦ವರ್ಷ ಅವರಿಬ್ಬರೂ ಜೊತೆ ಜೊತೆಯಾಗಿಯೇ ನಡೆದವರು. ಕೃಷ್ಣ ಸಖಿಗಳನ್ನು ಹಂಚಿಕೊಂಡವರು.

ಕೃಷ್ಣಾ ಹುಟ್ಟಿದ್ದು ೧೯೩೯ರಲ್ಲಿ, ಆ ವೇಳೆಗಾಗಲೇ ತಾಯಿ ಸಂಗೀತ ಕ್ಷೇತ್ರದಲ್ಲಿ ಬಹಳ ದೂರ ಸಾಗಿದ್ದರು. ಸಂಗೀತದಲ್ಲಿ ತಮ್ಮದೇ ಛಾಪು ಮೂಡಿಸಿದ್ದರು. ಕೃಷ್ಣಾಗೆ ದೈವದತ್ತವಾದ ಕಂಠಸಿರಿಯಿತ್ತು. ಸದಾ ಕಾಲ ತಾಯಿಯ ಹಾಡು ಕೇಳುವ ಸೌಭಾಗ್ಯ ಬೇರೆ. ಸಂಗೀತ ಅವರಿಗೆ ಜನ್ಮದತ್ತವಾಗಿ ಬಂದದ್ದು. ಆಸಕ್ತಿ ಅಭಿರುಚಿ ಬೆಳೆದದ್ದರಲ್ಲಿ ಅತಿಶಯೋಕ್ತಿಯಲ್ಲಿ. ಗಂಗೂಬಾಯಿಯವರು ಕೃಷ್ಣಾವರನ್ನು ಚಿಕ್ಕವಯಸ್ಸಿನಿಂದಲೇ ತಮ್ಮ ಸಂಗೀತ ಕಛೇರಿಗಳಿಗೆ ಕರೆದೊಯ್ಯುತ್ತಿದ್ದರು. ತಾಯಿಯ ಸಂಗೀತವನ್ನು ತನ್ಮಯತೆಯಿಂದ ಆಲಿಸುತ್ತಿದ್ದ ಕೃಷ್ಣಾಳಿಗೆ ತಾಯಿ ಅವಳ ಆಸಕ್ತಿಗೆ ನೀರೆರೆದು ಪೋಷಿಸಿದರು.

ತಾಯಿಯೇ ಗುರುವಾದ ಮೇಲೆ ಸಂಗೀತಾಭ್ಯಾಸ ನಿರಾಂತಕವಾಗಿ ಸಾಗಿತ್ತು. ಕೃಷ್ಣಾರವರು ಶಾಸ್ತ್ರೀಯ ಸಂಗೀತದ(ಹಿಂದೂಸ್ತಾನಿ) ಜೊತೆಗೆ ಸುಗಮ ಸಂಗೀತ, ಭಕ್ತಿ ಸಂಗೀತವನ್ನು ಕಲಿತರು. ದಾಸರ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದರು. ಕಲಿತದ್ದು ಹೈಸ್ಕೂಲ್ ಆದರೂ ಸಂಗೀತ ವಿದ್ಯೆಯಲ್ಲಿ ಯಾವುದೇ ಉನ್ನತ ಡಿಗ್ರಿಗೂ ಕಡಿಮೆ ಇಲ್ಲದಂತೆ ಅವರ ಸಂಗೀತ ವಿದ್ಯೆ ಮೈಗೂಡಿತ್ತು. ತಾಯಿಯ ಎಲ್ಲ ಕಛೇರಿಯಲ್ಲೂ ಹಾಜರಿದ್ದು ಅವರ ಪ್ರತಿಯೊಂದು ವಿಷಯವನ್ನು ತಮ್ಮ ದಿನಚರಿಯಲ್ಲಿ ದಾಖಲಿಸಿದ್ದಾರೆ. ಅವರನ್ನರಸಿ ಬಂದ ಗೌರವ ಸನ್ಮಾಗಳಿಗೆ ಕಡಿಮೆ ಇಲ್ಲ. ಗಂಗೂಬಾಯಿಯವರ ಕಂಠದಲ್ಲಿ ಕಂಡುಬರದ ಲಾಲಿತ್ಯ ಕೋಮಲತೆ ಮಾಧುರ್ಯ ಕೃಷ್ಣಾರವರ ಕಂಠದಲ್ಲಿತ್ತು. ತಾಯಿ ಮಗಳಿಬ್ಬರ ಸಂಗೀತವನ್ನು ಕೇಳಿದ್ದ ವರಕವಿ ಬೇಂದ್ರೆ ಒಮ್ಮೆ *"ಗಂಗೂಬಾಯಿ ಗಾನ ಗಗನ ಮುಟ್ಟದ, ಕೃಷ್ಣಾಳ ಗಾಯನ ಹೃದಯ ತಟ್ಟದ"* ಎಂದಿದ್ದರು.

ಕೃಷ್ಣಾ ಹಾನಗಲ್ ಆಕಾಶವಾಣಿಯ **"ಎ"** ಗ್ರೇಡ ಕಲಾವಿದರಾಗಿ ಸಂಗೀತ ಸಮ್ಮೇಳನ ಹಾಗೂ ರಾಷ್ಟ್ರೀಯ ಸಂಗೀತ ಸಮ್ಮೇಳನದಲ್ಲಿ ಕಾರ್ಯಕ್ರಮ ನೀಡಿದ್ದಾರೆ. ದೇಶದ ಪ್ರಮುಖ ನಗರಗಳಲ್ಲಿ ಸಂಗೀತ ಕಛೇರಿ ನೀಡಿದ್ದಾರೆ.

ಗ್ವಾಲಿಯರ್ ತಾನ್‌ಸೇನ ಸಂಗೀತ ಸಮ್ಮೇಳನ, ಮೈಸೂರು ದಸರಾ ಮಹೋತ್ಸವ, ಸವಾಯಿ ಗಂಧರ್ವ ಸಂಗೀತ ಮಹೋತ್ಸವ, ಮುಂತಾದ ಕಡೆಗಳಲ್ಲಿ ಸಂಗೀತ ಕಾರ್ಯಕ್ರಮ ನೀಡಿ ಅಪಾರ ಜನ ಮನ್ನಣೆಗಳಿಸಿದ್ದಾರೆ. ಕೃಷ್ಣಾರವರಿಗೆ ತಾಯಿಯ ವಿದ್ವತ್ತಿನ ಮೇಲೆ ತುಂಬಾ ಗೌರವ. ತಾಯಿಯ ಬಗ್ಗೆ ಹೇಳುವಾಗಲೆಲ್ಲ *"ಅರೆ ಸಿಂಧು ನಾನು ಬಿಂದು, ನನಗೆ ನನ್ನ ತಾಯಿಯೇ ಚೈತನ್ಯ"* ಎನ್ನುತ್ತಿದ್ದರು.

ಕೃಷ್ಣಾ ತಾಯಿಯೊಂದಿಗೆ ಸಾಂಸ್ಕೃತಿಕ ರಾಯಭಾರಿಯಾಗಿ ನೇಪಾಳ, ಪಾಕಿಸ್ತಾನ, ಫ್ರಾನ್ಸ್, ಜರ್ಮನಿ, ಅಮೇರಿಕಾ, ಕೆನಾಡಾ ದೇಶಗಳಲ್ಲಿ ಸಂಗೀತ ಕಛೇರಿಯಲ್ಲಿ ಭಾಗವಹಿಸಿದ್ದಾರೆ. ಇವರಿಗೆ **"ಸುರುಮಣಿ", "ಕರ್ನಾಟಕ ಗಾನಕಲಾ ತಿಲಕ", "ಚಂದ್ರಹಾಸ ಪ್ರಶಸ್ತಿ", "ರಾಜ್ಯೋತ್ಸವ ಪ್ರಶಸ್ತಿ"**, ಉಸ್ತಾದ ಫಯಾದ್ ಅಹಮ್ಮದ್ ಖಾನ್ ಮೆಮೋರಿಯಲ್ ಟ್ರಸ್ಟಿನ **"ಕಿರಾಣಾ ಘರಾಣಾ ಪ್ರಶಸ್ತಿ"** ಮುಂತಾದ ಅನೇಕ ಪ್ರತಿಷ್ಠಿತ ಪ್ರಶಸ್ತಿಗಳು ಬಂದಿವೆ.

ಕೃಷ್ಣಾ ಸರಳ ಸುಸಂಸ್ಕೃತ ಸಂಗೀತಜ್ಞೆ, ಮಾತು ಕಡಿಮೆಯಾದರೂ ಭಾವನಾ ಜೀವಿ. ತಮ್ಮ ಭಾವನೆಗಳನ್ನು ಹಾಡಿನ ಮೂಲಕ ಹೊರಹಾಕುವ ಗಾನ ವಿಶಾರದೆ.

ಕೃಷ್ಣಾ ಹಾನಗಲ್‌ರವರು **ಸಪ್ಟಂಬರ್ ೩ ೨೦೦೪** ರಂದು ಕ್ಯಾನ್ಸರ್‌ನಿಂದ ಮರಣ ಹೊಂದಿದರು.

# ಶ್ರೀಮತಿ ಲಲಿತಾ ಜಿ ರಾವ್.

ಇವರು **೧೯೪೨**ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು. ತಂದೆ ತಾಯಿ ಮಗಳು ಸಂಗೀತ ಕಲಿಯಲು ಪ್ರೋತ್ಸಾಹಿಸಿದರು. ಇವರು ಬಿ.ಎಸ್ಸಿ., ಬಿ.ಇ., ಎಂ.ಇ.(ಕೆನಡಾ) ಪದವಿಧರರು.

ರಾಮರಾವ್ ನಾಯಕರಲ್ಲಿ ಹತ್ತನೇ ವಯಸ್ಸಿನಿಂದಲೇ ಸಂಗೀತ ಅಭ್ಯಾಸ ಪ್ರಾರಂಭಿಸಿದರು. ಮುಂದೆ ಉನ್ನತ ವ್ಯಾಸಂಗಕ್ಕೆ ವಿದೇಶಕ್ಕೆ ಹೋದರು. ಅಲ್ಲಿಂದ ಹಿಂದಿರುಗಿದ ನಂತರ ದಿನಕರ ಕೈಕಿಣಿ ಹಾಗೂ ಕದೀಮ್ ಹುಸೇನ್‌ಖಾನ್ ಅವರುಗಳಲ್ಲಿ ಆಗ್ರಾ ಘರಾನಾದ ಸಂಗೀತ ಮುಂದುವರೆಸಿದರು. ದೃಪದ್, ಧಮಾರ್, ಖ್ಯಾಲ್, ಠುಮ್ರಿ, ತರಾನಾಗಳಲ್ಲಿ ಪರಿಣಿತಿ ಪಡೆದರು. ಆಕಾಶವಾಣಿ ಮತ್ತು ದೂರದರ್ಶನ ಕೇಂದ್ರಗಳಿಂದಲೂ ಇವರ ಸಂಗೀತ ಕಚೇರಿಗಳು ಪ್ರಸಾರವಾಗಿವೆ.ಃ

**ಕಾರ್ಯಕ್ರಮಗಳು:** ಮುಂಬಯಿ, ಚಂದಿಘಡ್, ದೆಹಲಿ, ಬೆಂಗಳೂರು ಮುಂತಾದ ಕಡೆಗಳಲ್ಲದೇ ಲಂಡನ್, ಅಮೇರಿಕಾ, ಕೆನಡಾ ಮುಂತಾದ ಪಾಶ್ಚಾತ್ಯ ದೇಶಗಳಲ್ಲೂ ಇವರ ಕಾರ್ಯಕ್ರಮಗಳು ನಡೆದಿವೆ.

**ಸಾಧನೆ:** ಮುಂಬೈಯಲ್ಲಿನ ಸಾಜನ್ ಮಿಲಾಪ್ ಸಂಸ್ಥೆಯ ಸ್ಥಾಪಕರಲ್ಲೊಬ್ಬರು. ಸಂಗೀತ ಸಮ್ಮೇಳನಗಳಲ್ಲಿ ಪ್ರಬಂಧ ಮಂಡನೆ ಪ್ರಾತ್ಯಕ್ಷಿಕೆ ನೀಡಿದ್ದಾರೆ. ಮುಂಬೈ ವಿಶ್ವವಿದ್ಯಾಲಯದ ಗೌರವ ಸಂಗೀತ ಉಪನ್ಯಾಸಕರು. **೧೯೭೮**ರಲ್ಲಿ ಆಕಾಶವಾಣಿಯ ರಾಷ್ಟ್ರೀಯ ಸಂಗೀತ ಕಾರ್ಯಕ್ರಮ ಜಾಲದಿಂದ ಇವರ ಕಾರ್ಯಕ್ರಮ ಬಿತ್ತರಗೊಂಡಿದೆ.

# ಶ್ರೀಮತಿ ಶ್ಯಾಮಲಾ ಜಿ. ಭಾವೆ.

ಹಿಂದೂಸ್ತಾನಿ ಹಾಗೂ ಕರ್ನಾಟಕಿ ಸಂಗೀತ ಪದ್ಧತಿಗಳೆರಡರಲ್ಲೂ ನಿಷ್ಣಾತರಾಗಿ, ಶಾಸ್ತ್ರೀಯ ಸಂಗೀತದ ಜೊತೆಗೆ ಸುಗಮ ಸಂಗೀತದಲ್ಲಿ ವಿಶೇಷ ಸಾಧನೆ ಗೈದು, ಕರ್ನಾಟಕ ಸಂಗೀತ ನೃತ್ಯ ಅಕಾಡಮಿ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿ, ಸಂಗೀತಕ್ಕಾಗಿ ತಮ್ಮ ಸಂಪೂರ್ಣ ಜೀವನವನ್ನು ಮೀಸಲಾಗಿರಿಸಿದ ಉಭಯ ಗಾನ ವಿದುಷಿ ಶ್ರೀಮತಿ ಶ್ಯಾಮಲಾ ಜಿ. ಭಾವೆ ಕರ್ನಾಟಕ ಮಹಿಳಾ ಸಂಗೀತಗಾರರಲ್ಲಿ ಅಗ್ರಗಣ್ಯರು.

ಶ್ಯಾಮಲಾ ಭಾವೆ ಅವರು ಜನಿಸಿದ್ದು ಬೆಂಗಳೂರಿನಲ್ಲಿ **೧೯೪೧ರ ಮಾರ್ಚ ೧೪**ರಂದು. ಅವರದು ಸಂಗೀತ ಹಾಗೂ ರಂಗ ಭೂಮಿ ಪರಂಪರೆಯ ಮನೆತನ. ಅವರ ಮುತ್ತಜ್ಜ ವಿಷ್ಣುದಾಸ್ ಭಾವೆ ಮರಾಠಿ ರಂಗಭೂಮಿಯ ಆದ್ಯ ಪ್ರವರ್ತರು. ತಂದೆ ಗೋವಿಂದ ವಿಠಲ ಭಾವೆ ಗಾಯಕ ಹಾಗೂ **೧೪** ವಾದ್ಯ ನುಡಿಸಬಲ್ಲ ಪ್ರತಿಭಾನ್ವಿತರು. ಸಂಗೀತೋದ್ಧಾರಕ ಪಂ. ವಿಷ್ಣು ದಿಗಂಬರ ಪಲೂಸ್ಕರ ಅವರ ಶಿಷ್ಯಂದಿರು. ತಾಯಿ ಶ್ರಾಯಿಮತಿ ಲಕ್ಷ್ಮೀ ಭಾವೆ ಜೇನು ಕಂಠದ ಗಾಯಕಿ. ಇಂತಹ ಸಂಗೀತ ವಾತಾವರಣದ ಮನೆತನದಲ್ಲಿ ಜನಿಸಿದ ಶ್ಯಾಮಲಾ ಅವರಿಗೆ ೩ನೇ ವಯಸ್ಸಿನಲ್ಲಿ ಸಂಗೀತ ಕಲಿಕೆಗೆ ನಾಂದಿ. ೬ನೇ ವಯಸ್ಸಿನಲ್ಲಿ ಸಂಗೀತ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಬಹುಮಾನ ಪಡೆದ ಹೆಗ್ಗಳಿಗೆ ೧೨ನೇ ವಯಸ್ಸಿಗೆ ಸಾರ್ವಜನಿಕ ಸಂಗೀತ ಕಛೇರಿ ನೀಡಿಕೆ. ತಂದೆ-ತಾಯಿಯರಿಂದ ಹಿಂದುಸ್ತಾನಿ ಸಂಗೀತವನ್ನು ಬಿ.ದೊರೆಸ್ವಾಮಿ ಹಾಗೂ ಎ. ಸುಬ್ಬರಾಯ ಅವರಲ್ಲಿ ಕರ್ನಾಟಕೀ ಸಂಗೀತ ತಾಲೀಮು ಪಡೆದು ಉಭಯಗಾನ ವಿದುಷಿ ಎಂಬ ಖ್ಯಾತಿಗಳಿಸಿದರು.

**೧೯೩೦**ರಲ್ಲಿ ಬೆಂಗಳೂರಿನಲ್ಲಿ ಪ್ರಪ್ರಥಮ ಹಿಂದೂಸ್ತಾನಿ ಸಂಗೀತ ಶಾಲೆ ಸರಸ್ವತಿ ಸಂಗೀತ ವಿದ್ಯಾಲಯವನ್ನು ಸ್ಥಾಪಿಸಿದವರು ಶ್ಯಾಮಲಾರವರ ತಂದೆ ಗೋವಿಂದ ವಿಠಲ ಭಾವೆಯವರು. ಅದನ್ನು ಸಮರ್ಥವಾಗಿ ಮುನ್ನಡೆಸುತ್ತ ಸಹಸ್ರಾರು ಸಂಗೀತ ಆಸಕ್ತರಿಗೆ ಸಂಗೀತ ಶಿಕ್ಷಣ ನೀಡುತ್ತಿರುವ ಶ್ಯಾಮಲಾರವರು ವಿವಿಧ ದೇಶಗಳಲ್ಲಿ ಸಂಗೀತ ಕಛೇರಿ ನೀಡಿ ಭಾರತೀಯ ಸಂಗೀತಕ್ಕೆ ರಾಷ್ಟ್ರೀಯ ಖ್ಯಾತಿ ತಂದು ಕೊಟ್ಟಿದ್ದಾರೆ. ಪಂ. ಬಸವರಾಜ ಅವರ ಮಾರ್ಗದರ್ಶನದಲ್ಲಿ ಸಂಗೀತ ತಾಲೀಮು ಪಡೆದ ಅವರು ಅನೇಕ ಚಲನಚಿತ್ರ, ಸಾಕ್ಷ್ಯ ಚಿತ್ರ, ಗ್ರಾಮ್‌ಫೋನ್ ಹಾಗೂ ಕ್ಯಾಸಟ್‌ಗಳಲ್ಲಿ ಧ್ವನಿ ನೀಡಿ, ಸಂಗೀತ ನಿರ್ದೇಶನ ಮಾಡಿದ್ದಾರೆ. ಒಂಬತ್ತು ಭಾಷೆಗಳ ಸುಮಾರು **೧೩೦೦**ಕ್ಕೂ ಹೆಚ್ಚಿನ ಗೀತೆಗಳಿಗೆ ರಾಗ ಸಂಯೋಜನೆ ಮಾಡಿದ್ದಾರೆ. ಕರ್ನಾಟಕ ಸಂಗೀತ ನೃತ್ಯ ಅಕಾಡಮಿಯ ಸದಸ್ಯರಾಗಿ,

ಅಕಾಡಮಿಯ ಅಧ್ಯಕ್ಷರಾಗಿ ಸಂಗೀತ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. **೧೯೯೭**ರಲ್ಲೊ ಅವರ ಶಿಷ್ಯರು ಅಭಿಮಾನಿಗಳು ಅವರ ಸುವರ್ಣ ಮಹೋತ್ಸವ ಆಚರಿಸಿ, **"ಸ್ವರ ಸಾಧನಾ"** ಎಂಬ ಅಭಿನಂದನ ಗ್ರಂಥ ಅರ್ಪಿಸಿದ್ದಾರೆ. ಅವರಿಗೆ **"ಉಭಯಗಾನ ವಿಶಾರದೆ", "ಉಭಯಗಾನ ವಿದೂಷಿ", "ಕರ್ನಾಟಕ ರಾಜ್ಯೋತ್ಸವ", "ಗಾನ ಮಾಧುರಿ", "ಸುರಮಣಿ, "ಕರ್ನಾಟಕ ಸಂಗೀತ ನೃತ್ಯ ಅಕಾಡಮಿಯ ಕರ್ನಾಟಕ ಕಲಾ ತಿಲಕ"**, ಅಮೇರಿಕಾದ ಹ್ಯೂ ಸ್ಟನ್ ವಿಶ್ವವಿದ್ಯಾಲಯದ ಗೌರವ **"ಡಾಕ್ಟರೇಟ್"**, ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾಲಯದ ಗೌರವ **"ಡಾಕ್ಟರೇಟ್ ಭಾರತ ಗೌರವ, "ವರ್ಷದ ಮಹಿಳೆ"**(೧೯೯೭), **"ಗಾನಕೋಕಿಲೆ", "ಕೃಷ್ಣ ಗಾನ ಮಾಧುರಿ"** ಮುಂತಾದ ಪ್ರಶಸ್ತಿ ಪುರಸ್ಕಾರ ದೊರೆತಿವೆ.

# ಶ್ರೀಮತಿ ಸುಮಂಗಲಾ ಜಂಗಮಶೆಟ್ಟಿ



ಇವರು **೨೦.೭.೧೯೭೨**ರಲ್ಲಿ ಸಂಗೀತ ಪ್ರೇಮಿಗಳ ಮನೆಯಲ್ಲಿ ಜನಿಸಿದರು. ಇವರ ತಂದೆ ರಾಜಶೇಖರ. ತಾಯಿ ಚಾರುಮತಿ. ತಂದೆತಾಯಿಗಳ ಪ್ರೋತ್ಸಾಹದಿಂದ ಸಂಗೀತ ಕಲಿತರು. ಸುಮಂಗಲಾರವರು ಸೇರಿ ೫ ಜನ ಅಕ್ಕತಂಗಿಯರು. ಇವರ ತಂದೆಯವರು ಸಂಗೀತ ಪ್ರೇಮಿ. ದೊಡ್ಡ ದೊಡ್ಡ ಸಂಗೀತ ಕಲಾವಿದರು ಇವರ ಮನೆಗೆ ಬಂದು ರಾಜಶೇಖರ ಜಂಗಮಶೆಟ್ಟಿಯವರು ನೀಡುವ ಅತಿಥಿ ಸತ್ಕಾರವನ್ನು ಪಡೆಯುತ್ತಿದ್ದರು. ಮತ್ತು ಅವರ ಮಕ್ಕಳ ಸಂಗೀತ ಕೇಳಿ ಆಶೀರ್ವದಿಸುತ್ತಿದ್ದರು. ಹಾಗೆ ಬಂದವರಲ್ಲಿ ಡಾ. ಮಲ್ಲಿಕಾರ್ಜುನ ಮನ್ಸೂರ, ಸಿದ್ಧರಾಮಯ್ಯ ಜಂಬಲ್‌ದಿನ್ನಿ, ನರಸಿಂಹಲು ವಡವಾಟಿ ಹೀಗೆ ಮುಂತಾದವರು.

ಸುಮಂಗಲಾರವರು ರಾಯಚೂರಿನಲ್ಲಿ ಪಂ. ನರಸಿಂಹಲು ವಡವಾಟಿಯವರಲ್ಲಿ ಸಂಗೀತ ಕಲಿಯಲು ಪ್ರಾರಂಭಿಸಿದರು. ಮುಂದೆ ಧಾರವಾಡದಲ್ಲಿ ಜೈಪೂರ ಅತ್ರೋಲಿ ಘರಾಣೆಯ ಪ್ರಸಿದ್ಧ ಗಾಯಕರಾದ ಪಂ. ಪಂಚಾಕ್ಷರಿ ಸ್ವಾಮಿ ಮತ್ತಿಗಟ್ಟಿಯವರಲ್ಲಿ ಸತತ **೬** ವರ್ಷಗಳ ಕಾಲ ಸಂಗೀತ ಅಭ್ಯಾಸ ಮಾಡಿದರು. ಮುಂದೆ ಕೆಲವು ವರ್ಷ ಪಂ. ಚಂದ್ರಶೇಖರ ಪುರಾಣಿಕಮಠ ಅವರಲ್ಲಿಯೂ ಸಂಗೀತ ಕಲಿತರು.

ಇವರು ಕೆಲವು ಧ್ವನಿಸುರಳಿಗಳನ್ನು ಮಾಡಿರುತ್ತಾರೆ. ಆಕಾಶವಾಣಿಯ ಮತ್ತು ದೂರದರ್ಶನ ಕಲಾವಿದೆಯರಾಗಿದ್ದಾರೆ.

ಇವರು ಕೆಲವು ವರ್ಷ ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಅತಿಥಿ ಉಪನ್ಯಾಸಕಿಯಾಗಿ ಸೇವೆಸಲ್ಲಿಸಿದ್ದಾರೆ. ಇಗ ಜೆ.ಎಸ್.ಎಸ್. ವಿದ್ಯಾ ಸಂಸ್ಥೆ(ಮೈಸೂರು)ಯಲ್ಲಿ ಸಂಗೀತ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

**ಸಂಗೀತ ಕಾರ್ಯಕ್ರಮ:**

ಕನ್ನಡ ವಿ.ವಿ.ಹಂಪಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಧಾರವಾಡ, ಆಕಾಶವಾಣಿ ಗುಲಬರ್ಗಾ, ಧಾರವಾಡ, ಎರಡನೆ ಅಂತರಾಷ್ಟ್ರೀಯ ಯುವ ಜನೋತ್ಸವ, ಜಯಪುರ, ಇನ್ನೂ ಹತ್ತು ಹಲವು ಕಡೆ ಕಾರ್ಯಕ್ರಮಗಳನ್ನು ಕೊಟ್ಟಿರುತ್ತಾರೆ.

ಇವರ ಗಾಯನ ಮೆಚ್ಚಿ ಪ್ರಜಾವಾಣಿ, ಸಂಯುಕ್ತ ಕರ್ನಾಟಕ ಮುಂತಾದ ಪತ್ರಿಕೆಗಳಲ್ಲಿ ಲೇಖನ ಬರೆದಿವೆ.

# ಶ್ರೀಮತಿ ವೈಷ್ಣವಿ ಹಾನಗಲ್

ಶ್ರೀಮತಿ ವೈಷ್ಣವಿ ಹಾನಗಲ್, ಭಾರತೀಯ ಪರಂಪರೆಯ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ ಕ್ಷೇತ್ರದಲ್ಲಿ ಮಹತ್ವದ ಹೆಗ್ಗರುತನ್ನು ಮಾಡಿದ ಪದ್ಮವಿಭೂಷಣ ಪ್ರಶಸ್ತಿಗೆ ಬಾಜನರಾದ ಡಾ.ಗಂಗೂಬಾಯಿ ಹಾನ್‌ಗಲ್‌ರವರ ಪ್ರತಿಷ್ಠಿತ ಮನೆತನದಿಂದ ಬಂದವರಾಗಿದ್ದಾರೆ. ಕರ್ನಾಟಕ ಜನ್ಮಭೂಮಿಯು ವಿಶಿಷ್ಟ ಗುಣವನ್ನು ಹೊಂದಿದ ಅನೇಕ ಮಹಾನ್ ಸಂಗೀತಗಾರರಾದ ಪಂ. ಮಲ್ಲಿಕಾರ್ಜುನ ಮನ್ಸೂರ, ಪಂ. ಭೀಮಸೇನ ಜೋಶಿ, ಪಂ. ಬಸವರಾಜ ರಾಜಗುರು ಮುಂತಾದವರನ್ನು ಪಡೆದಿದೆ.

ಶ್ರೀಮತಿ ವೈಷ್ಣವಿ ಹಾನ್‌ಗಲ್ ಇವರು ಹಾನ್‌ಗಲ್ ಮನೆತನದ ೪ನೆಯ ತಲೆಮಾರಿನವರಾಗಿದ್ದಾರೆ. ಸುಮಧುರ ಧ್ವನಿಯನ್ನು ಹೊಂದಿದ ಇವರು ಕಿರಾಣಾ ಘರಾಣೆಯ ಸಂಗೀತ ಸಂಪ್ರದಾಯವನ್ನು ಮುಂದುವರೆಸಿದರು. ಇವರು ತಮ್ಮದೇ ಆದ ವಿಶಿಷ್ಟ ಶೈಲಿಯನ್ನು ಹೊಂದಿದ್ದಾರೆ. ಇವರು ತಮ್ಮ ಅಜ್ಜಿಯವರಾದ ಶ್ರೀಮತಿ ಗಂಗೂಬಾಯಿ ಹಾನ್‌ಗಲ್ ಇವರಿಂದ ಚಿಕ್ಕವಯಸ್ಸಿನಲ್ಲಿ ಸಂಗೀತ ತರಬೇತಿಯನ್ನು ಪ್ರಾರಂಭಿಸಿದರು. ನಂತರ ಗಂಗೂಬಾಯಿ ಹಾನ್‌ಗಲ್ ಇವರಿಂದ ಚಿಕ್ಕವಯಸ್ಸಿನಲ್ಲಿ ಸಂಗೀತ ತರಬೇತಿಯನ್ನು ಪ್ರಾರಂಭಿಸಿದರು. ನಂತರ ಗಂಗೂಬಾಯಿಯವರ ಮಗಳಾದ ಶ್ರೀಮತಿ ಕೃಷ್ಣಾ ಹಾನ್‌ಗಲ್ ಇವರಿಂದ ಪಡೆದರು. ವೈಷ್ಣವಿಯವರು ಶ್ರೀ ಬಾಬುರಾವ್ ಮತ್ತು ಶ್ರೀಮತಿ ಲಲಿತಾಬಾಯಿ ಹಾನ್‌ಗಲ್ ಇವರ ಪುತ್ರಿಯಾಗಿದ್ದಾರೆ.

ವೈಷ್ಣವಿಯವರಿಗೆ ಸಂಗೀತದ ಬಗ್ಗೆ ಇರುವ ಆಳವಾದ ಜ್ಞಾನದಿಂದ ಇವರನ್ನು ಪ್ರಸಿದ್ಧ ಕಲಾಕಾರರನ್ನಾಗಿಸಿದೆ. ಇವರು ಶಾಸ್ತ್ರೀಯ ಮತ್ತು ಲಗು ಸಂಗೀತದಲ್ಲಿ ಕೌಶಲ್ಯವನ್ನು ಹೊಂದಿದ್ದಾರೆ. ಇವರು ಕರ್ನಾಟಕ ವಿಶ್ವ ವಿದ್ಯಾಲಯ ಧಾರವಾಡದಿಂದ ಸಂಗೀತ ಪದವಿಯನ್ನು (ಬಿ ಮ್ಯೂಜಿಕ್) ಪಡೆದಿದ್ದಾರೆ. ಮಹಾರಾಷ್ಟ್ರದ ಕೊಲ್ಹಾಪುರದ ಶಿವಾಜಿ ವಿಶ್ವ ವಿದ್ಯಾಲಯದಿಂದ ಸಂಗೀತದಲ್ಲಿ ಸ್ನಾತಕೋತ್ತರ (ಎಮ್ ಮ್ಯೂಜಿಕ್) ಪದವಿ ಪಡೆದಿದ್ದಾರೆ. ಮಹಾನ್ ಸಂಗೀತಗಾರರಾದ ದೆಹಲಿಯ ಪಂ. ಮಣಿಪ್ರಸಾದರಿಂದ ಸಂಗೀತದಲ್ಲಿ ಮಾರ್ಗದರ್ಶನ ಪಡೆಯುತ್ತಿದ್ದಾರೆ. ಮತ್ತು ಪಂ. ನಾಗನಾಥ ಒಡೆಯರಿಂದ ಸಂಗೀತ ಮಾರ್ಗದರ್ಶನ ಪಡೆದಿದ್ದಾರೆ.

ಧಾರವಾಡ ಆಕಾಶವಾಣಿಯಿಂದ ಇವರ ಕಾರ್ಯಕ್ರಮ ಪ್ರಸಾರವಾಗಿದೆ. ಇವರು ಅನೇಕ ಪ್ರತಿಷ್ಠಿತ ಸಂಗೀತೋತ್ಸವದಲ್ಲಿ ಭಾಗವಹಿಸಿದ್ದಾರೆ. ಅವುಗಳಲ್ಲಿ ಸವಾಯಿ ಗಂಧರ್ವರ ಪುಣ್ಯತಿಥಿ ಕುಂದಗೋಳ, ಗುರುವಂದನಾ ಕಲಾ ಅಕಾಡಮಿ, ಬೆಳಗಾವಿ, ಹುಬ್ಬಳ್ಳಿ, ಹಂಪಿಉತ್ಸವ, ಮಂಗಳೂರು ಕಾರವಳಿ ಉತ್ಸವ ಮುಂತಾದವುಗಳು.

**೧೯೯೦**ರಲ್ಲಿ ಜರ್ಮನಿಯಲ್ಲಿ ನಡೆದ, ಭಾರತೀಯ ಉತ್ಸವದಲ್ಲಿ ತಮ್ಮ ಅಜ್ಜಿಯವರಾದ ಡಾ॥ ಗಂಗೂಬಾಯಿ ಹಾನ್‌ಗಲ್ ಜೊತೆ ಭಾಗವಹಿಸಿದ್ದರು. ವೈಷ್ಣವಿಯವರು ಕಲಾ ವಿಕಾಸ ಪರಿಷತ್ ಗದಗ್ ಕರ್ನಾಟಕದಿಂದ **ಕೃಪಾ ಭೂಷಣ** ಪ್ರಶಸ್ತಿ ಪಡೆದಿದ್ದಾರೆ.

ಇವರು ಮುಂಬೈಯಲ್ಲಿ ತಮ್ಮ ಮಗಳಾದ ತೇಜಸ್ವಿನಿ ಮತ್ತು ಪತಿ ಮಹೇಶ ತಿಲಕಾಡ ಇವರ ಜೊತೆ ಇದ್ದಾರೆ.

ಇವರು ಎ.ಸಿ.ಸಿ ಮತ್ತು ಆಯ್.ಟಿ.ಎ. ಪ್ರಶಸ್ತಿಯನ್ನು ಪಡೆದಿದ್ದಾರೆ.

# ಶ್ರೀಮತಿ ಸೀತಾ ಎ. ಕಾಗಲ್

ವಿಜಾಪುರದಲ್ಲಿ ಜನಿಸಿ, ಮಹಾರಾಷ್ಟ್ರದಲ್ಲಿ ಸಂಗೀತ ಶಿಕ್ಷಣ ಪಡೆದು ದೇಶದ ತುಂಬೆಲ್ಲ ಹೆಸರು ಗಳಿಸಿ ಬೆಂಗಳೂರಿನಲ್ಲಿ ನೆಲಸಿರುವ ಶ್ರೀಮತಿ ಸೀತಾ ಎ. ಕಾಗಲ್ ಅವರು ಕರ್ನಾಟಕದ ಹಿರಿಯ ತಲೆಮಾರಿನ ಮಹಿಳಾ ಕಲಾವಿದೆಯರಲ್ಲಿ ಒಬ್ಬರಾಗಿದ್ದಾರೆ. **೧೯೨೧**ರಲ್ಲಿ ಬಿಜಾಪುರದಲ್ಲಿ ಜನಿಸಿದ ಶ್ರೀಮತಿ ಸೀತಾ ಎ. ಕಾಗಲ್ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ಮಾಧ್ಯಮದಲ್ಲಿ ಪ್ರತಿಭಾನ್ವಿತ ಹೆಸರು ಪಡೆದಿದ್ದಾರೆ.

ಕಿರಾಣಾ ಘರಾಣಾದ ವೈವಿದ್ಯತೆಗೆ ಹೆಸರಾದ ಶ್ರೀಮತಿ ಸೀತಾರವರ ಗುರು ಪರಂಪರೆ ಬಹಳ ದೀರ್ಘವಾದುದು. ಪುಣೆಯ ಗಂಧರ್ವ ವಿದ್ಯಾಲಯದಲ್ಲಿ ಶ್ರೀ ವಿನಾಯಕರಾವ್ ಪಟವರ್ಧನ, ದಶರಥ ---- ಮತ್ತು ಸವಾಯಿ ಗಂಧರ್ವರ ಶಿಸ್ತಿನ ಶಿಕ್ಷಣದಲ್ಲಿ ಪಳಗಿದವರು.

ತಮ್ಮ **೧೪**ನೆಯ ವಯಸ್ಸಿನಲ್ಲೇ ಪ್ರಯಾಗದಲ್ಲಿ ನಡೆದ ಸಂಗೀತ ಸಮ್ಮೇಳನದಲ್ಲಿ ಭಾಗವಹಿಸುವ ಅವಕಾಶ ಪಡೆದ ಶ್ರೀಮತಿ ಸೀತಾ ಕಾಗಲ್‌ರ ಸಂಗೀತ ಪಯಣ ಬಹಳ ಸುಧೀರ್ಘವಾದುದು. ಅಲಹಾಬಾದ್, ಕಾನ್‌ಪುರ್, ಬನಾರಸ್ ಮುಂತಾದ ಕಡೆ ಅನೇಕ ಉತ್ಸವಗಳಲ್ಲಿ ಸೀತಾ ಅವರ ಕಾರ್ಯಕ್ರಮಗಳು ನಡೆದಿವೆ. ಶ್ರೀಮತಿ ಹೀರಾಬಾಯಿ ಬಡೋದೆಕರ್ ಅವರ ಆಹ್ವಾನದ ಮೇರೆಗೆ ನಿಜಾಮರ ಹೈದರಾಬಾದ್ ಬಾನುಲಿ ಮತ್ತು ಔರಂಗಾಬಾದ್ ಬಾನುಲಿಯಲ್ಲಿ ನೇರ ಪ್ರಸಾರ ನೀಡಿದ ಹೆಗ್ಗಳಿಕೆ ಸೀತಾ ಅವರದು. ಆಕಾಶವಾಣಿಯ ಬೆಂಗಳೂರು, ಮುಂಬೈ, ಧಾರವಾಡ, ಪುಣೆ, ಅಲಹಾಬಾದ್ ಕೇಂದ್ರಗಳು ಸೀತಾ ಅವರ ಕಾರ್ಯಕ್ರಮಗಳನ್ನು ಪ್ರಸಾರ ಮಾಡಿವೆ.

ಪಂಡಿತ್ ಸರ್ ತೇಜ್ ಬಹದ್ದೂರ್ ಸಪ್ರುರವರಿಂದ **"ಮಹಾರಾಷ್ಟ್ರದ ಹಿಂದೂಸ್ತಾನಿ ಸಂಗೀತ ತಾರೆ", "ನೈಟಿಂಗೇಲ್ ಆಫ್ ಮಹಾರಾಷ್ಟ್ರ"** ಮುಂತಾದ ಬಿರುದುಗಳಿಗೆ ಪಾತ್ರರಾದ ಸೀತಾ ಅವರಿಗೆ ಕರ್ನಾಟಕ ಸರ್ಕಾರ ಪ್ರತಿಷ್ಠಿತ ರಾಜ್ಯೋತ್ಸವ ಪ್ರಶಸ್ತಿಯನ್ನು ಕೊಟ್ಟು ಗೌರವಿಸಿದೆ. ಕರ್ನಾಟಕ ಸಂಗೀತ ನೃತ್ಯ ಅಕಾಡಮಿ **೧೯೯೯–೨೦೦೦**ನೇ ಸಾಲಿನ **"ಕರ್ನಾಟಕ ಕಲಾಶ್ರೀ"** ಪ್ರಶಸ್ತಿ ಗೌರವಿಸಿದೆ.

# ಶ್ರೀಮತಿ ಯಮುನಮ್ಮ

ಹೈದಾರಾಬಾದ ಕರ್ನಾಟಕ ಭಾಗದ ಹಿಂದುಳಿದ ಪ್ರದೇಶದಲ್ಲಿ ಹಿಂದೂಸ್ತಾನಿ ಸಂಗೀತವನ್ನು ಜನಪ್ರಿಯಗೊಳಿಸಿದ ಶ್ರೀಮತಿ ಯಮುನಮ್ಮ ಅವರು ಕರ್ನಾಟಕದ ಮಹಿಳಾ ಕಲಾವಿದರಲ್ಲೊಬ್ಬರಾಗಿದ್ದಾರೆ. **೮೦** ಅಂಗವಿಕಲೆ ವಯೋವೃದ್ಧೆ ಶ್ರೀಮತಿ ಯಮುನಮ್ಮಾ ಉತ್ತರ ಕರ್ನಾಟಕದಲ್ಲಿ ಅದರಲ್ಲೂ ರಾಯಚೂರಿನ ಆಸು–ಪಾಸಿನಲ್ಲಿ ಬಹಳ ಜನಪ್ರಿಯತೆ ಪಡೆದಿರುವ ಹಿರಿಯ ಕಲಾವಿದೆ.

ಓದಿದ್ದು **೪**ನೇ ತರಗತಿಯಾದರೂ ಸಂಗೀತದಲ್ಲಿ ಯಮುನಮ್ಮನವರ ಸಾಧನೆ ಬಹಳ ದೊಡ್ಡದು. ಶ್ರೀ ಸೀನಪ್ಪ ಆಚಾರ್ ಮತ್ತು ಲಕ್ಷ್ಮಣ ಗೌಡ್ರು ಮುಂತಾದ ವಿದ್ವಾಂಸರ ಬಳಿ ಕಠಿಣ ಸಾಧನೆ ಮಾಡಿರುವ ಯಮುನಮ್ಮನವರು ಧಾರವಾಡ, ಗುಲ್ಬರ್ಗಾ, ಸೊಲ್ಲಾಪುರ, ಸೋವರ ಪೇಟೆ ಮಠ, ಕಿಲೇದ ಮಠ, ಬಿಜ್ಜಾಲಿ, ಕೀಡಿ ಮಿಷ್ತ್ರರ್ಸ್ ಮುಂತಾದ ಕಡೆ ಕಾರ್ಯಕ್ರಮ ನೀಡಿ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದಿದ್ದಾರೆ.

ಹಲವು ಶಿಷ್ಯರನ್ನು ತಯ್ಯಾರಿಸಿರುವ ಶ್ರೀಮತಿಯವರಿಗೆ ಇತರ ಸಂಘ ಸಂಸ್ಥೆಗಳು ಸನ್ಮಾನಿಸಿ ಗೌರವಿಸಿವೆ. ಶ್ರೀಮತಿ ಯಮುನಮ್ಮನವರಿಗೆ ಕರ್ನಾಟಕ ಸಂಗೀತ ನೃತ್ಯ ಅಕಾಡಮಿ **೧೯೯–೨೦೦೦**ನೇ ಸಾಲಿನ **"ಕರ್ನಾಟಕ ಕಲಾಶ್ರೀ"** ಪ್ರಶಸ್ತಿ ನೀಡಿ ಗೌರವಿಸಿದೆ.

# ಶ್ರೀಮತಿ ಅಕ್ಕಮಹಾದೇವಿ ಹಿರೇಮಠ

ಹಿಂದೂಸ್ತಾನಿ ಸಂಗೀತ ಪಿಟಿಲು ವಾದನದಲ್ಲಿ **"ಎ"** ಶ್ರೇಣಿ ಕಲಾವಿದರಾದ ಶ್ರೀಮತಿ ಅಕ್ಕ ಮಹಾದೇವಿ ಹಿರೇಮಠ ಅವರಿಗೆ ಸಂಗೀತದಲ್ಲಿ ಮೊದಲ ಮಾರ್ಗದರ್ಶನ ದೊರೆತದ್ದು ತಂದೆ ಪ್ರಖ್ಯಾತ ತಬಲಾ ವಾದಕರಾದ ಶ್ರೀ.ಜಿ.ಎಸ್ ಹಿರೇಮಠ ಅವರಿಂದ. ನಂತರ ಪತಿ ಪಂಡಿತ ಬಿ.ಎಸ್. ಮಠ ಅವರಲ್ಲಿ ಪಿಟೀಲು ವಾದನದಲ್ಲಿ ಅಕ್ಕಮಹಾದೇವಿ ಅವರಿಗೆ ಪ್ರಬುದ್ದ ಶಿಕ್ಷಣ ದೊರೆಯಿತು. ಮೂಲತಃ ಗ್ವಾಲಿಯರ್ ಮತ್ತು ಕಿರಾಣಾ ಘರಾಣಾ ಕಲಾವಿದರಾದ ಶ್ರೀಮತಿ ಅಕ್ಕಮಹಾದೇವಿಯವರು ಆಕಾಶವಾಣಿಯ ಪಣಜಿ ನಿಲಯದ ಕಲಾವಿದರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಖಯಾಲ್‌ನ್ನು ಗಾಯಕಿ ಶೈಲಿಯಲ್ಲಿ ನುಡಿಸುವುದರಲ್ಲಿ ಅಕ್ಕಮಹಾದೇವಿಯವರು ವಿಶೇಷ ಪ್ರತಿಭೆಯನ್ನು ಹೊಂದಿದ್ದಾರೆ. **೧೯೭೭**ರಲ್ಲಿ ದೆಹಲಿಯ ಕೇಂದ್ರ ಆಕಾಶವಾಣಿಯವರು ಆಯೋಜಿಸಿದ್ದ ರಾಷ್ಟ್ರ ಮಟ್ಟದ ಸಂಗೀತ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಪಡೆದು ಪಂ. ಮಲ್ಲಿಕಾರ್ಜುನ ಮನ್ಸೂರ್ ಅವರಿಂದ ಬಂಗಾರದ ಪದಕ ಸ್ವೀಕರಿಸಿದ ಹೆಗ್ಗಳಿಕೆ ಅಕ್ಕಮಹಾದೇವಿಯವರದು. ಆಕಾಶವಾಣಿಯ ಹಲವಾರು ರಾಷ್ಟ್ರೀಯ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿರುವ ಶ್ರೀಮತಿ ಅಕ್ಕಮಹಾದೇವಿಯವರು ತಮ್ಮ ಪತಿ ಬಿ. ಎಸ್. ಮಠ ಅವರೊಂದಿಗೆ ನಡೆಸಿಕೊಡುವ ದ್ವಂದ್ವ ಪಿಟೀಲು ವಾದನ ಕಾರ್ಯಕ್ರಮ ಅತ್ಯಂತ ಜನಮನ್ನಣೆ ಪಡೆದಿದೆ. ಬೆಂಗಳೂರಿನ ದರ್ಶನ ಲೈವ್ ಕ್ಯಾಸೆಟ್ ಕಂಪನಿ ಅಕ್ಕಮಹಾದೇವಿಯವರ ಸಂಗೀತದ ಎರಡು ಧ್ವನಿ ಸುರಳಿಗಳನ್ನು ಹೊರತಂದಿದೆ.

ಶ್ರೀಮತಿ ಅಕ್ಕಮಹಾದೇವಿ ಹಿರೇಮಠ ಅವರ ಸಂಗೀತ ಸಾಧನೆಯನ್ನು ಗುರುತಿಸಿ ಕರ್ನಾಟಕ ಸಂಗೀತ ನೃತ್ಯ ಅಕಾಡಮಿ ತನ್ನ **೨೦೦೭-೦೮**ರ ಸಾಲಿನ ವಾರ್ಷಿಕ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

# ಶ್ರೀಮತಿ ಜ್ಯೋತಿಲಕ್ಷ್ಮಿ ಡಿ. ಪಿ.



ಇವವ ಜನ್ಮ ದಿನಾಂಕ **೨೨-೨-೧೯೭೧.** ಧಾರವಾಡ. ಡಾ॥ಜ್ಯೋತಿಯವರು ಹುಬ್ಬಳ್ಳಿಯ ಎಸ್.ಜೆ.ಎಂ. ವಿ.ಎಸ್. ಕಲಾ ಮತ್ತು ವಾಣಿಜ್ಯ ಮಹಿಳಾ ಮಹಾವಿದ್ಯಾಲಯದಲ್ಲಿ ಸಂಗೀತ ವಿಭಾಗದ ಮುಖ್ಯಸ್ಥರಾಗಿ ಕೆಲಸ ಮಾಡುತ್ತಿರುವರು. ಇವರು **೧೯೭**ರಲ್ಲಿ ಬಿ. ಮ್ಯೂಜಿಕ್ ನಲ್ಲಿ **ಬಂಗಾರದ ಪದಕ** ಪಡೆದಿದ್ದಾರೆ. ಮುಂದೆ ಎಮ್. ಮ್ಯೂಜಿಕ್ ಹಾಗೂ ಪಿ.ಎಚ್.ಡಿ. ಮಾಡಿದ್ದಲ್ಲದೆ ವಿದ್ವತ್ ವಿಶಾರದಾ ಪರೀಕ್ಷೆಯಲ್ಲೂ **ಪ್ರಥಮ ಶ್ರೇಣಿ**ಯಲ್ಲಿ ಪಾಸ್ ಮಾಡಿರುವರು.

ಆಕಾಶವಾಣಿ ಮತ್ತು ದೂರದರ್ಶನದಲ್ಲಿ ಕಾರ್ಯಕ್ರಮ ಕೊಡುತ್ತಿರುವರು. ಇವರು ಶಾಸ್ತ್ರೀಯ ಮತ್ತು ಅರೆ ಶಾಸ್ತ್ರೀಯ ಸಂಗೀತ ಕಲಾವಿದೆ. ಇವರು ಚಿತ್ರದುರ್ಗದ ನವೋದಯ ವಿದ್ಯಾಲಯದಲ್ಲಿ ಸಂಗೀತ ಶಿಕ್ಷಕರಾಗಿದ್ದರು. ನಂತರ **೨೦೦೪** ರಿಂದ ಹುಬ್ಬಳ್ಳಿಯ ಮಹಿಳಾ ಮಹಾವಿದ್ಯಾಲಯದಲ್ಲಿ ಕೆಲಸ ಮಾಡುತ್ತಿರುವರು.

ಇವರು ಸಂಗೀತ ಸೆಮಿನಾರಗಳಿಗೆ ಹಾಜರಾಗಿರುತ್ತಾರೆ. ಮತ್ತು ಹುಬ್ಬಳ್ಳಿ, ಕಿತ್ತೂರು, ಹೈದರಾಬಾದ್‌ಗಳಲ್ಲಿ ನಡೆದ ಕಾರ್ಯಗಾರದಲ್ಲೂ ಭಾಗವಹಿಸಿದ್ದಾರೆ.

ಇವರು ಅರಿವಿನೆಡೆಗೆ ಪಯಣ ಎಂಬ ಹೆಸರಿನ ಭಕ್ತಿಗೀತೆಯ ಸಿ.ಡಿ. ಬಿಡುಗಡೆ ಮಾಡಿದ್ದಾರೆ. ಇವರು ಹಂಪಿ ಉತ್ಸವ, ಧಾರವಾಡ ಜಿಲ್ಲಾ ಉತ್ಸವ, ಕನ್ನಡ ಸಾಹಿತ್ಯ ಸಮ್ಮೇಳನ, ರಾಜ್ಯ ಮಟ್ಟದ ಸುಗಮ ಸಂಗೀತ ಸಮ್ಮೇಳನ, ಗದಗ, ಬಳ್ಳಾರಿ ಮುಂತಾದ ಕಡೆಗಳಲ್ಲಿ ಸಂಗೀತ ಕಾರ್ಯಕ್ರಮಗಳನ್ನು ಕೊಟ್ಟಿದ್ದಾರೆ.

ಇವರು ಸಂಗೀತ ಸಂಘ ಸಂಸ್ಥೆಗಳಲ್ಲಿ ಸದಸ್ಯತ್ವವನ್ನು ಪಡೆದಿದ್ದಾರೆ. ಇವರ ತಂದೆ ಡಾ॥ ಪ್ರಲ್ಹಾದರವರು ಮತ್ತು ಇವರ ಪತಿ ರವಿ ಕೊಡ್ಲಗಿ ಇವರು ಜ್ಯೋತಿಯವರಿಗೆ ಸಂಗೀತಕ್ಕೆ ಪ್ರೋತ್ಸಾಹ ಕೊಟ್ಟು ಬೆಳಗಲು ಕಾರಣರಾಗಿದ್ದಾರೆ.

# ಶ್ರೀಮತಿ ಸರಳಾ ಮಧುಸೂದನ್ ದೇಸಾಯಿ

ಸರಳಾರವರು **೨೨-೭-೫೯**ರಲ್ಲಿ ಹುಬ್ಬಳ್ಳಿಯ ಶ್ರೀಯುತ ದಿ. ರಾಮಚಂದ್ರ ಮತ್ತು ಶ್ರೀಮತಿ ದಿ. ಶಾಂತಾಬಾಯಿ ದೇಸಾಯಿ ಇವರ ಮಗಳಾಗಿ ಹುಟ್ಟಿದಳು. ಇವರ ತಂದೆ ಸ್ವತಃ ಸಂಗೀತಗಾರರಾಗಿದ್ದರಿಂದ ಹಾಡುಗಾರಿಕೆ ಮತ್ತು ಹಾರ್ಮೋನಿಯಂ ವಾದನ ಎರಡರಲ್ಲೂ ಪರಿಣಿತಿ ಹೊಂದಿದ್ದ ಕಲಾವಿದರು ಹೌದು. ಇದರಿಂದಾಗಿ ಚಿಕ್ಕವಳಾಗಿದ್ದಾಗಲೆ ಸಮಕಗೀತದ ಒಲವು ಬೆಳೆಸಿಕೊಂಡಿದ್ದರು. ಇವರ ಸಂಗೀತ ಆಸಕ್ತಿ ಗಮನಿಸಿ ತಂದೆಯವರು ಸಂಗೀತ ಪಾಠ ಮಾಡಿದರು. ಹೀಗಾಗಿ ತಂದೆಯೇ ಇವರ ಸಂಗೀತದ ಮೊದಲ ಗುರು.

ಮುಂದೆ ಸ್ಕೂಲು, ಕಾಲೇಜಿನಲ್ಲಿ ಸಂಗೀತಕ್ಕೆ ಅಲ್ಲಿಯ ಶಿಕ್ಷರಿಂದ ಒಳ್ಳೆ ಪ್ರೋತ್ಸಾಹ ದೊರಕಿತು. ಬಿ.ಮ್ಯೂಜಿಕ್ ಹಾಗೂ ಎಮ್. ಮ್ಯೂಜಿಕ್ ನಲ್ಲಿ ಇವರಿಗೆ ಶಾರದಾ ಹಾನ್‌ಗಲ್, ಆರ್.ಪಿ.ಹೂಗಾರ, ಪಂಚಾಕ್ಷರಿ ಮತ್ತಿಗಟ್ಟಿ, ಎ.ವಿ. ಪಾಟೀಲ, ಜಾನಕಿ ಅಯ್ಯರ್, ರಾಜಗುರು ಸಂಗಮೇಶ್ವರ ಗುರವ ಹೀಗೆ ಅನೇಕ ಸಂಗೀತ ವಿದ್ವಾನರಿಂದ ಇವರಿಗೆ ಸಂಗೀತ ಪಾಠವಾಯಿತು. ಇವರದು ಕಿರಾಣಾ ಘರಾಣಾ ಖ್ಯಾಲ್ ಗಾಯನ.

ಮುಂದೆ ಹೆಚ್ಚಿನ ಸಂಗೀತಕ್ಕಾಗಿ ಪ್ರಭಾ ಅತ್ರೇಯವರ ಮನೆಯಲ್ಲಿ ಇದ್ದುಕೊಂಡು ಸಂಗೀತ ಕಲಿತರು, **೧೯೮೯**ರಲ್ಲಿ ಗುರುಶಿಷ್ಯ ಪರಂಪರೆಯಂತೆ ಗಂಡಾ ಸಮಾರಂಭವನ್ನು ಮಾಡಿದರು. ಇದು ಸರಳಾರವರ ಜೀವನದ ಅತ್ಯಂತ ಸಂತೋಷದ ಘಟನೆ.

ಎಲ್ಲರಂತೆ ಇವರು ಕೂಡಾ ಸಂಗೀತ ಕಲಿಯಲು ತುಂಬಾ ಕಷ್ಟಗಳನ್ನು ಎದುರಿಸಿ ಮುಂದೆ ಬಂದಿದ್ದಾರೆ. ಅದರಂತೆ ಸಂಗೀತದಲ್ಲಿ ಸಂತೋಷದ ಕ್ಷಣಗಳನ್ನು ಕಳೆದಿದ್ದಾರೆ.

ಇಗ ಬೆಂಗಳೂರಿನಲ್ಲಿ ವಾಸಿಸುತ್ತಿದ್ದು, ಪತಿಯವರು ದೊಡ್ಡ ಕಂಪನಿಯಲ್ಲಿ ಇಂಜಿನಿಯರ್ ಆಗಿದ್ದಾರೆ. ೩ ಮಕ್ಕಳು ಹಾಗೂ ಮನೆಯಲ್ಲಿ ಸಂಗೀತದ ವಾತಾವರಣ ಹೀಗೆ ಇವರ ಜೀವನ ತೃಪ್ತಿದಾಯಕವಾಗಿದೆ. ಟಿ.ವಿ. ಮತ್ತು ರೇಡಿಯೋ ಕಾರ್ಯಕ್ರಮಗಳನ್ನು ಕೊಡುತ್ತಿರುವರು.

# ಡಾ॥ ಸುಮಿತ್ರಾ ಹಿರೇಮಠ

ಧಾರವಾಡದ ದೊಡ್ಡ ಮನೆತನದ ಹಿರೇಮಠ ಇವರ ಮನೆಯಲ್ಲಿ ಜನಿಸಿದ ಸುಮಿತ್ರಾರವರಿಗೆ ಸಹಜವಾಗಿ ಮನೆಯಲ್ಲಿ ಸಂಗೀತಕ್ಕೆ ಪ್ರೋತ್ಸಾಹ ಕೊಟ್ಟರು. ಸುಮಿತ್ರಾರವರು ಧಾರವಾಡ ಕರ್ನಾಟಕ ಸಂಗೀತ ಮಹಾವಿದ್ಯಾಲಯದಲ್ಲಿ ಬಿ. ಮ್ಯೂಜಿಕ್ ಮಾಡುತ್ತಾ ಆ ಕಾಲೇಜಿನ ಪ್ರಧ್ಯಾಪಕ ಆಗಿದ್ದಂತಹ ಶ್ರೀಮತಿ ಶಾರದಾ ಹಾನಗಲ್ ಇವರ ಹತ್ತಿರ ಸಂಗೀತ ಕಲಿಯಲು ಪ್ರಾರಂಭಿಸಿದರು. ನಂತರ ಪಂಚಾಕ್ಷರಿ ಮತ್ತಿಗಟ್ಟಿ, ಪಂ. ಚಂದ್ರಶೇಖರ ಪುರಾಣಿಕಮಠ, ಪಂ. ಸಂಗಮೇಶ್ವರ ಗುರವ, ಶ್ರೀಮತಿ ಜಾನಕಿ ಅಯ್ಯರ್, ಮುಂತಾದ ಗುರುಗಳ ಹತ್ತಿರ ಸಂಗೀತ ಶಿಕ್ಷಣ ಪಡೆದಿದ್ದಾರೆ.

ಸುಮಿತ್ರಾ ಸಂಗೀತದಲ್ಲಿ ಎಮ್. ಮ್ಯೂಜಿಕ್, ಪಿ.ಎಚ್.ಡಿ. ಮುಗಿಸಿ ಗದಗನಲ್ಲಿ ಪಂಡಿತ ಪಂಚಾಕ್ಷರಿ ಗವಾಯಿ ಸಂಗೀತ ಮಹಾವಿದ್ಯಾಲಯದಲ್ಲಿ ಅಸೋಸಿಯಟ್ ಪ್ರೋಫಸರ್ ಆಗಿರುತ್ತಾರೆ.

ಇವರು ತುಂಬಾ ಕಡೆಗಳಲ್ಲಿ ನಡೆದ ಸೆಮಿನಾರ್‌ನಲ್ಲೂ ಪ್ರಬಂಧ ಮಂಡಿಸಿದ್ದಾರೆ. **"ಸಂಗೀತದ ಶಕ್ತಿ" "ಸಂಗೀತ ಚಿಕಿತ್ಸೆ"** ಎಂಬ ಲೇಖನ ಕರ್ನಾಟಕ ಸಂಗೀತ ನೃತ್ಯ ಅಕಾಡಮಿ ಪ್ರಕಟಿಸಿದ **"ನಾದ ಲಹರಿ"** ಎಂಬ ಪುಸ್ತಕದಲ್ಲಿ ಪ್ರಕಟಿಸಿದ್ದಾರೆ. ಗಾನಲಹರಿ ಎಂಬ ಪುಸ್ತಕದಲ್ಲಿ **"ಖಯಾಲ್ ಸಂಗೀತ"** ಎಂಬ ಲೇಖನ ಪ್ರಕಟಿಸಿದ್ದಾರೆ.

ಭಕ್ತಿ ಗೀತೆಗಳ ಸಿ.ಡಿ.ಯನ್ನು ಬಿಡುಗಡೆಗೊಳಿಸಿದ್ದಾರೆ. ಲಘುಸಂಗೀತ ಕಾರ್ಯಕ್ರಮವನ್ನು ಗುಲ್ಬರ್ಗಾ ಟಿ.ವಿ. ಚಂದನದಲ್ಲಿ ಪ್ರಸಾರವಾಗಿರುತ್ತದೆ.

ಇವರ ಕಾರ್ಯಕ್ರಮಗಳು **"ಕನ್ನಡ ಸಂಸ್ಕೃತಿ"** ಇಲಾಖೆಯಿಂದ ಕೊಟ್ಟಿದ್ದಾರೆ. ಬೇರೆ ಬೇರೆ ಕಡೆಗಳಲ್ಲೂ ಸಂಗೀತ ಕಾರ್ಯಕ್ರಮಗಳನ್ನು ಕೊಟ್ಟಿರುತ್ತಾರೆ. ಸಂಗೀತ ಅಕಾಡಮಿ ಆಯೋಜಿಸಿದ **"ವಚನೋತ್ಸವದಲ್ಲಿ"** ಭಾಗವಹಿಸಿದ್ದರು.

ಇವರಿಗೆ ಇವರ ಪತಿ ಸಂಗೀತಕ್ಕೆ ತುಂಬಾ ಪ್ರೋತ್ಸಾಹ ನೀಡುತ್ತಾರೆ. ಇವರ ಪತಿ ಕರ್ನಾಟಕ ವಿ.ವಿ.ಧಾರವಾಡದಲ್ಲಿ ಪ್ರೋಫೆಸರ್ ಆಗಿರುತ್ತಾರೆ.

# ಶ್ರೀಮತಿ ಗೀತಾ ಎಸ್. ಜವಡೆಕರ್

ಶ್ರೀಮತಿ ಗೀತಾ ಜವಡೇಕರ್ ಇವರು ಧಾರವಾಡದಲ್ಲಿ ಜನಿಸಿದವರು. **೧೯೫೩**ರಲ್ಲಿ ಜನಿಸಿದ್ದಾರೆ. ತಾಯಿಯ ತಂದೆಯವರು ನಾರಾಯಣನಾಥ ಗುರ್ಟು ದಕ್ಷ ಸಿತಾರ ವಾದಕರು. ಅಜ್ಜನಿಂದಲೇ ಸಂಗೀತದ ಜೇಂಕಾರ. ಮುಂದೆ ಸಂಗೀತದಲ್ಲಿ ಬಿ.ಎ. ಪದವಿ, ಸಂಗೀತ ವಿಶಾರದಾ, ಅಲಂಕಾರ ಪರೀಕ್ಷೆಯಲ್ಲಿ ತೇರ್ಗಡೆಯಾದರು.

ಇವರ ಸಂಗೀತ ಗುರುಗಳು. ಆರ್. ಪಿ. ಹುಗಾರ, ಪಂಚಾಕ್ಷರಿ ಮತ್ತಿಗಟ್ಟಿ ಅವರಿಂದ ಶಿಕ್ಷಣ. **೧೯೭೪**ರಲ್ಲಿ ನಿವೃತ್ತಿ. ಬುವಾ ಸರನಾಯಕ ಹಾಗೂ ಪದ್ಮಾವತಿ ಗೋಖಲೆ (ಸಾಲಿಗ್ರಾಮ) ವರಿಂದ ವಿಶೇಷ ಸಂಗೀತ ಅಭ್ಯಾಸ.

ಇವರು ಮೈಸೂರು ದಸಾರಾ ಹಬ್ಬದಲ್ಲಿ **೩** ಬಾರಿ ಕಚೇರಿ ಕೊಟ್ಟಿದ್ದಾರೆ. ಮುಂಬೈ ಸರ್ಬನ್ ಆರ್ಟ್ಸ ಸರ್ಕಲ್, ರಂಗಭವನ ಮುಂಬೈ ದೂರದರ್ಶನ ಬೆಂಗಳೂರು ಮುಂತಾದ ಕಡೆಗಳಲ್ಲಿ ಸಂಗೀತ ಕಚೇರಿ ನೀಡಿದ್ದಾರೆ.

ಮುಂಬೈಯ ಸುರ್‌ಸಿಂಗಾರ್ ಸಂಸದ್ ಸಂಸ್ಥೆಯಿಂದ **ಸುರ್‌ಮಣಿ** ಪ್ರಶಸ್ತಿ ದೊರೆತಿದೆ. ಇಗ ನೆಲೆಸಿರುವದು ಬೆಂಗಳೂರು.

# ಶ್ರೀಮತಿ ಭಾರತಿ ಮೇಸ್ತಾ

ಭಾರತಿ ದಿನಕರ ಮೆಸ್ತಾ ಕರ್ನಾಟಕ ರಾಜ್ಯದ ಕೊಂಕಣಿ ಮಾತನಾಡುವ ಕುಟುಂಬದಲ್ಲಿ ಹುಟ್ಟಿದರು. ಇವರ ತಂದೆಯವರಾದ ದಿನಕರ್ ಎಸ್. ಮೆಸ್ತಾ ಸಬ್‌ರಿಜಿಸ್ಟರ್ ಮತ್ತು ತಾಯಿ ಸುಶೀಲಾಬಾಯಿ ಮೆಸ್ತಾ ಗೃಹಿಣಿಯಾಗಿದ್ದರು. ಭಾರತಿ ಮೆಸ್ತಾರವರ ಮೊದಲ ಸಂಗೀತ ಪಾಠವನ್ನು ಮಾಸ್ಟರ್ ಥಿಟೆ ಹಾಗೂ ಸಹೋದರರಿಂದ ಕಲಿತರು. ಇವರು ೧೧ ವರ್ಷದವರಿರುವಾಗಲೇ ಹಾರ್ಮೋನಿಯಂ ನುಡಿಸುವುದನ್ನು ಕಲಿತರು. ನಂತರ ತಂದೆಯವರು ಜೊತೆ ಧಾರವಾಡಕ್ಕೆ ಬಂದು ನೆಲಿಸಿದರು. ಇವರು ತಂದೆಯವರ ಜೊತೆ ಅವರ ಸ್ನೇಹಿತರ ಮನೆಗೆ ಹೋದಾಗ ಅವರ ಮಗಳು ಪಂ. ರಾಜಗುರುರವರಿಂದ ಸಂಗೀತ ಕಲಿಯುತ್ತಿದ್ದಳು. ರಾಜಗುರುರವರ ಸಂಗೀತ ಭರತಿ ಮೆಸ್ತಾರವರಿಗೆ ಬಹಳ ಪರಿಣಾಮ ಬೀರಿತು. ಪಂ. ರಾಜಗುರುರವರು ಭಾರತಿಯವರಿಗೆ ಒಂದು ಹಾಡನ್ನು ಹಾಡಲು ಹೇಳಿದರು. *"ಕೂಹೂ ಕೂಹೂ ಬೋಲೆ ಕೋಯಲಿಯಾ"* ಈ ಹಾಡು ಹಿಂದಿ ಚಿತ್ರ ಗೀತೆಯಾಗಿದ್ದರೂ, ಶಾಸ್ತ್ರೀಯ ಸಂಗೀತವನ್ನು ಆಧರಿಸಿತ್ತು. ಈ ಹಾಡು ಕೇಳಿ ರಾಜಗುರುರವರು ಸಂಗೀತ ಕಲಿಯುವಂತೆ ಪ್ರೋತ್ಸಾಹಿಸಿ ಆಶೀರ್ವದಿಸಿದರು. ನಂತರ ಇವರು ಆರ್.ಪಿ.ಹೂಗಾರವರ ಬಳಿ ಸಂಗೀತ ಕಲಿಯತೊಡಗಿದರು.

ಹೂಗಾರವರ ಬಳಿ ಖ್ಯಾಲ್ ಮತ್ತು ಲಘು ಸಂಗೀತ ಕಲಿತರು. ಆಗ ಭಾರತಿಯವರು ಕೆಲವೊಂದು ಸಂಗೀತ ಕಾರ್ಯಕ್ರಮಗಳನ್ನು ಕೊಡುತ್ತಿದ್ದರು. ನಂತರ ತುಂಬಾ ದಿನ ಧಾರವಾಡದಲ್ಲಿ ಇರಲಿಲ್ಲ. ವಾಪಸ್ ಹೊನ್ನಾವರಕ್ಕೆ ಬಂದರು. ಹೊನ್ನಾವರದಲ್ಲಿ ಶ್ರೀ ರಾಜೀವ ಪುರಂದರೆಯವರ ಹತ್ತಿರ ಸಂಗೀತ ಕಲಿಯಲು ಪ್ರಾರಂಭಿಸಿದರು. ಇವರಿಗೆ ತಂದೆ ತಾಯಿಯವರ ಪ್ರೋತ್ಸಾಹ ತುಂಬಾ ಇತ್ತು. ಇವರು ಸಂಗೀತ ಕಲಿಯುವಾಗ ಮತ್ತು ಮಹಿಳೆಯಾಗಿ ಅನೇಕ ಸಮಸ್ಯೆ ಎದುರಿಸಿದರು.

ಭಾರತಿ ಮೆಸ್ತಾ ತಮ್ಮ **೩೮**ನೆ ವಯಸ್ಸಿಗೆ ಹೊನ್ನಾರವರದ ಎಸ್.ಡಿ.ಎಮ್. ಮಹಾವಿದ್ಯಾಲಯದಲ್ಲಿ ಸಂಗೀತ ಉಪನ್ಯಾಸಕಿಯಾಗಿ ಸೇರಿಕೊಂಡರು. ಇವರು ಅನೇಕ ಗೀತ ರೂಪಕಗಳನ್ನು ರಚಿಸಿದರು. ನಂತರ ಅಲ್ಲಿಯ ಸಂಗೀತ ವಿಭಾಗದ ಮುಖ್ಯಸ್ಥೆಯಾದರು. ಇವರು ಬನಾರಸ ವಿಶ್ವವಿದ್ಯಾಲಯದಲ್ಲಿ ನಡೆದ ಪುನಃಶ್ಚೇತನ (----------) ಕಾರ್ಯಾಗಾರಕ್ಕೆ ಹೋದಾಗ *"ವೇದಿಕ್ ಸಂಗೀತ್"*ದ ಬಗ್ಗೆ ಸೆಮಿನಾರ ಮಾಡಲಾಯಿತು.

ಇವರು ಕುಮಟಾ, ಕುಜಳ್ಳಿ, ಪಿಂದೂರಿನಲ್ಲಿ ಸಂಗೀತ ಕಾರ್ಯಕ್ರಮಗಳನ್ನು ಕೊಟ್ಟಿರುತ್ತಾರೆ. ಮತ್ತು ತುಂಬಾ ಕಡೆ ಸಂಗೀತ ನಿರ್ಣಾಯಕರಾಗಿ, ಅತಿಥಿಗಳಾಗಿ ಹೋಗಿರುತ್ತಾರೆ. ಇವರಿಗೆ ಅನೇಕ ಸಂಘ ಸಂಸ್ಥೆಗಳು ಸನ್ಮಾನಿಸಿವೆ.

ಇಗ ನಿವೃತ್ತಿ ಬದುಕಿನಲ್ಲಿ ಸಂಗೀತ ಪಾಠ ಹೇಳಿತ್ತಿರುತ್ತಾರೆ. ಇವರಲ್ಲಿ ಕಲಿತ ವಿದ್ಯಾರ್ಥಿಗಳು ಕೆಲವರು ಟಿ.ವಿ. ಮತ್ತು ರೇಡಿಯೋ ಆರ್ಟಿಸ್ಟ್ ಆಗಿದ್ದಾರೆ.

# ಶ್ರೀಮತಿ ಜ್ಯೋತಿ ಹೆಗಡೆ

ಜ್ಯೋತಿ ಹೆಗಡೆಯವರು ಗಾಯಕಿ ಅಲ್ಲ. ರುದ್ರವೀಣಾ ಹಾಗೂ ಸೀತಾರ ವಾದಕರು. ಇವರು ಧಾರವಾಡದಲ್ಲಿ **೧೭-೩-೧೯೬೩**ರಲ್ಲಿ ಜನಿಸಿದರು. ಮನೆಯಲ್ಲಿ ಸಂಗೀತ ಕಲಿಯಲು ಪ್ರೋತ್ಸಾಹದಾಯಕ ವಾತಾವರಣವಿತ್ತು. ಹೀಗಾಗಿ ಇವರು ಸಂಗೀತದಲ್ಲಿ ಎಂ.ಎ. ಮುಗಿಸಿ, ಹುಬ್ಬಳ್ಳಿಯ ಸುಪ್ರಸಿದ್ಧ ರುದ್ರವೀಣಾ ಹಾಗೂ ಸೀತಾರ ವಾದಕರು ಆದ ಡಾ. ಬಿಂದು ಮಾಧವ ಪಾಠಕ ಇವರ ಹತ್ತಿರ ಧೃಪದ ಶೈಲಿಯಲ್ಲಿ ವಿಶೇಷ ಪ್ರಾವಿಣ್ಯತೆ ಪಡೆದಿದ್ದಾರೆ. ಇವರು ಉಸ್ತಾದ್ ಬಂದೆ ಅಲಿಖಾನ್ ಅವರ ಗುರುಪಂರಪರೆಗೆ ಸೇರಿದವರು.

ಜ್ಯೋತಿಯವರು ಹುಬ್ಬಳ್ಳಿ, ಧಾರವಾಡ, ಶಿವಮೊಗ್ಗಾ, ಬೆಳಗಾವಿ ಹೀಗೆ ಅನೇಕ ಕಡೆ ಕಾರ್ಯಕ್ರಮಗಳನ್ನು ನೀಡಿದ್ದಾರೆ. **೧೯೮೩**ರಲ್ಲಿ ಬೆಂಗಳೂರಿನ ಕರ್ನಾಟಕ ಸಂಗೀತ ನೃತ್ಯ ಅಕಾಡಮಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಪ್ರಾತ್ಯಕ್ಷಿಕೆ **೧೯೮೪**ರಲ್ಲಿ ಮಂಗಳೂರಿನ ಆರ್ಟ್‌ಸರ್ಕಲ್ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಪ್ರಾತ್ಯಕ್ಷಿಕೆ ನೀಡಿದ್ದು ಹಾಗೂ ಉಸ್ತಾದ್ ಕರಿಂ ಖಾನ್‌ರ ಪುಣ್ಯತಿಥಿಯಲ್ಲಿ ಭಾಗವಹಿಸಿದ್ದಾರೆ. ಮತ್ತು ವಿ.ವಿ. ಯುವಜನೋತ್ಸವದಲ್ಲಿ ಅನೇಕ ಕಾರ್ಯಕ್ರಮಗಳನ್ನು ನೀಡಿದ್ದಾರೆ.

**ಇವರ ಸಾಧನೆ:-** ಕರ್ನಾಟಕ ಸಂಗೀತ ನೃತ್ಯ ಅಕಾಡಮಿ ಶಿಷ್ಯವೇತನ, ಕೇಂದ್ರ ಸರಕಾರದ ಶಿಷ್ಯವೇತನ ಪಡೆದಿರುತ್ತರೆ. **೧೯೮೧**ರಲ್ಲಿ ನಡೆದ ರಾಷ್ಟ್ರ ಮಟ್ಟದ ಅಖಿಲ ಭಾರತ ಆಕಾಶವಾಣಿ ಸಂಗೀತ ಸ್ಪರ್ಧೆಯಲ್ಲಿ ವಿಶೇಷ ಪ್ರಥಮ ಪುರಸ್ಕಾರ ಪಡೆದಿದ್ದಾರೆ. **೧೯೯೫**ರಿಂದಲೂ ಆಕಾಶವಾಣಿ **'ಬಿ ಹೈ'** ಕಲಾವಿದೆಯಾಗಿ ಕಾರ್ಯಕ್ರಮಗಳನ್ನು ನೀಡುತ್ತಿರುವರು.

# ಶ್ರೀಮತಿ ರೇಣುಕಾ ನಾಕೋಡ



ಧಾರವಾಡ ಆಕಾಶವಾಣಿಯ ೬೦ ವರ್ಷದ ಇತಿಹಾಸದಲ್ಲಿ ಸುಗಮ ಸಂಗೀತ ಕ್ಷೇತ್ರದಲ್ಲಿ ೧೯೯೯ರಲ್ಲಿ ಟಾಪ್ ಗ್ರೇಡ್ ದೊರಕಿಸಿಕೊಂಡು ಉತ್ತರ ಕರ್ನಾಟಕಕ್ಕೆ ಕೀರ್ತಿ ತಂದ ಪ್ರಥಮ ಮಹಿಳೆ ವಿದೂಷಿ ರೇಣುಕಾ ನಾಕೋಡ.

ಶ್ರೀಮತಿ ರೇಣುಕಾ ನಾಕೋಡ ಅವರು ಸಂಗೀತ ತವರೂರಾದ ಧಾರವಾಡದ ಸಂಗೀತಗಾರರ ಮನೆತನದಲ್ಲಿ ಜನಿಸಿ ಬೆಳದವರು. ಆಕಾಶವಾಣಿ ಧಾರವಾಡ ಕೇಂದ್ರದಲ್ಲಿ ಅನೇಕ ವರ್ಷ ವಾಯಲಿನ್ ಕಲಾವಿದರಾಗಿ ಸೇವೆ ಸಲ್ಲಿಸಿದ ದಿ. ಕಬಾಡಿ ಅವರ ಪುತ್ರಿ ರೇಣುಕಾ ನಾಕೋಡ. ತಂದೆಯವರಿಂದಲೇ ಸಂಗೀತ ಆಸಕ್ತಿ ಬೆಳೆಸಿಕೊಂಡು ತಾತನವರು ಪಂ. ವಿಠ್ಠಲಸಾ ಕಬಾಡಿಯವರ ಹತ್ತಿರ ಹಾರ್ಮೋನಿಯಂ ಶಿಕ್ಷಣದ ಜೊತೆಗೆ ಕೆಲವು ಮಜಲುಗಳನ್ನು ತಿಳಿಸಿಕೊಂಡಿದ್ದಾರೆ.

ರೇಣುಕಾರವರು ಸಂಗೀತದಲ್ಲಿ ಇನ್ನೂ ಹೆಚ್ಚಿನದನ್ನು ಸಾಧಿಸಲು ತಮ್ಮ ಪತಿ ಪಂ. ರಘುನಾಥ ನಾಕೋಡ ಇವರು ಕಾರಣ ಎಂದರೆ ತಪ್ಪಾಗಲಾರದು. ಇವರಿಗೆ ಬೆಂಗವಲಾಗಿ ನಿಂತು ಸಂಗೀತ ತಬಲಾ ಸಾಥ್ ಕೊಟ್ಟು ಪ್ರೋತ್ಸಾಹಿಸಿದರು. ಇದರ ಜೊತೆಗೆ ಮಾವನವರಾದ ಪಂ. ಅರ್ಜುನಸಾ ನಾಕೋಡ ಇವರಲ್ಲಿ ೧೫ವರ್ಷ ಸಂಗೀತ ಶಿಕ್ಷಣ ಪಡೆದಿದ್ದಾರೆ. ಆಕಾಶವಾಣಿ ಧಾರವಾಡದ ಕಲಾವಿದರಾದ ಶ್ರೀಪಾದ ಹೆಗಡೆ ಇವರಲ್ಲೂ ಸಂಗೀತ ಅಭ್ಯಾಸ ಮುಂದುವರಿಸಿದರು.

ಶ್ರೀಮತಿ ರೇಣುಕಾ ಅವರು ೧೯೯೧ರಿಂದಲೂ ಧಾರವಾಡ ಆಕಾಶವಾಣಿಯಲ್ಲಿ ಸುಗಮಸಂಗೀತ ಹಾಗೂ ಶಾಸ್ತ್ರೀಯ ಗಾಯನ ಕಲಾವಿದರಾಗಿದ್ದಾರೆ.

ಇವರು ಅನೇಕ ಪ್ರಸಿದ್ಧ ವೇದಿಕೆಗಳಲ್ಲಿ ತಮ್ಮ ಸಂಗೀತ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದಾರೆ. ದೂರದರ್ಶನದಲ್ಲೂ ಸಂಗೀತ ಕಾರ್ಯಕ್ರಮ ನೀಡಿದ್ದಾರೆ.

**ಇವರಿಗೆ ಸಂದಾಯವಾದ ಪ್ರಶಸ್ತಿಗಳು:– "ಸ್ವರ ದಾಮಿನಿ"** ಪ್ರಶಸ್ತಿ ೧೯೯೮ರಲ್ಲಿ ಪುಟ್ಟರಾಜ ಗುರುವಂದನಾ ಸಮಿತಿ ಗದಗ್. ಗದುಗಿನ ವೀರಶೈವ ಪುಣ್ಯಾಶ್ರಮದಿಂದ ೨೦೦೩ರಲ್ಲಿ **"ಗಾಯನ ಕುಸುಮ",** ಗಾನ ಗಂಧರ್ವ ಕಲಾ ಟ್ರಸ್ಟ್‌ನಿಂದ **"ಗಾನಶ್ರೀ"** ಪ್ರಶಸ್ತಿ, ನಾದರಂಗ ಹೊನ್ನಾವರದಲ್ಲಿ ಸಂಗೀತ ಕಾರ್ಯಕ್ರಮ, ಹಂಪಿ, ಪುರಂಧರ ಉತ್ಸವ, ಕಿತ್ತೂರ ಉತ್ಸವ, ಸಂಗೀತ ಸಮ್ಮೇಳನ ವಾರಣಾಸಿ, ಪುಣ್ಯಶ್ರಮ ಗದಗನಲ್ಲಿ ಹೀಗೆ ಅನೇಕ ಕಡೆಗಳಲ್ಲಿ ಇವರು ಸಂಗೀತ ಕಾರ್ಯಕ್ರಮ ನೀಡಿದ್ದಾರೆ.

ಇದಲ್ಲದೆ ಆಕಾಶವಾಣಿ ಬೆಂಗಳೂರು, ಗುಲ್ಬರ್ಗಾ ಆಮಂತ್ರಿತ ಶ್ರೋತೃಗಳೆದುರು ಕಾರ್ಯಕ್ರಮ ಕೊಟ್ಟಿದ್ದಾರೆ. ಚಂದನ ಟಿ.ವಿ.ನಲ್ಲೂ ಭಕ್ತಿ ಮತ್ತು ಭಾವಗೀತೆ ಪ್ರಸಾರವಾಗಿವೆ. ಮಹಾರಾಷ್ಟ್ರದ ನಾಸಿಕನಲ್ಲೂ ಸಂಗೀತ ಕಾರ್ಯಕ್ರಮ ನೀಡಿದ್ದಾರೆ.

ಇವರು ತಮ್ಮ ಅನೇಕ ಭಕ್ತಿ ಗೀತೆಗಳ ಸಿ.ಡಿ.ಗಳನ್ನು ಹೊರತಂದಿದ್ದಾರೆ.

# ಗಾಯಕಿ ಸೀಮಾ ರಾಯ್ಕರ್



ಸೀಮಾರವರು ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಿಂದ ಬಿ. ಮ್ಯೂಜಿಕ್ ಪ್ರಥಮ ಶ್ರೇಣಿಯಲ್ಲಿ ಪಾಸಾದವರು.

ಇವರು ವಿದೂಶಿ ಡಾ॥ ಗಂಗೂಬಯಿ ಹಾನ್‌ಗಲ್ ಇವರ ಬಳಿ ಸಂಗೀತ ಕಲಿತರು. ಮತ್ತು ಪಂ. ಚಂದ್ರಶೇಖರ ಪುರಾಣಿಕಮಠ, ಶ್ರೀ ಎಸ್.ಕೃಷ್ಣಮೂರ್ತಿ ಇವರಲ್ಲೂ ಸಂಗೀತ ಕಲಿತರು.

ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಗಾಯನದಲ್ಲಿ ಸೀನಿಯರ್ ಗ್ರೇಡ್ ಪರೀಕ್ಷೆಯಲ್ಲಿ ರಾಜ್ಯಕ್ಕೆ ಎರಡನೇಯ ರ್‍ಯಾಂಕ್ ಪಡೆದವರು.

ಬೆಂಗಳೂರು ಆಕಾಶವಾಣಿಯಲ್ಲಿ ಲಘು ಸಂಗೀತ ವಿಭಾಗದಲ್ಲಿ **"ಎ"** ಶ್ರೇಣಿಯ ಕಲಾವಿದೆ.

ಅಖಿಲ ಭಾರತೀಯ ಗಂಧರ್ವ ಮಹಾಮಂಡಳ ಮುಂಬೈ ಪರೀಕ್ಷೆಗಳಲ್ಲಿ ಪರೀಕ್ಷಕರಾಗಿ ಕಾರ್ಯ ನಿರ್ವಹಿಸಿದ್ದಾರೆ.

**ಇವರು ನೀಡಿದ ಕಾರ್ಯಕ್ರಮಗಳು:-**

ಲಂಡನ್, ಗ್ರೀನ್‌ವಿಲ್ಲೂ, ಕನೆಕ್ಟಕೆಟ್, ನ್ಯೂಯಾರ್ಕ್, ನ್ಯೂಜರ್ಸಿ, ಕಾರವಾರ, ಕುಂದಗೋಳ, ಹುಬ್ಬಳ್ಳಿ, ಬೆಳಗಾವಿ, ಬೈಲ್‌ಹೊಂಗಲ್ ಮುಂತಾದವುಗಳು.

ಇವರು ಗಾಯನಕ್ಕೆ ಅನೇಕ ಮಾಧ್ಯಮಗಳು ಶ್ಲಾಘಿಸಿದ್ದಾರೆ. **೨೦೦೫**ರಲ್ಲಿ ಶ್ರೀ ಧರ್ಮಸ್ಥಳದಲ್ಲಿ ನಡೆದ ದಸರಾ ಹಬ್ಬ ಪ್ರಯುಕ್ತ ವಿಶೇಷ ಕಾರ್ಯಕ್ರಮ ನೀಡಿದರು. ಮೈಸೂರನಲ್ಲಿ ದಸರಾ ಹಬ್ಬದಲ್ಲಿ ಲಘು ಸಂಗೀತ ಕಾರ್ಯಕ್ರಮ ನೀಡಿದರು. ಜನಪ್ರೀಯ ಟಿ.ವಿ. ವಾಹಿನಿಗಳಾದ ಉದಯ, ಚಂದನ, ಕಸ್ತೂರಿ, ಜಿ ಕನ್ನಡ ಗಳಲ್ಲಿ

ಲಘು ಸಂಗೀತ ಕಾರ್ಯಕ್ರಮ ನೀಡಿದ್ದಾರೆ. ಅನೇಕ ಮಠಗಳಲ್ಲಿ ವಚನಗಳನ್ನು ಹಾಡಿ ಮೆಚ್ಚುಗೆ ಪಡೆದಿದ್ದಾರೆ. ಕನ್ನಡ, ಹಿಂದಿ, ಮರಾಠಿ ಮತ್ತು ಕೊಂಕಣಿ ಹೀಗೆ ಬಹು ಭಾಷಾ ಗಾಯನ ಪ್ರದರ್ಶನವನ್ನು ಕರ್ನಾಟಕ, ಗೋವಾ, ಮಹಾರಾಷ್ಟ್ರ, ಕೇರಳ, ದೆಹಲಿ, ಪಂಜಾಬಿ ಮುಂತಾದವುಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ.

ಶಿರಡಿಯಲ್ಲಿ ಭಕ್ತಿ ಗೀತೆಗಳನ್ನು, ಮಂತ್ರಾಲಯದಲ್ಲಿ, ಅನೇಕ ದೇವಸ್ಥಾನಗಳಲ್ಲಿ ಭಕ್ತಿ ಗೀತೆಗಳನ್ನು ಸಾದರಪಡಿಸಿದ್ದಾರೆ. ಇವರಿಗೆ ಕರ್ನಾಟಕ ಭೂಷಣ ಪ್ರಶಸ್ತಿ ಮತ್ತು ವಿಶ್ವೇಶ್ವರಯ್ಯಾ ಪ್ರಶಸ್ತಿ ಬಂದಿರುತ್ತದೆ.

ಪ್ರಸಿದ್ಧ ಕನ್ನಡ ಹಾಡುಗಾರರಾದ ಮತ್ತು ಸಂಗೀತ ಸಂಯೋಜಕರಾದ ಶ್ರೀಮತಿ ಡಾ॥ ಶಿವಮೊಗ್ಗ ಸುಬ್ಬಣ್ಣ, ಪಿ.ಮನೋಹರ ರಮೇಶ ಚಂದ್ರಾ, ವಾಯ್.ಕೆ. ಮುದ್ದು ಕೃಷ್ಣಾ ಅನೇಕರ ಜೊತೆ ಕರ್ನಾಟಕದಲ್ಲಿ ನಡೆದ ಸಂಸ್ಕೃತಿಕ ಸಂಗೀತ ಮೇಳಗಳಲ್ಲಿ ಭಾಗವಹಿಸಿದ್ದಾರೆ.

# ಶ್ರೀಮತಿ ಮಂಗಲಾ ಮನ್ನಾರಿ

ಮಂಗಲಾರವರು ಹಾವೇರಿಯ ಶ್ರೀ ಧೀರೇಂದ್ರಾಚಾರ ಮತ್ತು ಸೌ. ಉಷಾಬಾಯಿ ಇವರ ಮುದ್ದಿನ ಮಗಳಾಗಿ **೮-೭-೧೯೬೨**ರಲ್ಲಿ ಜನಿಸಿದರು.

ಹಾವೇರಿಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮುಗಿಸಿದರು. ಮುಂದೆ ಧಾರವಾಡದಲ್ಲಿ ಸಿದ್ಧರಾಮಪ್ಪಾ ಕೋರಿ ಇವರ ಹತ್ತಿರ ಹಾರ್ಮೋನಿಯಂ ಕಲಿತರು. ನಂತರ ಪಂ. ಶ್ರೀ ಶೇಷಗಿರಿ ದಂಡಾಪುರ ಇವರಲ್ಲಿ ಸಂಗೀತ ತರಬೇತಿ ಪಡೆದುಕೊಂಡರು. ಮುಂದೆ ಬಿ. ಮ್ಯೂಜಿಕ್ ಮತ್ತು ಎಮ್.ಮ್ಯೂಜಿಕ್ ಪದವಿಯಲ್ಲಿ ಶ್ರೀಮತಿ ಶಾರದಾ ಹಾನ್‌ಗಲ್, ಪಂ. ಮತ್ತಿಗಟ್ಟಿ, ಪಂ. ಸಂಗಮೇಶ್ವರ ಗುರವ ಇವರ ಹತ್ತಿರ ಶಾಸ್ತ್ರೀಯ ಸಂಗೀತ ಶಿಕ್ಷಣ ಪಡೆದರು. ಸುಗಮ ಸಂಗೀತದಲ್ಲಿ ವಿಶೇಷ ಶಿಕ್ಷಣ ಪಂ. ವಸಂತ ಕನಕಾಪುರ ಗುರುಗಳಿಂದ ದೊರಕಿತು. ಆಕಾಶವಾಣಿ ಕಲಾವಿದೆಯಾಗಿದ್ದು ಶಾಸ್ತ್ರೀಯ ಸಂಗೀತ ಕಲಿಯುವುದಕ್ಕಾಗಿ ಸಂಗೀತ ಅಕಾಡಮೆಯಿಂದ ೩ ವರ್ಷ ಸ್ಕೋಲರ್‌ಶಿಪ್ ಪಡೆದಿದ್ದಾರೆ. ಇಗ ಕೇಂದ್ರ ಸರಕಾರಿ ಶಾಲೆಯಲ್ಲಿ **೨೫** ವರ್ಷಗಳಿಂದ ಸಂಗೀತ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

# ಶ್ರೀಮತಿದೇವಿ ಪುಣೆ

ಮೂಲತಃ ಮಂಗಳೂರು ಜಿಲ್ಲೆಯವರಾದ ಕು. ಶ್ರೀಮತಿ ದೇವಿ ಅವರದು ಕೀರ್ತನಕಾರರ ಮನೆತನ. **೧೯೮೬**ರಲ್ಲಿ ಜನಿಸಿದ ಶ್ರೀಮತಿದೇವಿ ಅವರಿಗೆ ತಂದೆ ಜಗದೀಶದಾಸ ಹಾಗೂ ತಾಯಿ ಗಿರಿಜಾಬಾಯಿಯವರ ಗಾಯನವೆ ಸ್ಪೂರ್ತಿ. ಎನ್.ಎಸ್.ಭಂಡಾರಿ, ಹಾಗೂ ಪಂ. ಜಿ.ಆರ್. ಭಟ್ ಬಾಳೆಗದ್ದೆ ಅವರಲ್ಲಿ ಪ್ರಾರ್ಥಮಿಕ ಹಂತದ ಸಂಗೀತಾಭ್ಯಾಸ ಸಂಪೂರ್ಣವಾಗಿ ಹಿಂದುಸ್ತಾನಿ ಸಂಗೀತಕ್ಕೆ ತೊಡಗಿಸಿಕೊಳ್ಳುವ ನಿಟ್ಟಿನಲ್ಲಿ ಧಾರವಾಡಕ್ಕೆ ಬಂದರು ಅಲ್ಲಿ ಬಾಲಚಂದ್ರ ನಾಕೋಡ್ ನಂತರ ಪಂ. ಚಂದ್ರಶೇಖರ ಪುರಾಣಿಕಮಠ ಅವರಲ್ಲಿ ೫ ವರ್ಷಗಳವರೆಗೆ ಗ್ವಾಲಿಯರ್ ಘರಣಾ ಗಾಯಕಿಯನ್ನು ಕಲಿತರು.

ಕರ್ನಾಟಕ ಸರ್ಕಾರ ನಡೆಸುವ ಸಂಗೀತ ವಿದ್ವತ್. ಗಂಧರ್ವ ಮಹಾವಿದ್ಯಾಲಯ ನಡೆಸುವ ಸಂಗೀತ ವಿಶಾರದಾ ಹಾಗೂ ಅಲಂಕಾರ ಪದವಿ ಪಡೆದಿರುವ ಶ್ರೀಮತಿದೇವಿ ಪ್ರಸ್ತುತವಾಗಿ ಪುಣೆಯ ಎಸ್.ಎನ್.ಡಿ.ಟಿ. ವಿಶ್ವವಿದ್ಯಾಲಯದಿಂದ ಸಂಗೀತ ಸ್ನಾತಕೋತ್ತರ ಪದವಿ ಪಡೆದಿದ್ದಾರೆ.

ಗಮಕ ಕಲಾ ಪರಿಷತ್ ನಡೆಸುವ ಗಮಕ ಕಾಜನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಶ್ರೀಮತಿದೇವಿ ಸಂಗೀತ ನೃತ್ಯ ಅಕ್ಯಾಡಮಿಯಿಂದ ಶಿಷ್ಯವೇತನ ಪಡೆದಿದ್ದು ರಾಜ್ಯ ಮಟ್ಟದ ಹಾಗೂ ವಿಶ್ವವಿದ್ಯಾಲಯ ಮಟ್ಟದ ಸಂಗೀತ ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ. ಆಕಾಶವಾಣಿಯ ಲಘುಸಂಗೀತದ **'ಬಿ'** ಗ್ರೇಡ್ ಕಲಾವಿದೆಯಾಗಿರುವ ಶ್ರೀಮತಿದೇವಿ **ತಾಮ್ಹಣಕರ್ ಪುರಸ್ಕಾರ** ಹಾಗೂ **ಯುವ ಪ್ರತಿಭಾ** ಪ್ರಶಸ್ತಿಗಳಿಗೆ ಬಾಜನರಾಗಿದ್ದರೆ.

ಪ್ರಸ್ತುತವಾಗಿ ಜೈಪುರ ಅತ್ರೋಲಿ ಘರಾಣೆಯ ವಿದೂಷಿ ಪದ್ಮಾ ತಳಮಳಕರ್(ಪುಣೆ) ಅವರಲ್ಲಿ ಉನ್ನತ ವ್ಯಾಸಂಗ ಮಾಡುತ್ತಿರುವ ಶ್ರೀಮತಿದೇವಿ ಮಹಾರಾಷ್ಟ್ರದ ಕನಕವಳ್ಳಿ, ನಾಗಪುರ, ಧಾರವಾಡ, ಹುಬ್ಬಳ್ಳಿ, ಕುಂದಗೋಳ್, ಹೊನ್ನಾವರ, ಮಣಿಪಾಲ ಮುಂತಾದ ಕಡೆಗಳಲ್ಲಿ ತಮ್ಮ ಸಂಗೀತ ಸುಧೆಯನ್ನು ಹರಿಸಿದ್ದಾರೆ.

# ಡಾ॥ ಮುಕ್ತಾ ಮುಜಂದಾರ್

ಮುಕ್ತಾರವರು ೧೯೫೬ರಲ್ಲಿ ಜನಿಸಿದವರು. ಇವರ ತಂದೆ ಶಿವರಾವ್ ನಾಡಗೇರ ಇವರ ಪ್ರೋತ್ಸಾಹದಿಂದ ಸಂಗೀತದತ್ತ ಒಲವು ಹರಿಸಿದರು. ತಂದೆಯಿಂದ ಸಾಕಷ್ಟು ಪ್ರೋತ್ಸಾಹ ದೊರಕಿತು.

ಪ್ರಾರಂಭಿಕ ಸಂಗೀತ ಶಿಕ್ಷಣವನ್ನು ಪಂ. ಪಂಚಾಕ್ಷರಿ ಮತ್ತಿಗಟ್ಟಿಯರಿಂದ ಪಡೆದರು. ನಂತರ ಮುಂಬೈಯ ಶ್ರೀಮತಿ ಪದ್ಮಾವತಿ ಸಾಲಿಗ್ರಾಮ ಅವರಲ್ಲಿ ಶಾಸ್ತ್ರೀಯ ಸಂಗೀತ ಹಾಗೂ ಠುಮ್ರಿ ಗಾಯನದಲ್ಲಿ ತಾಲೀಮು.

ಸಂಗೀತದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ವೃತ್ತಿಯಿಂದ ಆಕಾಶವಾಣಿ ಧಾರವಾಡ ಕೇಂದ್ರದಲ್ಲಿ ನಿಲಯದ ಕಲಾವಿದೆಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಬೆಂಗಳೂರು, ಶಿವಮೊಗ್ಗಾ, ರಾಯಚೂರ್, ಬೆಳಗಾವಿ ಹೀಗೆ ರಾಜ್ಯದ ಹಲವೆಡೆ ಸಂಗೀತ ಕಾರ್ಯಕ್ರಮ ನೀಡಿದ್ದಾರೆ. ಹೊರ ರಾಜ್ಯಗಳಲ್ಲೂ ಸಂಗೀತ ಕಾರ್ಯಕ್ರಮ ನೀಡಿದ್ದಾರೆ.

ಬೇಗಂ ಅಖ್ತರ್ ಹಾಗೂ ಅವರ ಸಂಗೀತ ಸಾಧನೆ ವಿಷಯವಾಗಿ ಮಹಾಪ್ರಭಂಧ ಮಂಡಿಸಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆದಿರುತ್ತಾರೆ.

ರಾಣಿ ಚೆನ್ನಾಮ್ಮ ವಿ.ವಿ. ದಕ್ಷಿಣ ವ್ಯಾಪ್ತಿಯಲ್ಲಿ ಬರುವ ಕಿತ್ತೂರ ಕಾಲೇಜನಲ್ಲಿ ಸಂಗೀತ ವಿಭಾಗದಿಂದ ಆಯೋಜಿಸಲಾಗಿದ್ದ ಮೂರು ದಿನಗಳ ಸೆಮಿನಾರನಲ್ಲಿ ಮುಖ್ಯ ಅತಿಥಿಯಾಗಿ ಆಗಮಿಸಿ ಠುಮ್ರಿ ಗಾಯನದ ಬಗ್ಗೆ ಹೇಳಿ ಠುಮ್ರಿ ಗಾಯನವನ್ನು ಪ್ರಸ್ತುತ ಪಡಿಸಿದ್ದರು.

# ಶ್ರೀಮತಿ ಶುಭಾಮತಿ ಭಟ್

ಶುಭಾಮತಿಯವರು **೨೮-೧೧-೧೯೫೦**ರಲ್ಲಿ ಬಸರೂರಿನಲ್ಲಿ ಜನಿಸಿದರು. ಇವರ ಶಿಕ್ಷಣ ಬಿ.ಎ.ಪದವಿ. ಇವರು ಡಿ.ಎಸ್. ಗರೂಡರಲ್ಲಿ ಆಗ್ರಾ ಘರಾಣೆಯ ಸಂಗೀತ ಶಿಕ್ಷಣ ಪಡೆದರು.

ಇವರ ಮೊದಲ ಸಂಗೀತ ಕಚೆರಿ **೧೯೭೦**ರಲ್ಲಿ ಸ್ವರಸಿಂಗಾರ ಆಶ್ರಮದಲ್ಲಿ ನಡೆಯಿತು. ನಂತರ ಬೆಂಗಳೂರಿನ ಸಂಗೀತ ಕಲಾಭವನ, ಕಲಾಶ್ರೀ, ಹಿಂದೂಸ್ತಾನಿ ಸಂಗೀತ ಕಲಾಕಾರ ಮಂಡಳಿ, ಭಾರತೀಯ ವಿಶ್ವಾಸ ಸಂಸ್ಥೆ ಬ್ಯಾಂಕರ್ಸ ಕಲ್ಚರಲ್ ಅಕಾಡಮಿ, ಪಂ. ಜವಹರಲಾಲ್ ಕಲ್ಚರಲ್ ಅಕ್ಯಾಡಮಿ ಮುಂತಾದ ಸಂಸ್ಥೆಗಳ ಆಶ್ರಮದಲ್ಲಿ ಕಚೇರಿ ನೀಡಿದ್ದಾರೆ. ಇವರು ಹವ್ಯಾಸಿ ಕಲಾವಿದೆ.

# ಡಾ॥ ಮೀರಾ ಶಿವಶಂಕರ ಗುಂಡಿ

ಮೀರಾ ಗುಂಡಿಯವರು ಬಸವನ ದುರ್ಗದಲ್ಲಿ ೧೯೫೧ರಲ್ಲಿ ಜನಿಸಿದರು. ಇವರ ತಂದೆ ವೀರನಗೌಡರು ಸಂಗೀತ ಕಲಾವಿದರು.

ಮಿರಾರವರು ಬಿ.ಕೊಮ್ ಪದವಿ ಮುಗಿಸಿದ ನಂತರ ಸಂಗೀತದಲ್ಲಿ ಹೆಚ್ಚಿನ ಆಸಕ್ತಿ ಹೊಂದಿ ಧಾರವಾಡದ ಕರ್ನಾಟಕ ಸಂಗೀತ ಮಹಾವಿದ್ಯಾಲಯದಲ್ಲಿ ಬಿ. ಮ್ಯೂಜಿಕ್ ಪ್ರಥಮ ರ್‍ಯಾಂಕನೊಂದಿಗೆ ಪದವಿ ಪಡೆದವರು. ನಂತರ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಎಂ. ಮ್ಯೂಜಿಕ್ ಪದವಿ ಪಡೆದು ೧೯೮೪ ರಿಂದ ಕರ್ನಾಟಕ ವಿಶ್ವವಿದ್ಯಾಲಯದ ಸಂಗೀತ ಉಪನ್ಯಾಸಕಿಯಾಗಿ ಸೇವೆ ಸಲ್ಲಿಸಿದರು.

ಬಾಲ್ಯದಿಂದಲೇ ಸಂಗೀತದತ್ತ ಒಲವಿದ್ದ ಡಾ॥ ಮೀರಾ ಗುಂಡಿಯವರು ಮೊದಲು ಸಂಗೀತ ಕಲಿತದ್ದು ತಂದೆಯವರಿಂದ ಇದರ ಜೊತೆ ಕರ್ನಾಟಕ ಸಂಗೀತವನ್ನು ಶ್ರೀ ಟಿ.ವಿ. ರಾಮ ಪ್ರಸಾದರವರಲ್ಲಿ ಕಲಿತರು. ನಂತರ ಹೊಸಪೇಟೆಯ ಕೊಟ್ಟುರ ಸ್ವಾಮಿ ಮಠದ ಶ್ರೀ ಬದರಿ ಕುಮಾರೇಶ್ವರ ಸಂಗೀತ ಪಾಠಶಾಲೆಯಲ್ಲಿ ಶ್ರೀ ಬಸವರಾಜ ಅಮರಗೋಳರಿಂದ ಹಿಂದೂಸ್ತಾನಿ ಸಂಗೀತದಲ್ಲಿ ಮಾರ್ಗದರ್ಶನ ಪಡೆದರು. ಸಂಗೀತದ ಸೂಕ್ಷ್ಮಗಳನ್ನು ಕರಗತ ಮಾಡಿಕೊಳ್ಳಲು ಧಾರವಾಡದ ಪಂ. ಪಂಚಾಕ್ಷರಿ ಸ್ವಾಮಿ ಮತ್ತಿಗಟ್ಟಿಯವರಲ್ಲಿ ೧೫ ವರ್ಷಗಳ ಕಾಲ ಜೈಪುರ ಘರಾಣೆಯ ಶೈಲಿಯ ಸಂಗೀತ ತಾಲೀಮು ೧೯೯೮ರಿಂದ ಪ್ರೊ. ರಾಜಶೇಖರ ಮನ್ಸೂರವರಲ್ಲಿ ಸಂಗೀತ ಅಭ್ಯಾಸ ಮುಂದುವರೆಸಿದರು.

**"ಹಿಂದುಸ್ತಾನಿ ಸಂಗೀತ ಘರಾಣೆಗಳ ಒಂದು ಅಧ್ಯಯನ"** ಎಂಬ ವಿಷಯವಾಗಿ ಮಹಾ ಪ್ರಬಂಧ ರಚಿಸಿ ಪಿ.ಎಚ್.ಡಿ. ಪದವಿ ಪಡೆದಿದ್ದಾರೆ.

# ಕುಮಾರಿ ರೇಷ್ಮಾ ಭಟ್ ಕುಮಾರಿ ರಮ್ಯ ಭಟ್. ಕುಮಟಾ

**೧೯೮೮**ರಲ್ಲಿ ಜನಿಸಿದ ಕುಮಾರಿ ರೇಷ್ಮಾ ಭಟ್, ಅವರದು ಸಂಗೀತ ಕಲೋಪಾಸಕರ ಮನೆತನ. ತಂದೆ ರಾಮಚಂದ್ರ ಭಟ್. ತಾಯಿ ಆಶಾ ಭಟ್, ಹೊನ್ನವರದ ಡಾ. ಅಶೋಕ ಹುಗ್ಗಣ್ಣವರ ಗರಡಿಯಲ್ಲಿ ಅಭ್ಯಶಿಸುತ್ತಿರುವ ರೇಷ್ಮಾ, ತಮ್ಮ **೧೪**ನೆ ವಯಸ್ಸಿನಲ್ಲಿಯೇ ಕರ್ನಾಟಕ ಸಂಗೀತ ನೃತ್ಯ ಅಕಾಡಮಿಯಿಂದ ಶಿಷ್ಯವೇತನ ಪಡೆದ ಸುಮಧುರ ಕಂಠದ ಗಾಯಕಿ. ಸ್ವರ ಹಾಗೂ ಲಯಗಳ ಮೇಲೆ ಅಧ್ಬುತ ಹಿಡಿತ ಸಾಧಿಸಿರುವ ರೇಷ್ಮಾ ಆಕಾಶವಾಣಿ ಆಯೋಜಿಸಿದ ಅಖಿಲ ಭಾರತ ಸಂಗೀತ ಸ್ಪರ್ಧೆಯಲ್ಲಿ ಧಾರವಾಡ ಆಕಾಶವಾಣಿ ಪ್ರತಿನಿಧಿತ್ವವಹಿಸಿ ರಾಷ್ಟ್ರಮಟ್ಟಕ್ಕೆ ಪ್ರಥಮ ಸ್ಥಾನ ಪಡೆದಿದ್ದಾರೆ. ಇಂಜಿನೀಯರ್‌ನಲ್ಲಿ ಸ್ನಾತಕೋತ್ತರ ಪಧವಿಧರರಾಗಿರುವ ರೇಷ್ಮಾ ಸೊರಬದ ಸಂಗೀತ ಸೇವಾ ಸಮಿತಿಯ ಯುವ ಪ್ರತಿಭಾ ಪುರಸ್ಕಾರ, ಗುಲ್ಬರ್ಗಾದ ಮಹಾಂತ ಜ್ಯೋತಿ ಪ್ರತಿಷ್ಠಾನದ ಕಲಾ ಜ್ಯೋತಿ ಪ್ರಶಸ್ತಿ, ಮಂಗಳೂರಿನ ಸಂಗೀತ ಭಾರತಿ ಫಾಂಡೇಶನದ ಗಾನಜ್ಯೋತಿ ಪುರಸ್ಕಾರಗಳಿಗೆ ಪಾತ್ರರಾಗಿದ್ದಾರೆ. ಭಾರತ ಸರ್ಕಾರದ ರಾಷ್ಟ್ರೀಯ ಶಿಷ್ಯ ವೇತನಕ್ಕೆ ಆಯ್ಕೆಯಾಗಿರುವ ರೇಷ್ಮಾ, ಧಾರವಾಡ, ಬೆಂಗಳೂರ, ಮಂಗಳೂರ, ಮಣಿಪಾಲ, ಕುಂದಗೋಳ ನಾಡಿನ ಅನೇಕ ಸಮ್ಮೇಳನಗಳಲ್ಲಿ ತಮ್ಮ ನಾದ ಲಹರಿಯನ್ನು ಹರಿಸಿದ್ದಾರೆ.

ಅಕ್ಕನಿಗಿಂತ ತಾನೇನೂ ಕಡಿಮೆ ಇಲ್ಲ, ಎನ್ನುವಂತೆ ಕುಮಾರಿ ರಮ್ಯಾ ಭಟ್, ರಾಜ್ಯಮಟ್ಟದ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಸ್ಪರ್ಧೆಯಲ್ಲಿ **ಪ್ರಥಮ ಸ್ಥಾನ** ಪಡೆದ ಉದೆಯೋನ್ಮುಖ ಪ್ರತಿಭೆ. **೧೯೯೨**ರಲ್ಲಿ ಜನಿಸಿದ ರಮ್ಯಾ ಹೊನ್ನಾವರದ ಡಾ॥ ಅಶೋಕ ಹುಗ್ಗಣ್ಣವರ ಶಿಷ್ಯ. ಅಕ್ಕನದು ಸುಮಧುರ ಕಂಠದ ಗಾಯನವಾದರೆ, ತಂಗಿ ರಮ್ಯಾಳದ್ದು ಸುರೇಲಿ ಕಂಠದ ನಿರ್ಭೀಡೆ ಗಾಯಕಿ. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಾಳಿ ನಡೆಸುವ ಹಿಂದೂಸ್ತಾನಿ ಸಂಗೀತದಲ್ಲಿ ಜ್ಯೂನಿಯರ್ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಲಾ ಪ್ರತಿಭೋತ್ಸವದಲ್ಲಿ ಕಿಶೋರ ಪ್ರತಿಭೆ ಸ್ಪರ್ಧೆಯಲ್ಲಿ ಜಿಲ್ಲೆಗೆ ಪ್ರಪಥಮ. ಶಿರಸಿಯ ರಾಗಿಣಿ ಸಂಗೀತ, ನಲವಡಿಯ ಶ್ರೀ ಕಂಠಶಾಸ್ತ್ರಿಗಳ ಪುಣ್ಯತಿಥಿ ಸಂಗೀತ ಕಾರ್ಯಕ್ರಮ, ಕುಂದಗೋಳದ ನಾಡಗೇರ ವಾಡೆ. ರಾಜ್ಯದ ನಾನಾ ಭಾಗಗಳಲ್ಲಿ ತಮ್ಮ ಗಾನಸಿರಿಯನ್ನು ಹರಿಸಿದ್ದಾರೆ. ಪ್ರಸ್ತುತವಾಗಿ ಬಿ.ಇ.ವ್ಯಾಸಂಗ ಮಾಡುತ್ತಿರುವ ರಮ್ಯಾ ಕಳೆದ **೬** ವರ್ಷಗಳಿಂದ ಹೊನ್ನಾವರದ ಡಾ॥ ಹುಗ್ಗಣ್ಣವರಲ್ಲಿ ಸಂಗೀತಾಭ್ಯಾಸ ಮಾಡುತ್ತಿದ್ದಾರೆ.

# ಶ್ರೀಮತಿ ನಂದಾ ಪಾಟೀಲ



ಹಿಂದೂಸ್ತಾನಿ ಸಂಗೀತ ಕ್ಷೇತ್ರದಲ್ಲಿ ಧಾರವಾಡ ಜಿಲ್ಲೆ ಮಾಡಿರುವ ಸಾಧನೆ ಅಪಾರ. ಅದು ದೇಶಕ್ಕೆ ನೀಡಿರುವ ಖ್ಯಾತ ಸಂಗೀತಗಾರರ ಪಟ್ಟಿ ಬಹು ದೊಡ್ಡದು, ಪಂ. ಮಲ್ಲಿಕಾರ್ಜುನ ಮನ್ಸೂರ, ಪಂ. ರಾಜಗುರು, ಪಂ. ಭೀಮಸೇನ ಜೋಶಿ, ಪಂ. ಕುಮಾರ ಗಂಧರ್ವ ಶ್ರೀಮತಿ ಗಂಗೂಬಾಯಿ ಹಾನಗಲ್, ಶ್ರೀಮತಿ ಶಾರದಾ ಬಿ. ಹಾನ್‌ಗಲ್ ಮುಂತಾದವರು ಸಂಗೀತ ಕ್ಷೇತ್ರದಲ್ಲಿ ಭಾರತವನ್ನು ಪ್ರತಿನಿಧಿಸಿದ್ದಾರೆ. ಅಂತಹ ಸ್ಥಳದಲ್ಲಿ ಹುಟ್ಟಿರುವ ಗಾಯಕಿ ಡಾ. ನಂದಾ ಪಾಟೀಲ.

ನಂದಾ ಪಾಟೀಲರವರು ಧಾರವಾಡದ ಸಾಂಸ್ಕೃತಿಕ ಸೌರಭದಲ್ಲಿ ಬೆಳೆದು ಸಂಗೀತವನ್ನು ಜೀವನದ ಉಸಿರಾಗಿಸಿಕೊಂಡು, ಸಂಗೀತದ ಮೂಲಕ ಸಮಾಜ ಸೇವೆಯನ್ನು ಮಾಡಿರುವ ಮೇಧಾವಿಗಳು. ನಂದಾ ಸಂಗೀತದ ವಿದ್ಯಾರ್ಥಿಯಾಗಿದ್ದಾಗಲೇ ವಿದ್ಯಾರ್ಥಿಗಳಿಗೆ ಕೊಡಮಾಡುವ ರಾಜ್ಯ ಪ್ರಶಸ್ತಿಯನ್ನು ಪಡೆದಿದ್ದಾರೆ. ಅವರು ಕರ್ನಾಟಕ ರಾಜ್ಯ ಪ್ರೌಢ ಶಿಕ್ಷಣ ಮಂಡಳಿ ನಡೆಸುವ ಸಂಗೀತ ಕಂಠಗಾನ ಸಿನಿಯರ್ ಹಾಗೂ ಪ್ರೋಫೆಶಿಯನ್ಸ್ ಪರೀಕ್ಷೆಗಳಲ್ಲಿ ರಾಜ್ಯಕ್ಕೆ ಪ್ರಥಮರು. ಅವರು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸಂಗೀತದಲ್ಲಿ ಎಂ.ಎ., ಪಿ.ಎಚ್.ಡಿ. ಪದವಿಗಳನ್ನು ಪ್ರಥಮ ಸ್ಥಾನ ಮತ್ತು ಸುವರ್ಣ ಪದಕಗಳೊಂದಿಗೆ ಪಡೆದು ವಿಶ್ವವಿದ್ಯಾಲಯದ ಸಂಗೀತ ಮತ್ತು ಲಲಿತಕಲಾ (ಕೆ.ಸಿ.ಡಿ.) ಮಹಾವಿದ್ಯಾಲಯದಲ್ಲಿ ಕಳೆದ **೨೫** ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಹಿಂದೂಸ್ತಾನಿ ಸಂಗೀತದ ಕಂಠಗಾನ ಪ್ರಾಧ್ಯಾಪಕರು. ಅವರು ಜಾನಪದ ಸಂಗೀತದಲ್ಲಿ ಡಾಕ್ಟರೇಟ್ ಪದವಿ ಗಳಿಸಿ ಸಂಶೋಧನಾ ಮಾರ್ಗದರ್ಶಕರೂ ಆಗಿದ್ದಾರೆ. ಶ್ರೀಮತಿ ನಂದಾ ಪಾಟೀಲರು ಸಾಕಷ್ಟು ಸಂಗೀತ ಲೇಖನಗಳನ್ನು ಪ್ರಕಟಿಸಿದ್ದಾರಲ್ಲದೇ, **"ಜಾನಪದ ಗಾಯಕ ಬಾಳಪ್ಪಾ ಹುಕ್ಕೇರಿ"** ಹಾಗೂ **"ಪಂ. ಬಸವರಾಜ ರಾಜಗುರು"** ಎಂಬಂಥಹ ವಿದ್ವತ್ ಪುಸ್ತಕಗಳನ್ನು

ರಚಿಸಿದ್ದಾರೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯವು ಈ ಪುಸ್ತಕಗಳನ್ನು ಪ್ರಕಟಿಸಿದೆ. ನಂದಾ ಪಾಟೀಲರು **೨೦೦೧–೨೦೦೪**ರ ಅವಧಿಯಲ್ಲಿ ಕರ್ನಾಟಕ ಸಂಗೀತ ನೃತ್ಯ ಅಕಾಡಮಿಯ ಸದಸ್ಯರಾಗಿದ್ದರು. ಈಗ ಅವರು ಸಾಕಷ್ಟು ಸಾಮಾಜಿಕ ಸೇವೆಯಲ್ಲಿ ತೊಡಗಿದ್ದು, ಕಲಾಭಿಮಾನಿ ತಂದೆ ದಿ. ಮಲ್ಲಿಕರ್ಜೂನ ಗೌಡ ಪಾಟೀಲರ ಹೆಸರಲ್ಲಿ ದತ್ತಿ ನಿಧಿಯನ್ನು ಸ್ಥಾಪಿಸಿದ್ದಾರೆ.

ಡಾ. ನಂದಾ ಪಾಟೀಲರ ಸಂಗೀತ ಸೇವೆಗಾಗಿ **"ಗಾನಕೋಗಿಲೆ" "ಹಳಕಟ್ಟಿ ಶ್ರೀ"** ಹಗೂ **"ಸಂಸ್ಕೃತಿ ಸುಗಂಧ"** ಪ್ರಶಸ್ತಿಗಳು ಸಂಧಿವೆ. ನಂದಾ ಪಾಟೀಲರು ಪ್ರತಿಭಾವಂತ ಶಾಸ್ತ್ರೀಯ ಸಂಗೀತಗಾರರು. ಹಿರಿಯ ಗಾಯಕರಾದ ಶ್ರೀ ಸುಧೀಂದ್ರ ದಂಡಾಪುರ, ಶ್ರೀಮತಿ ಶಾರದಾ ಹಾನಗಲ್, ಫ್ರೋ. ರಾಜಶೇಖರ ಮನ್ಸೂರ, ಶ್ರೀ ನಾರಾಯಣ ಮುಜುಂದಾರರ ಬಳಿಯಲ್ಲಿ ಹೆಚ್ಚಿನ ಸಂಗೀತ ಶಿಕ್ಷಣ ಪಡೆದಿದ್ದಾರೆ. ಅವರು ಟಿ.ವಿ., ಆಕಾಶವಾಣಿಯ ಕಲಾವಿದೆಯಾಗಿದ್ದಾರೆ.

ನಂದಾರವರು ಚಿಕ್ಕವಯಸ್ಸಿನಿಂದಲೇ ಇಲ್ಲಿಯವರೆಗೆ **೧೦೦೦** ಸಂಗೀತ ಕಛೇರಿ ನೀಡಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಡೆಸುವ ಮೈಸೂರು ದಸರಾ **"ಹಂಪಿ ಉತ್ಸವ", "ಬನವಾಸಿ ಉತ್ಸವ", "ವಚನ ಸಂಗೀತೋತ್ಸವ"** ಮುಂತಾದ ಕಡೆಗಳಲ್ಲಿ ಸಂಗೀತ ಕಾರ್ಯಕ್ರಮ ನೀಡಿದ್ದಾರೆ. ಅವರು **೧೯೯೯**ರಲ್ಲಿ ಹೃದರಾಬಾದಿನ------ ವಿಶ್ವವಿದ್ಯಾಲಯದ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ನೀಡಿದ ಕಛೇರಿ ಪಾಶ್ಚಾತ್ಯರನ್ನು ಅಚ್ಚರಿಗೊಳಿಸಿದೆ. ನಂದಾರ ವಚನ ಸಂಗೀತದ ಸಿ.ಡಿ.ಗಳು ಯುರೋಪ, ಅಮೇರಿಕಾ, ಆಸ್ಟ್ರೇಲಿಯಾಗಳಲ್ಲಿ ಜನಪ್ರೀಯವಾಗಿವೆ.

ನಂದಾವರದು ಆಕರ್ಷಕ ವ್ಯಕ್ತಿತ್ವ, ಇವರು ಅಪೂರ್ವ ಪ್ರತಿಭಾವಂತ ಗಾಯಕಿ. ತಲೆಮಾರಿನ ಹಿರಿಯ ಗಾಯಕಿ. ಇವರು ಬೇರೆ ಬೇರೆ ವಿಶ್ವವಿದ್ಯಾಲಯ ಕಾಲೇಜಗಳಲ್ಲಿ ನಡೆಸುವ ಸೇಮಿನಾರಗಳಲ್ಲಿ ತಮ್ಮ ಪೇಪರಗಳನ್ನು ಪ್ರಸ್ತುತ ಪಡಿಸಿದ್ದಾರೆ. ಮತ್ತು ಕ.ವಿ.ವಿ. ನಡೆಸುವ ಪರೀಕ್ಷೆಗಳಲ್ಲಿ ಸಂಗೀತ ಪರೀಕ್ಷಕರಾಗಿ ಕಾರ್ಯ ನಿರ್ವಸಿದ್ದಾರೆ. ಇನ್ನೂ ಬೇರೆ ಬೇರೆ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಕಾರ್ಯನಿರ್ವಸಿದ್ದಾರೆ.

# ಶ್ರೀಮತಿ ಶಶಿಕಲಾ ಶ್ರೀಕಾಂತ ಕಲಹಳ್ಳಿ

ಶಶಿಕಲಾ ಕಲಹಳ್ಳಿ ಇವರು ಖ್ಯಾಲ್ ಸಂಗೀತಗಾರರಾದ ಶ್ರೀ ಸಂಗಮೇಶ್ವರ ಗುರವ ಹಾಗೂ ಸೌ. ಲೀಲಾವತಿ ದಂಪತಿಗಳ ಮಗಳಾಗಿ **೧೩-೮-೧೯೬೩**ರಲ್ಲಿ ಬೆಳಗಾವಿಯಲ್ಲಿ ಜನಿಸಿದರು. ಇವರ ತಂದೆ ಶ್ರೀ ಸಂಗಮೇಶ್ವರ ಗುರವ ಅವರು ಹಿಂದೂಸ್ತಾನಿ ಸಂಗೀತದ ಕಿರಾಣಾ ಘರಾಣೆಯ ಶ್ರೇಷ್ಠ ಗಾಯಕರು. ತಂದೆಯ ಮಾರ್ಗದರ್ಶನದಲ್ಲಿ ಸಂಗೀತದ ಜ್ಞಾನಾರ್ಜನೆ ಮಾಡಿ ಕಿರಾಣಾ ಘರಾಣೆಯ ವೈಶಿಷ್ಟ್ಯತೆಗಳನ್ನು ತಮ್ಮ ಗಾಯನದಲ್ಲಿ ಅಳವಡಿಸಿಕೊಂಡಿದ್ದಾರೆ. ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತವಲ್ಲದೇ ಸುಗಮ ಸಂಗೀತ, ಭಾವ ಗೀತೆಗಳು, ಭಕ್ತಿ ಗೀತೆಗಳು, ಜಾನಪದ ಸಂಗೀತ, ವಚನ ಸಂಗೀತ, ಕನ್ನಡ ರಂಗ ಗೀತೆಗಳು, ಜಾನಪದ ಸಂಗೀತ, ವಚನ ಸಂಗೀತ, ಕನ್ನಡ ರಂಗ ಗೀತೆಗಳು, ಠುಮ್ರಿ ಗಾಯನ ಮುಂತಾದ ಗಾಯನಗಲ್ಲಿ ಪರಿಣಿತಿ ಹೊಂದಿದ್ದಾರೆ. ಬಾಲ್ಯದಿಂದ ಸಂಗೀತಾಸಕ್ತರಾದ ಇವರು ಶಾಸ್ತ್ರೀಯ ಸಂಗೀತದ ಸ್ನಾತಕೋತ್ತರ ಪದವಿಧರರು . ದೇಶದ ಪ್ರಮುಖ ನಗರಗಳಲ್ಲಿ ಅದರಲ್ಲಿಯೂ ದೆಹಲಿ, ಮುಂಬೈ, ಹೈದರಾಬಾದ್, ಭೂಪಾಲ, ಲಖನೌ, ತಂಜಾವುರ, ಗೋವಾ ಮುಂತಾದ ಕಡೆಗಳಲ್ಲಿ ಸಂಗೀತ ಕಾರ್ಯಕ್ರಮಗಳನ್ನು ಕೊಟ್ಟಿದ್ದಾರೆ. ದೂರದರ್ಶನದಲ್ಲಿ ಮೂಡಿ ಬಂದ *ಮೇರಿ ಆವಾಜ ಸುನೋ* ಕಾರ್ಯಕ್ರಮದಲ್ಲಿಯೂ ಭಾಗವಹಿಸಿ ಎಲ್ಲರ ಗಮನ ಸೆಳೆದಿದ್ದಾರೆ. ಆಧುನಿಕ ಮಹಿಳೆ ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿಯೂ ಮುಂದೆ ಬರುತ್ತಿದ್ದಾಳೆ. *ಮಹಿಳೆ ಮನಸ್ಸು ಮಾಡಿದರೆ ಎನೆಲ್ಲವನ್ನು ಸಾಧಿಸಬಲ್ಲಳು* ಎಂಬ ಪದಕ್ಕೆ ಉದಾಹರಣೆಯಾಗಿದ್ದಾರೆ.

**ಸಾಧನೆ:-** ಆಕಾಶವಾಣಿ ಹಾಗೂ ದೂರದರ್ಶನ **"ಎ"** ದರ್ಜೆ ಗಾಯಕಿ, ಕನ್ನಡ, ಮರಾಠಿ ಹಾಗೂ ಹಿಂದಿ ಭಾಷೆಗಳಲ್ಲಿ ಸಂಗೀತ ಕಾರ್ಯಕ್ರಮಗಳನ್ನು ಆಕಾಶವಾಣಿಯ ಮೂಲಕ ನೀಡಿದ್ದಾರೆ.

ರಾಷ್ಟ್ರೀಯ ಸಂಗೀತೋತ್ಸವಗಳಾದ **"ನವರಸಪುರ ಉತ್ಸವ"** ಕಿತ್ತೂರು ಉತ್ಸವ, ಕದಂಬೋತ್ಸವ, ಹಂಪಿ ಉತ್ಸವ ಮುಂತಾದಡೆಗಳಲ್ಲಿ ಸಂಗೀತ ಕಾರ್ಯಕ್ರಮ ಕೊಟ್ಟಿದ್ದಾರೆ.

ಇವರಿಗೆ ಹುಬ್ಬಳ್ಳಿ, ಧಾರವಾಡ ಮಹಾನಗರ ಸಭೆಯ ರಾಜ್ಯೋತ್ಸವ ಪ್ರಶಸ್ತಿ, ನಾಡಹಬ್ಬದ ಶ್ರೇಷ್ಠ ಗಾಯಕಿ ಪ್ರಶಸ್ತಿ, ನಾಗಪುರದ ಟಪ್ಪಾ, ಠುಮರಿ ಪ್ರಶಸ್ತಿ ಇನ್ನೂ ಅನೇಕ ಪ್ರಶಸ್ತಿ ಸಂಧಿವೆ. ಇವರು ಲಡ್ಡು ಮುತ್ಯಾ ಎಂಬ ಚಿತ್ರದಲ್ಲಿ ಅಭಿನಯಿಸಿದ್ದಾರೆ. ಇವರ ವಚನ ಸಮೃದ್ಧಿ ಸಿ.ಡಿ. ಬಿಡುಗಡೆಗೊಂಡಿದೆ. ಇವರು ಕೆಚ್ಚೆದೆಯ ಗಂಡು ಎಂಬ ಚಲನಚಿತ್ರಕ್ಕೆ ಹಿನ್ನೆಲೆ ಗಾಯಕಿಯಾಗಿದ್ದರು. ಎದೆ ತುಂಬಿ ಹಾಡುವೆನು ಈ ಟಿ.ವಿ. ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಎಸ್.ಪಿ.ಬಾಲಸುಬ್ರಹ್ಮಣ್ಯ ಅವರೊಂದಿಗೆ ಭಾಗವಹಿಸಿದ್ದರು. (೨೦೧೦ರಲ್ಲಿ)

ಇನ್ನೂ ಅನೇಕ ಕಾರ್ಯಕ್ರಮಗಳನ್ನು ಕೊಟ್ಟಿದ್ದಾರೆ. ಮತ್ತು ಅನೇಕ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಇಗ ಇವರು ಕರ್ನಾಟಕ ಸಂಗೀತ ನೃತ್ಯ ಅಕಾಡಮಿಯ ಸದಸ್ಯರು.

# ಶ್ರೀಮತಿ ಪ್ರತಿಭಾ ಹೆಗಡೆ



ಶ್ರೀಮತಿ ಪ್ರತಿಭಾ ಹೆಗಡೆ **೨೧-೫-೧೯೭೪**ರಲ್ಲಿ ಹಾವೇರಿಯಲ್ಲಿ ಜನಿಸಿದ್ದು, ಇವರ ತಂದೆ ಶ್ರೀ ಕೆ.ಎಸ್. ಮೂಲಿಮನಿ ನಿವೃತ್ತ ಪ್ರೌಢ ಶಾಲಾ ಶಿಕ್ಷಕರು. ತಾಯಿ ಶ್ರೀಮತಿ ಶಶಿಕಲಾ ಮೂಲಿಮನಿ. ಬಿ.ಎ., ಬಿ.ಎಡ್. ಪಧವಿಧರೆ. ಪ್ರತಿಭಾವರಿಗೆ ಆರಂಭಿಕ ಸಂಗೀತ ಸ್ವರಾಭ್ಯಾಸವನ್ನು ತಾಯಿಯಿಂದಲೇ ಪಡೆದು ನಂತರ ದಿ. ಶ್ರೀ ಶಿವಯ್ಯನವರು ಆರಾಧ್ಯಮಠ ಇವರಲ್ಲಿ **೫** ವರ್ಷಗಳ ಕಾಲ ಸಂಗೀತ ಅಭ್ಯಾಸ ಮಾಡಿ ಮುಂದೆ ಗದುಗಿನ ಪಂಚಾಕ್ಷರಿ ಗವಾಯಿಗಳವರ ಸಂಗೀತ ಮಹಾವಿದ್ಯಾಲಯದಲ್ಲಿ ಪದವಿ ಪಡೆದು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ತೃತಿಯ ಸ್ಥಾನ ಪಡೆದಿರುತ್ತಾರೆ. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಪಡೆದು, ಯು.ಜಿ.ಸಿ. ಯವರು ನಡೆಸುವ ಸ್ಟೇಟ್ ಎಲಿಜಿಬಿಲಿಟಿ ಟೆಸ್ಟ್(----) ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ.

**೧೯೯೪**ರಿಂದ ಸತತವಾಗಿ **೧೬** ವರ್ಷಗಲ ಕಾಲ ಪಂ. ಚಂದ್ರಶೇಖರ ಪುರಾಣಿಕಮಠ ಇವರಲ್ಲಿ ಸಂಗೀತ ಶಿಕ್ಷಣ ಪಡೆದು, ಸಂಗೀತ ವಿದ್ವತ್ ಪರೀಕ್ಷೆಯಲ್ಲಿ ರಾಜ್ಯಕ್ಕೆ **ಪ್ರಥಮ ಸ್ಥಾನ** ಪಡೆದಿರುತ್ತಾರೆ. ಗಂಧರ್ವ ಮಹಾವಿದ್ಯಾಲಯ ನಡೆಸುವ ಸಂಗೀತ ವಿಶಾರದಾ ಹಾಗೂ ಅಲಂಕಾರ ಪರೀಕ್ಷೆಯಲ್ಲೂ ಪಾಸಾಗಿರುತ್ತಾರೆ. ಅಲ್ಲದೇ ಕರ್ನಾಟಕ ಸಂಗೀತ ನೃತ್ಯ ಅಕಾಡಮಿಯಿಂದ ಶಿಷ್ಯ ವೇತನ ಪಡೆದಿದ್ದಾರೆ. ಇದಲ್ಲದೇ ಧಾರವಾಡ ಉತ್ಸವ, ಹಂಪಿ ಉತ್ಸವದಂತಹ ಪ್ರತಿಷ್ಠಿತ ಸಂಗೀತ ಉತ್ಸವಗಳಲ್ಲಿ ಭಾಗವಹಿಸಿ ಕೇಳುಗರ ಮನ ಗೆದ್ದಿದ್ದಾರೆ. ರಾಜ್ಯದ ಹಲವಾರು ಕಡೆಗಳಲ್ಲಿ ಶಾಸ್ತ್ರೀಯ ಮತ್ತು ಸುಗಮ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟಿದ್ದಾರೆ.

**೧೯೯೬**ರಲ್ಲಿ **"ನಾದಶ್ರೀ"** ಸಂಗೀತ ವಿದ್ಯಾಲಯವನ್ನು ಹಾವೇರಿಯಲ್ಲಿ ಸ್ಥಾಪಿಸಿ, ನಿರಂತರವಾಗಿ **೨೦೧೦**ರವರೆಗೆ

ಸುಮಾರು **೮೫** ವಿದ್ಯಾರ್ಥಿಗಳಿಗೆ ಸಂಗೀತ ಆಸಕ್ತಿ ಹುಟ್ಟಿಸಿ, ಬೆಳೆಸಿ, ವಿವಿಧ ಸ್ಪರ್ಧೆಗಳಲ್ಲಿ ಹಾಗೂ ಸಂಗೀತ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಹಂತದವರೆಗೆ ವಿದ್ಯಾರ್ಥಿಗಳನ್ನು ತಯಾರು ಮಾಡಿದ ಅನುಭವವನ್ನು ಹೊಂದಿದ್ದಾರೆ.

**೨೦೧೦**ರಿಂದ ಸರಕಾರಿ ಪ್ರೌಢ ಶಾಲೆ ಕಮಲಾಪುರ ಧಾರವಾಡದಲ್ಲಿ ಸಂಗೀತ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇಗ ಇವರು ಶ್ರೀಯುತ ಎಮ್.ಪಿ.ಹೆಗಡೆ ಇವರಲ್ಲಿ ಹೆಚ್ಚಿನ ಸಂಗೀತ ಕಲಿಯುತ್ತಿದ್ದಾರೆ. ಹುಟ್ಟಿನಿಂದ ದೃಷ್ಟಿ ದೋಷ ಹೊಂದಿದ್ದರೂ ಕೂಡಾ ತಂದೆ ತಾಯಿಯವರ ನಿರಂತರ ಪ್ರೋತ್ಸಾಹ ಮತ್ತು ಶ್ರಮದೊಂದಿಗೆ ಮತ್ತು ಕುಟುಂಬದ ಎಲ್ಲಾ ಸದಸ್ಯರ ಪ್ರೋತ್ಸಾಹ ಹಾಗೂ ಸಹಾಯದಿಂದ ಅವಿರತವಾಗಿ ಸಂಗೀತ ಸಾಧನೆಯ ಮೂಲಕ ಬೆಳಕನ್ನು ಕಾಣುವ ಪ್ರಯತ್ನದಲ್ಲಿದ್ದಾರೆ.

*ಅಂಗವಿಕಲತೆ ಎನ್ನುವುದು ನಿಜವಾಗಿ ಶಾಪ ಅಲ್ಲಾ ಅಂತಾ ಪ್ರತಿಭಾ ಹೇಳುತ್ತಾರೆ.* ಅವರು ತಮ್ಮಲ್ಲಿ ಆತ್ಮ ವಿಶ್ವಾಸವನ್ನು ಹೊಂದಿ ಛಲ, ಹಠದಿಂದ ಮುನ್ನೆಡೆದು ಮಹತ್ತರ ಸಾಧನೆ ಮಾಡಿದ್ದರೆ. ಇದಕ್ಕೆ ಇವರ ಪತಿಯವರ ಪ್ರೋತ್ಸಾಹವೂ ಕಾರಣ ಎಂದರೆ ತಪ್ಪಲ್ಲ.

# ಶ್ರೀಮತಿ ರಾಧಾ ದೇಸಾಯಿ

ರಾಧಾ ದೇಸಾಯಿಯವರು ಗಡಿಗೆ ಹೊಳೆ ಊರಿನಲ್ಲಿ ೧೨-೮-೧೯೬೮ರಲ್ಲಿ ಸಂಗೀತ ಪರಂಪರೆ ಹೊಂದಿರುವ ಮನೆತನದಲ್ಲಿ ಹುಟ್ಟಿದರು.

ಪ್ರಾರಂಭಿಕ ಸಂಗೀತ ಶಿಕ್ಷಣವನ್ನು ಶ್ರೀ ಎಂ.ಪಿ. ಹೆಗಡೆ. ನಂತರ ಪಂ. ಚಂದ್ರಶೇಖರ ಪುರಾಣಿಕಮಠ ಅವರಲ್ಲಿ ನಂತರ ಶ್ರೀಪಾದ ಹೆಗಡೆ ಮತ್ತು ಪಂ. ವಸಂತ ಕನಕಾಪುರ ಅವರಲ್ಲಿಯೂ ಅಭ್ಯಾಸ ಮಾಡಿರುತ್ತಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ದಸರಾ ಉತ್ಸವ, ಗಾಂಧಿ ಜಯಂತಿ ಉತ್ಸವದಲ್ಲಿ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಅಲ್ಲದೇ ಉತ್ತರ ಕರ್ನಾಟಕದ ಭಾಗಗಳಾದ ಹಾವೇರಿ, ಗದಗ್, ಗಂಗಾವತಿ, ರಾಣೆಬೆನ್ನೂರ, ಶಿರಸಿ, ಹುಮನಾಬಾದ್, ಹುಬ್ಬಳ್ಳಿ, ಧಾರವಾಡ ಮಹಾನಗರ ಪಾಲಕೆಗಳಲ್ಲೂ ಕಾರ್ಯಕ್ರಮಗಳನ್ನು ಕೊಟ್ಟಿದ್ದಾರೆ.

ಇವರು ಸಂಗೀತ ಕ್ಷೇತ್ರದಲ್ಲಿ ಗಣನೀಯವಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಸಂಗೀತದ ವಿದ್ವತ್ ಪರೀಕ್ಷೆ ತೇರ್ಗಡೆಯಾಗಿದ್ದು ಧಾರವಾಡ ಆಕಾಶವಾಣಿ ಕೇಂದ್ರದಲ್ಲಿ ಶಾಸ್ತ್ರೀಯ ಸಂಗೀತ **"ಬಿ"** ಹಾಗೂ ಸುಗಮ ಸಂಗೀತ **"ಬಿ ಹೈ"** ಶ್ರೇಣಿ ಕಲಾವಿದರಾಗಿ ಕಾರ್ಯಕ್ರಮವನ್ನು ನೀಡುತ್ತಿದ್ದಾರೆ. ಸಂಗೀತ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವ ಇವರು ಅನೇಕ ಧ್ವನಿ ಸುರಳಿಗಳಿಗೂ ಹಾಗೂ ದೂರದರ್ಶನದಲ್ಲಿಯೂ ಹಾಡಿ ಮೆಚ್ಚುಗೆ ಗಳಿಸಿರುತ್ತಾರೆ.

ಇವರಿಗೆ ದಸರಾ ಪ್ರಶಸ್ತಿ, ಅನೇಕ ಸಭೆ ಸಂಘ ಸಂಸ್ಥೆಗಳು ನೀಡಿದ ಪ್ರಶಸ್ತಿ, ಉತ್ತಮ ಗಾಯಕಿ ಎನ್ನುವ ಪ್ರಶಸ್ತಿ ಪಡೆದಿದ್ದಾರೆ.

# ವಿದೂಷಿ ಅಮೀರಬಾಯಿ ಕರ್ನಾಟಕಿ

೨೦ನೇ ಶತಮಾನದ ಮೊದಲ ಭಾಗದಲ್ಲಿ ತಮ್ಮ ಗಾಯನ ಪ್ರತಿಭೆಯಿಂದ ಜನಪ್ರೀಯರಾಗಿದ್ದವರು. ಅಮೀರಬಾಯಿ ಹಾಗೂ ಗೋಹರಬಾಯಿ ಕರ್ನಾಟಕಿ ಅವರು ೬೦ರ ದಶಕದಲ್ಲೇ ತೀರಿಕೊಂಡರು. ಅವರನ್ನು ಹೊಸ ತಲೆಮಾರಿನವರು ನೋಡುವುದು ದೂರದ ಮಾತು. ಅವರ ಹಾಡುಗಳು ಕೂಡಾ ಅವರ ಕಿವಿಯ ಮೇಲೆ ಬಿದ್ದಿರುವುದು ಕಡಿಮೆ. ಆದರೆ ರಂಗಗೀತೆ, ಹಿಂದೂಸ್ತಾನಿ ಸಂಗೀತ, ಹಿಂದಿ ಸಿನಿಮಾ ಹಾಡು ಹಾಗೂ ಕನ್ನಡ ಭಾವಗೀತೆಗಳಲ್ಲಿ ಆಸಕ್ತರಾಗಿರುವವರಿಗೆ, ಈ ಸೋದರಿಯರ ಹೆಸರು ಗೊತ್ತು.

ಅಮೀರಬಾಯಿ ಕರ್ನಾಟಕಿ (೧೯೦೬-೧೯೬೫) ಮುಂಬೈ ಪ್ರಾಂತ್ಯಕ್ಕೆ ಸೇರಿದ ಬಿಜಾಪುರ ಜಿಲ್ಲೆಯ ಬಿಳಗಿಯಲ್ಲಿದ್ದ ಅಮೀನಾ ಹುಸೇನ್‌ಸಾಬ್ ದಂಪತಿಗಳ ಹಿರಿಯ ಮಗಳು. ಸಂಗೀತ ಮತ್ತು ನಟನಾ ವೃತ್ತಿಯ ಕಲಾವಂತರ ಮನೆತನಕ್ಕೆ ಸೇರಿದ ಹುಸೇನ್‌ಸಾಬ್‌ರು ರಂಗಭೂಮಿಯಲ್ಲಿ ತಬಲಾ ಮತ್ತು ಪೇಟಿ ನುಡಿಸುವ ಕಲಾವಿದರಾಗಿದ್ದರು. ಕನಾಟಕದಲ್ಲಿ ಮುಸ್ಲಿಂ ಕಲಾವಂತರು ಮೂಲತಃ ಗುಡಿ ಸಂಸ್ಕೃತಿಯವರು. ಸಂಗೀತ ಸೇವೆ ಸಲ್ಲಿಸುತ್ತಿದ್ದ ಗುಡಿಗಳನ್ನು ನೆಚ್ಚಿಕೊಂಡು ತಮ್ಮ ತಮ್ಮ ಊರುಗಳಲ್ಲೇ ಉಳಿದರೆ ಕೆಲವರು ಮಾತ್ರ ಈ ಸೀಮಿತ ಜಗತ್ತನ್ನು ತೊರೆದು ವಿಶಾಲವಾದ ರಂಗಭೂಮಿಗೂ ಶಾಸ್ತ್ರೀಯ ಸಂಗೀತಕ್ಕೂ ಸಿನಿಮಾಕ್ಕೂ ಹೋಗಿ ದೊಡ್ಡ ಕಲಾವಿದರಾಗಿ ಬೆಳೆದವರಲ್ಲಿ ಗಂಗೂಬಾಯಿ ಹಾನ್‌ಗಲ್, ಶಂತಾ ಹುಬ್ಬಳಿಕರ್, ಪಂಡರಿಬಾಯಿ ಮುಂತಾದವರು. ಆಗಿನ ನಾಟಕ ಸಿನಿಮಾಗಳು ಕೂಡ ಸಂಗೀತ ಪ್ರಧಾನವಾಗಿದ್ದವು. ಅಂತಹ ಕಲಾಮಾಧ್ಯಮಗಳಲ್ಲಿ ಅಮೀರಬಾಯಿ ಕರ್ನಾಟಕ ಹೆಸರು ಮಾಡಿದರು. ಉತ್ತರ ಕರ್ನಾಟಕವು ಭಾರತದ ಪ್ರಮುಖ ಹಿಂದೂಸ್ತಾನಿ ಗಾಯಕರನ್ನು ಪಡೆದಿತ್ತು. ಮುಂಬೈ ನಗರವೇ ಭಾರತದ ಬಹುವಾರ್ಷಿಕ, ಬಹು ಸಾಂಸ್ಕೃತಿಕ ಹಾಗೂ ಬಹು ಧರ್ಮಿಯರ ಕಲಾವಿದರನ್ನು ಕೂಡಿಸಿಕೊಂಡ ಕುದಿವ ಕುಲುಮೆಯಂತಿತ್ತು. ಹಿಂದೂಸ್ತಾನಿ ಸಂಗೀತ ಪರಂಪರೆಯ ಮುಂದುವರಿಕೆಯಾಗಿದ್ದ ಮುಂಬೈನ ಸಿನಿಮಾ ಜಗತ್ತು ಕೂಡಾ ಧರ್ಮಾತೀತವಾಗಿತ್ತು. ಮುಂಬೈನ ಈ ಕಾಸ್ಮೋಪಾಲಿಟನ್ ಮತ್ತು ಜ್ಯಾತ್ಯಾತೀತ ಪರಿಸರವು ಬೀಳಗಿ ಸೋದರಿಯರ ಕರ್ಮಭೂಮಿಯಾಗಿದ್ದು ಸಹಜವಾಗಿತ್ತು.

೨೦ನೇ ಶತಮಾನದ ಮೊದಲ ಘಟ್ಟದಲ್ಲಿ ನಾಟಕ ಮತ್ತು ಸಿನಿಮಾಗಳಲ್ಲಿ ಕೆಲಸ ಮಾಡಬೇಕಾದರೆ ನಟನೆಯ ಜೊತೆಗೆ ಹಾಡುಗಾರಿಕೆ ಅವಶ್ಯವಾಗಿತ್ತಷ್ಟೆ. ಕನ್ನಡ ಮತ್ತು ಮರಾಠಿ ರಂಗಭೂಮಿಯಲ್ಲಿ ಗಾಯಕ ನಟಿಯರಾಗಿ ಕೆಲಸ ಮಾಡುತ್ತಿದ್ದ ಅಮೀರಬಾಯಿ ಗೋಹರಬಾಯಿ ಸೋದರಿಯರ ಬಣ್ಣದ ಬದುಕು ಆರಂಭವಾಗಿದ್ದೆ

ರಂಗಭೂಮಿಯಲ್ಲಿ, ಬಿಜಾಪುರದಲ್ಲಿ ಆಗ ಬಿಡಾರ ಬಿಟ್ಟಿದ್ದ ಮರಾಠಿ ರಂಗಭೂಮಿಯ ಪ್ರಸಿದ್ಧ ಸಂಗೀತಗಾರ ಮತ್ತು ನಾಟಕಕಾರ ಬಾಲಗಂಧರ್ವರು ಈ ಸೋದರಿಯರನ್ನು ತಮ್ಮ ಕಂಪನಿಗೆ ಆಹ್ವಾನಿಸಿದರೆಂದೂ, ಇದರಲ್ಲಿ ನಾನಾಸಾಹೇಬ ಚಾಪೇಕರ ಮುಖ್ಯಪಾತ್ರ ವಹಿಸಿದರೆಂದೂ ತಿಳಿದುಬರುತ್ತದೆ. ಮೂರೆ ಸಿನಿಮಾಗಳಿಂದ ಟಾಕಿಗೆ ಹೊರಳುತ್ತಿದ್ದ ಸಿನಿಮಾ ಜಗತ್ತು ಸಹಜವಾಗಿ ಮಧುರವಾದ ಹಾಡಿಕೆಯಿಂದ ಬೀಳಗಿ ಸೋದರಿಯರನ್ನು ಸೆಳೆದುಕೊಂಡಿತು. ಅಮೀರಬಾಯಿಯವರು ೧೫ ವರ್ಷದವರಿದ್ದಾಗಲೇ ಹೆಚ್.ವಿ.ವಿ. ಕಂಪನಿಯ ಗಾನತಟ್ಟೆಗಾಗಿ ಖವ್ವಾಲಿ ಹಾಡಿದ್ದು, ಅದು ಖ್ಯಾತಿ ತಂದು ಕೊಟ್ಟಿತು.

ಅಮೀರಬಾಯಿ ಮುಂಬೈನಲ್ಲಿ ವಾಸವಾಗಿದ್ದರು. ಅವರು ತಮ್ಮ ಏಕೈಕ ತಮ್ಮನಿಗಾಗಿ ಬಿಜಾಪುರದಲ್ಲಿ ೧೯೫೮ರಲ್ಲಿ ಒಂದು ಸಿನಿಮಾ ಥೀಯೇಟರ್ ಕಟ್ಟಿಸಿದರು. ಶೋಕದ ಹಾಡುಗಳನ್ನು ತನ್ಮಯರಾಗಿ ಹಾಡುತ್ತಿದ್ದ ಅಮೀರಬಾಯಿಯವರ ವಯಕ್ತಿಕ ಬದುಕು ಕೂಡಾ ಏರುಪೇರುಗಳಿಂದ ಕೂಡಿತ್ತು.

ಅಮೀರಬಾಯಿಯವರಿಗೆ "ಕರ್ನಾಟಕ ಕೋಗಿಲೆ" ಎಂಬ ಬಿರುದಿತ್ತು. ಕರ್ನಾಟಕ ಏಕೀಕರಣ ಆಗುವ ಮುನ್ನವೇ ಕರ್ನಾಟಕಿ ಎಂದು ಹೆಸರಿಟ್ಟುಕೊಂಡಿದ್ದರು.

ಅಮೀರಬಾಯಿ ಅವರ ಅನೇಕ ಹಾಡುಗಳಿಗೆ ರಾಗ ಸಂಯೋಜನೆ ಮಾಡಿದ್ದು ಡಾ. ಮಲ್ಲಿಕಾರ್ಜುನ ಮನಸೂರರು. ಇವರ ಕೊನೆಯ ದಿನಗಳಲ್ಲಿ ಪಾರ್ಶ್ವವಾಯು ಬಡಿಯಿತು. ೪ ದಿನ ನೋವುಂಡು ೧೯೬೫ರಲ್ಲಿ ಪ್ರಾಣಬಿಟ್ಟರು. ಇವರ ದೇಹವನ್ನು ಬಿಜಾಪುರದಲ್ಲಿ ಆದಿಲ್‌ಶಾಹಿ ದೊರೆಯಾದ ೨ನೇ ಇಬ್ರಾಹಿಮನ್ ಸಮಾದಿ ಹತ್ತಿರ ಮಣ್ಣು ಮಾಡಲಾಯಿತು.

# ಡಾ॥ ಶ್ರೀಮತಿ ಕಮಲ್ ಪುರಂದರೆ

ಇವರು ಗದಗನಲ್ಲಿ ೧೯೪೦ರಲ್ಲಿ ಜನಿಸಿದರು. ತಂದೆ ಗೋಪಾಲರಾವ್ ಪಾಗೆ. ಚಿಕ್ಕಪ್ಪ ವಸಂತರಾವ್ ಪಾಗೆ. ತಾಯಿ ರಾಧಾಬಾಯಿ. ಎಲ್ಲರು ಸಂಗೀತ ಬಲ್ಲವರು.

ಇವರ ಪತಿ ದಿ॥ ರಾಜೀವ ಪುರಂದರೆ ಅವರಲ್ಲಿ ಸಂಗೀತ ಶಿಕ್ಷಣ ಪಡೆದರು. ಜಯಪುರ್ ಘರಾಣೆ. ಸುಗಮ ಸಂಗೀತದಲ್ಲಿ ಪ್ರಾವಿಣ್ಯತೆ ಇದೆ. ವಿಠ್ಠಲಸಾ ಕಬಾಡಿಯವರಿಂದ ಹಾರ್ಮೋನಿಯಂ ವಾದನ ಕಲಿಕೆ. ಸಂಗೀತ ಅಲಂಕಾರ ಪರೀಕ್ಷೆಯಲ್ಲಿ ತೇರ್ಗಡೆ.

ಧಾರವಾಡ ಆಕಾಶವಾಣಿ ಕೇಂದ್ರದಿಂದ ಇವರ ಶಾಸ್ತ್ರೀಯ ಹಾಗೂ ಸುಗಮ ಸಂಗೀತ ಗಾಯನ ಪ್ರಸಾರ. ಕೆಲವು ಧ್ವನಿ ಮುದ್ರಿಕೆಗಳೂ ಪ್ರಸಾರವಾಗಿವೆ. ಮುಂಬೈ, ಧಾರವಾಡ, ಗದಗ, ಹುಬ್ಬಳ್ಳಿ, ಬೆಳಗಾವಿ, ಮಂಗಳೂರು, ಉಡುಪಿ, ರಾಯಚೂರು ನಗರಗಳ ಕಲಾ ಸಂಘಗಳ ಆಶ್ರಯದಲ್ಲಿ ಕಚೇರಿ ಮಾಡಿದ್ದಾರೆ.

ಹುಬ್ಬಳ್ಳಿ ಮಹಿಳಾ ಕಾಲೇಜಿನ ಸಂಗೀತ ವಿಭಾಗದ ಮುಖ್ಯಸ್ಥೆಯಾಗಿ ಕೆಲಸಮಾಡಿರುವರು. ಮತ್ತು ಇವರು ಕರ್ನಾಟಕ ವಿಶ್ವವಿದ್ಯಾಲಯದಿಂದ ಸಂಗೀತದಲ್ಲಿ ಡಾಕ್ಟರೇಟ್ (ಪಿ.ಎಚ್.ಡಿ) ಪದವಿ ಪಡೆದು, ಸಂಗೀತದಲ್ಲಿ ಪಿ.ಎಚ್.ಡಿ. ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿದ್ದರು. ಮತ್ತು ಕೆ.ಯು.ಡಿ. ಯಿಂದ ಹಲಾವರು ಸಂಗೀತ ಪರೀಕ್ಷೆಯ ಕೆಲಸ ಮಾಡಿದ್ದುಂಟು. ಕರ್ನಾಟಕ ವಿಶ್ವವಿದ್ಯಾಲಯದ ಸಂಗೀತ ವ್ಯಾಸಂಗ ಮಂಡಳಿಯ ಸದಸ್ಯೆಯಾಗಿದ್ದರು. ಸಂಗೀತಾ ಕಲಾ ಕುಸುಮ, ಸಂಗೀತ ಶಾಸ್ತ್ರಗ್ರಂಥ ಅಲ್ಲದೇ ಹಲವಾರು ಸ್ಮರಣ ಸಂಚಿಕೆಗಳಲ್ಲಿ ಕೆಲವು ಲೇಖನಗಳೂ ಪ್ರಕಟವಾಗಿವೆ.

## ಡಾ॥ ಶ್ರೀಮತಿ ಲತಾ ನಾಡಗೇರ

ಲತಾ ನಾಡಗೇರರವರು ಮಹಾರಾಷ್ಟ್ರದ ಕಾನ್‌ಗಾಂವ್ ಎಂಬಲ್ಲಿ **೯-೫-೧೯೫೧**ರಲ್ಲಿ ಜನಿಸಿದರು. ಇವರು ಪಂ. ಗುರುರಾವ್ ದೇಶಪಾಂಡೆ ಅವರಲ್ಲಿ ಸಂಗೀತ ಶಿಕ್ಷಣ ಪಡೆದರು. ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ. ಮ್ಯೂಜಿಕ್ ಪದವಿ ಪಡೆದಿದ್ದಾರೆ. ಸುಗಮ ಸಂಗೀತ ಗಾಯನದಲ್ಲು ಪರಿಶ್ರಮ ಉಂಟು.

ಹುಬ್ಬಳ್ಳಿಯ ಮೂರು ಸಾವಿರ ಮಠದ ಮಹಿಳಾ ಮಹಾವಿದ್ಯಾಲಯದಲ್ಲಿ ಸಂಗೀತ ವಿಭಾಗದ ಮುಖ್ಯಸ್ಥೆಯಾಗಿ ಕೆಲಸ ಮಾಡಿದ್ದಾರೆ. ಇವರು ಕರ್ನಾಟಕ ವಿಶ್ವ ವಿದ್ಯಾಲಯದಿಂದ ಸಂಗೀತದ ಬಗ್ಗೆ ಪ್ರಬಂಧ ಮಂಡಿಸಿ ಡಾಕ್ಟರೇಟ್ ಪದವಿ ಪಡೆದಿದ್ದಾರೆ. ಮತ್ತು ವಿಶ್ವ ವಿದ್ಯಾಲಯಗಳ ಪರೀಕ್ಷಾ ಕೆಲಸ ಸೆಮಿನಾರ್‌ನಲ್ಲಿ ಪೇಪರ ಮಂಡಿಸುವುದು ಮುಂತಾದ ಸಂಗೀತಕ್ಕೆ ಸಂಬಂಧಿಸಿದ ಚಟುವಿಟಿಕೆಗಳಲ್ಲಿ ಭಾಗವಹಿಸಿದ್ದಾರೆ.

**೧೯೭೭**ರಲ್ಲಿ ಹುಬ್ಬಳ್ಳಿಯಲ್ಲಿ ಮೊದಲ ಕಚೇರಿ ರಾಯಚೂರಗಳಲ್ಲಿ ಕರ್ನಾಟಕ ಸಂಗೀತ ನೃತ್ಯ ಅಕಾಡಮಿಯ ಆಶ್ರಯದಲ್ಲಿ, ಬೆಂಗಳೂರಿನಲ್ಲಿ ಪುರಂದರ ದಾಸರ ಆರಾಧನಾ ಉತ್ಸವದಲ್ಲಿ ಸಂಗೀತ ಕಚೇರಿಗಳನ್ನು ಕೊಟ್ಟಿದ್ದಾರೆ.

# ಶ್ರೀಮತಿ ಗೀತಾ ಎಸ್ ಹೆಬ್ಬಿಕರ್

ಧಾರವಾಡದ ಕಲಾವಿದರ ಮನೆತನದಲ್ಲಿ ೫-೧-೧೯೭೪ರಲ್ಲಿ ಜನ್ಮ ತಾಳಿದರು. ತಂದೆ ದತ್ತಾತ್ರೆಯ ಮೆಂಡಿಗೇರಿ. ತಾಯಿ ಕಲಾವತಿ ಮೆಂಡಿಗೇರಿ. ಪತಿ ಶ್ರೀಕಾಂತ ಹೆಬ್ಬಿಕರ್ ಚಿತ್ರ ನಟರು ಹಾಗೂ ತಯಾರಕರು.

ಇವರು ಬಿ.ಮ್ಯೂಜಿಕ್, ಎಮ್.ಮ್ಯೂಜಿಕ್ ಮತ್ತು ವಿದ್ವತ್ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆ. ಗೀತಾ ಹೆಬ್ಬಿಕರ್‌ರವರು ಪಂ. ಸಂಗಮೇಶ್ವರ ಗುರವ ಅವರಲ್ಲಿ ೧೫ ವರ್ಷಗಳವರೆಗೂ ಕಿರಾಣಾ ಘರಣಾ ಸಂಗೀತದಲ್ಲಿ ಸಮಗ್ರ ಶಿಕ್ಷಣ ಪಡೆದರು. ಆಕಾಶವಾಣಿಯಲ್ಲಿ ಸುಗಮ ಹಾಗೂ ಶಾಸ್ತ್ರೀಯ ಸಂಗೀತದಲ್ಲಿ **"ಬಿ"** ಶ್ರೇಣಿಯ ಕಲಾವಿದೆ.

ಧಾರವಾಡ ರಾಣೆಬೆನ್ನೂರ, ಹಳಿಯಾಳ, ಬದಾಮಿ, ಕೊಲ್ಹಾಪುರ ಮುಂತಾದ ಅನೇಕ ನಗರಗಳಲ್ಲಿ ಸಂಗೀತ ಕಾರ್ಯಕ್ರಮಗಳನ್ನು ಕೊಟ್ಟಿದ್ದಾರೆ.

**ಇವರ ಸಾಧನೆ:–** ದಕ್ಷಿಣವಲಯ ಯುವೋತ್ಸವ, ಸಂಗೀತಭಾರತಿ ವೇದಿಕೆ, ಇಚಲಕರಂಜಿ ಪಂ. ಬಾಲಕೃಷ್ಣ ಬುವಾ ಸಂಗೀತ ಸಾಧನ ಮಂಡಲ. ಡಾ. ವಸಂತರವ್ ದೇಶಪಾಂಡೆ ಸಂಗೀತ ಸ್ಪರ್ಧೆ ಕರಾವಳಿ ಉತ್ಸವ, ಕದಂಬೋತ್ಸವ ಮುಂತಾದೆಡೆ ನಡೆದ ಸಂಗೀತ ಸ್ಪರ್ಧೆಗಳಲ್ಲಿ ಪ್ರಥಮ ಬಹುಮಾನ ಗಳಿಸಿರುವ ಹೆಗ್ಗಳಿಕೆ.

**ಪ್ರಶಸ್ತಿ:–** ಹುಬ್ಬಳ್ಳಿಯಲ್ಲಿ ತಾಮ್ಹಣಕರ್ ಪ್ರಶಸ್ತಿ, ಸಾಂಗ್ಲಿಯಲ್ಲಿ ಅಣ್ಣಾ ಸಾಹೇಬ್ ಕಾರ್ಲೆ ಪ್ರಶಸ್ತಿ, ಕೊಲ್ಹಾಪುರದಲ್ಲಿ ಗೋವಿಂದರಾವ್ ಗುಣ ಅಮೃತೋತ್ಸವ ಪ್ರಶಸ್ತಿ ಇವರಿಗೆ ಲಭಿಸಿವೆ.

# ಶ್ರೀಮತಿ ಶಾರದಾ ಎ ಥಾಪೇಕರ್

ಸಾಂಗ್ಲಿಯಲ್ಲಿ **೨೧-೦೯-೧೯೩೩**ರಲ್ಲಿ ಸಂಗೀತ ಮನೆತನದಲ್ಲಿ ಜನನ. ತಂದೆ ಗೋವಿಂದರಾವ್ ವಿಷ್ಣು (ವಝೆ ಬುವಾರ ಶಿಷ್ಯರು) ಪಟುವರ್ಧನರವರಲ್ಲಿ ಶಾರದಾರವರು ಬಾಲ್ಯದಿಂದಲೇ **೧೫** ವರ್ಷಗಳ ಕಾಲ ಸಂಗೀತ ಕಲಿತವರು. ಮುಂಬೈಯ **ಸ್ಕೂಲ್ ಆಫ್ ಇಂಡಿಯನ್ ಮ್ಯೂಜಿಕ್**ನಲ್ಲಿ ಪ್ರೋ. ಬಿ.ಆರ್.ದೇವಧರ್. ಅವರಲ್ಲಲಿ ಪ್ರೌಢ ವ್ಯಾಸಂಗ ನಡೆಯಿತು. ಗ್ವಾಲಿಯರ್ ಘರಾಣೆಯಲ್ಲಿ ಶಿಕ್ಷಣ ದೊರೆತಿದೆ.

**ಕಾರ್ಯಕ್ರಮಗಳು:-** ಮೊದಲ ಸಂಗೀತ ಕಚೇರಿ ಸಾಂಗ್ಲಿಯಲ್ಲಿ ನಡೆದ ಗಣಪತಿ ಉತ್ಸವದಲ್ಲಿ. **೧೯೫೫**ರಿಂದ **೧೯೬೫** ರವರೆಗೆ ಪುಣೆ ಆಕಾಶವಾಣಿ ಮತ್ತು ನಂತರ ಧಾರವಾಡ ಆಕಾಶವಾಣಿಯಿಂದ ಇವರ ಗಾಯನ ಪ್ರಸಾರವಾಗುತ್ತಿವೆ.

ಕುಂದಗೋಳ, ಕರಾಡ, ಮಿರಜ, ಗದಗ, ಕುಷ್ಟಗಿ, ನರೆಗಲ್ ಮುಂತಾದ ಕಡೆಗಳಲ್ಲಿ ಸಂಗೀತ ಕಚೇರಿ ಮಾಡಿದ್ದಾರೆ.

# ಶ್ರೀಮತಿ ಶಾಂತಾಪೋಟಿ

ಮಂಗಳೂರಿನಲ್ಲಿ **೨೪-೧-೧೯೩೬**ರಲ್ಲಿ ಜನನ. ಶಾಂತಾಪೋಟಿಯವರು, ಶ್ರೀನಿವಾಸ ಉಡುಪರಲ್ಲಿ ಸಂಗೀತ ಅಭ್ಯಾಸ ಮಾಡುತ್ತಾ, ಸಿನಿಯರ್ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಮುಂದೆ **೧೯೬೮**ರಿಂದ ನಾಗಾಪುರದಲ್ಲಿ ಸುಧಾಕರ್ ಹಂಡೆ ಅವರಲ್ಲಿ ಹಿಂದೂಸ್ತಾನಿ ಗಾಯನದಲ್ಲಿ ಶಿಕ್ಷಣ ಪಡೆದರು. ಅನಂತರ ಬೆಂಗಳೂರಿನಲ್ಲಿ ರಾಮರಾವ್ ನಾಯಕ ಅವರಿಂದ ಪ್ರೌಢ ಶಿಕ್ಷಣ. ನಂತರ ಸಂಗೀತ ವಿಶಾರದಾ ಪರೀಕ್ಷೆಯಲ್ಲಿ ತೇರ್ಗಡೆ.

**ಕಾರ್ಯಕ್ರಮಗಳು:- ೧೯೫೪**ರಿಂದ ಮಂಗಳೂರು, ಉಡುಪಿ, ಮಡಿಕೇರಿ ಮುಂತಾದ ಕಡೆ ಸಂಗೀತ ಕಚೇರಿ ನಡೆದವು. ಮುಂದೆ ನಾಗಪುರ, ಭಂಡಾರ, ಬಾಲಘಾಟ್, ಮಂಗಳೂರು, ಬೆಂಗಳೂರು, ರಾಜಸ್ಥಾನ, ಮುಂತಾದ ಕಡೆಗಳಲ್ಲೂ ಕಾರ್ಯಕ್ರಮ ನೀಡಿದ್ದಾರೆ. ಭಾರತೀಯ ವಿದ್ಯಾಭವನ, ಸುರ್‌ಸಾಗರ ಲಕ್ಷ್ಮೀ ವೆಂಕಟೇಶ ಕಲಾ ಸೇವಾ ಮಂಡಳಿ(ಉಡುಪಿ) ಮುಂತಾದ ಸಂಸ್ಥೆಗಳ ಆಶ್ರಯದಲ್ಲೂ ಹಾಡಿದ್ದಾರೆ. ಬೆಂಗಳೂರು, ಮಂಗಳೂರು, ನಾಗಪೂರ ಮತ್ತು ಪುಣೆ ಆಕಾಶವಾಣಿ ಕೇಂದ್ರಗಳಿಂದ ಇವರ ಗಾಯನ ಪ್ರಸಾರವಾಗಿವೆ.

## ಶ್ರೀಮತಿ ಸಂಗೀತಾ ಕಾಖಂಡಕಿ ಜೋಶಿ

ತಂದೆ ರಾಮಾಚಾರ್ ಕಾಖಂಡಕಿ ಮತ್ತು ತಾಯಿ ಸಿತಾಬಾಯಿ ಇವರ ಮಗಳಾಗಿ **೧೦-೬-೧೯೭೭**ರಲ್ಲಿ ಜನಿಸಿದರು. ಸಂಗೀತಾ ಕಾಖಂಡಕಿಯವರು ತಮ್ಮ ತಂದೆಯವರಾದ ರಾಮಾಚಾರ್ ಕಾಖಂಡಕಿ (ದೊಡ್ಡ ಸಂಗೀತ ವಿದ್ವಾಂಸ) ಇವರ ಹತ್ತಿರ ಪ್ರಾರಂಭಿಕ ಸಂಗೀತ ಶಿಕ್ಷಣವನ್ನು ಪಡೆದು ಹೆಚ್ಚಿನ ಶಿಕ್ಷಣವನ್ನು ಹೆಸರಾಂತ ಗಾಯಕರಾದ ಮೊಹಮದ್ ದಿಲ್‌ಷಾದ್ ಖಾನ್ ಮತ್ತು ಬೇಗಂ ಪರ್ವೀನ್ ಸುಲ್ತಾನ್ ಅವರಲ್ಲಿ ಪಡೆಯುತ್ತಿದ್ದಾರೆ.

**ಕಾರ್ಯಕ್ರಮಗಳು:-** ಆಕಾಶವಾಣಿ ಧಾರವಾಡ, ಗುಲ್ಬರ್ಗಾದ ಮತ್ತು ಮಂಗಳೂರು ನಿಲಯಗಳಿಂದ ಸಂಗೀತ ಕಾರ್ಯಕ್ರಮ ಪ್ರಸಾರವಾಗಿವೆ. **೧೯೮೪**ರಿಂದ ಸತತವಾಗಿ ಮುಂಬೈ ಹಾಗೂ ರಾಜ್ಯದ ಹಲವಾರು ಕಡೆಗಳಲ್ಲಿ ಕಾರ್ಯಕ್ರಮಗಳು ನಡೆದಿವೆ. ಇವರೊಬ್ಬ ಉದಯೋನ್ಮುಖ ಯುವಕಲಾವಿದೆ.

## ಶ್ರೀಮತಿ ಸುಶಿಲಾಬಾಯಿ ಅಮೀನ್‌ಗಡ್

ಇವರು **೫–೫೧೯೨೨**ರಲ್ಲಿ ಬಾಗಲಕೋಟೆ ಜಿಲ್ಲೆಯ ಅಮಿನಗಡ್‌ದಲ್ಲಿ ಜನಿಸಿದರು. ಇವರು ಸಂಗೀತವನ್ನು ಬಾಲ್ಯದಲ್ಲಿ ವಜೀರ್‌ಖಾನ್ ಸಾಹೇಬ (ಬುರಾನಪುರ) ರವರಲ್ಲಿಯೂ, ಮುಂದೆ ಪ್ರಭಾಕರ್ ರಾಮೊಧ್ಯಾಯ ಸೊಲ್ಲಾಪುರದಲ್ಲಿಯೂ ನಂತರ ಅಬ್ದುಲ್ ಕರೀಂಖಾನ್ ಸಾಹೆಬರ ಪತ್ನಿ ಬನ್ನೂಮಾರವರಲ್ಲಿ ಸಂಗೀತ ಶಿಕ್ಷಣ ಪಡೆದ ಹಿರಿಯ ಕಲಾವಿದೆ.

**ಕಾರ್ಯಕ್ರಮಗಳು:–** ಬಿಜಾಪುರದಲ್ಲಿ ಮೊದಲ ಕಚೇರಿ. ನಂತರ ಬದಾಮಿ, ಆಲಮಟ್ಟಿ ಮೊದಲಾದ ಕಡೆ ಕಚೇರಿ ಮಾಡಿದ್ದಾರೆ. **೧೯೫೨**ರಿಂದ ಧಾರವಾಡ ಆಕಾಶವಾಣಿ ಕೇಂದ್ರದಿಂದ ಇವರ ಗಾಯನ ಕಾರ್ಯಕ್ರಮಗಳು ಪ್ರಸಾರವಾಗುತ್ತಿವೆ. ದೆಹಲಿಯ ಅಖಿಲ ಭಾರತ ಸಂಗೀತ ಸಮ್ಮೇಳನದಲ್ಲಿ ಭಾಗವಹಿಸಿದ್ದಾರೆ. ಪುಣೆ, ಮುಂಬೈ ಕೇಂದ್ರಗಳಿಂದಲೂ ಇವರ ಕಾರ್ಯಕ್ರಮ ಪ್ರಸಾರವಾಗಿವೆ. ಬೆಂಗಳೂರಿನಲ್ಲಿ ಸಂಗೀತ ನೃತ್ಯ ಅಕಾಡಮಿ ವತಿಯಿಂದ ಕಾರ್ಯಕ್ರಮ ನಡೆದಿವೆ.

# ಶ್ರೀಮತಿ ಕೃಷ್ಣಾ ಎ. ರಾಜಮಿ

ಇವರು ಮುಂಬೈಯಲ್ಲಿ ೧೩-೮-೧೯೨೭ರಲ್ಲಿ ಜನಿಸಿದರು. ಪ್ರೋ. ಬಿ.ಆರ್. ದೇವಧರ್ (ಗ್ವಾಲಿಯರ್ ಘರಾಣೆ) ಅವರಲ್ಲಿ ಮುಂಬೈ **ಸ್ಕೂಲ್ ಆಫ್ ಇಂಡಿಯನ್ ಮ್ಯೂಜಿಕ್** ಶಾಲೆಯಲ್ಲಿ ಸಂಗೀತ ಶಿಕ್ಷಣ ಪಡೆದರು. ಅನಂತರ ಆಗ್ರಾ ಘರಾಣೆಯ ಖದೀಮ್ ಹುಸೇನ ಖಾನ್‌ರ ಶಿಷ್ಯರಾದ ಗೋವಿಂದರಾವ್ ಅಗ್ನಿ ಇವರಲ್ಲಿ ೧೯೪೧ರಿಂದ ಸಂಗೀತ ವ್ಯಾಸಂಗ ಮಾಡಿದರು.

**ಕಾರ್ಯಕ್ರಮಗಳು:-** ಮೊದಲು ವಿ.ಡಿ. ಪಲೂಸ್ಕರ್ ಅವರ ಪುಣ್ಯತಿಥಿಯ ಸಂದರ್ಭದಲ್ಲಿ ಕಚೇರಿಗಳು. ಮುಂದೆ ಅಲಹಾಬಾದ್, ಮುಂಬೈ ಮುಂತಾದ ಕಡೆ ಸಂಗೀತ ಕಾರ್ಯಕ್ರಮಗಳು ೧೯೪೧ ರಿಂದ ೧೯೬೨ರವರೆಗೆ ಮುಂಬೈ ಹಾಗೂ ರಾಜಕೊಟೆ ಆಕಾಶವಾಣಿಯಲ್ಲಿ ಇವರ ಗಾಯನ ಪ್ರಸಾರವಾಗಿವೆ. ಚಲನಚಿತ್ರಗಳಿಗೆ ಹಿನ್ನೆಲೆ ಗಾಯನ ಒದಗಿಸಿದ್ದಾರೆ. ಬೆಂಗಳೂರಿನ ಶೃತಿ, ಬೆಂಗಳೂರು ಸಂಗೀತ ಸಭೆಗಳ ಆಶ್ರಯದಲ್ಲಿ ಕಚೇರಿ ಮಾಡಿದ್ದಾರೆ. ಹವ್ಯಾಸಿ ಕಲಾವಿದೆ.

# ಶ್ರೀಮತಿ ಶ್ಯಾಮಲಾ ಕೆ. ಕುಲಕರ್ಣಿ

ಗದಗ ಜಿಲ್ಲೆಯ ಹರ್ತಿಯಲ್ಲಿ **೨೬-೭-೧೯೫೨**ರಲ್ಲಿ ಜನಿಸಿದರು. ಬಾಲ್ಯದಲ್ಲಿ ತಾಯಿಯಿಂದ ಸಂಗೀತ ಶಿಕ್ಷಣ ಅನಂತರ ಬೆಳಗಾವಿಯ ಆರ್.ಎ.ಬಿಜಾಪುರೆ ಅವರಲ್ಲಿ ಸಂಗೀತ ಶಿಕ್ಷಣ. ಹುಬ್ಬಳ್ಳಿಯಲ್ಲಿ ಆರ್.ಎಸ್.ಜಂತಲಿಯವರಲ್ಲಿ ಸಂಗೀತ ಅಭ್ಯಾಸ ಮುಂದುವರೆಸಿದರು.

**ಕಾರ್ಯಕ್ರಮಗಳು:- ೧೯೬೬**ರಲ್ಲಿ ಹುಬ್ಬಳ್ಳಿಯಲ್ಲಿ ಮೊದಲ ಕಚೇರಿ. ಮುಂದೆ ಕೊಪ್ಪಳ ಡಾವಣಗೇರಿ, ಧಾರವಾಡ, ಹುಬ್ಬಳ್ಳಿ, ಅಣ್ಣಿಗೇರಿ ಮುಂತಾದ ಕಡೆ ಅನೇಕ ಉತ್ಸವಗಳಲ್ಲಿ ವಿಶೇಷ ಸಂದರ್ಭಗಳಲ್ಲಿ ಗಾಯನ ಕಚೇರಿ ಮಾಡಿದ್ದಾರೆ. ಹಾರ್ಮೋನಿಯಂ ವಾದನದಲ್ಲೂ ಪರಿಶ್ರಮ ಉಂಟು. ಆಕಾಶವಾಣಿಯ ಮೂಲಕ ಸುಗಮ ಸಂಗೀತವೂ ಪ್ರಸಾರವಗುತ್ತಿವೆ. ಹುಲಕೋಟೆಯಲ್ಲಿ ಶಾಲೆಯೊಂದರಲ್ಲಿ ಶಿಕ್ಷಕಿ. ಹವ್ಯಾಸಿ ಕಲಾವಿದೆ.

# ಶ್ರೀಮತಿ ಧನಲಕ್ಷ್ಮೀ ಮಾ----

ಗದಗನಲ್ಲಿ ಜನನ-೧೯೫೭ರಲ್ಲಿ. ಕಲಾವಿದರ ಮನೆತನ. ತಂದೆ ಹಾರ್ಮೋನಿಯಂ ವಾದಕರು. ಕೃಷ್ಣರಾವ್ ಇನಾಂದಾರ ಅವರಿಂದ ಶಿಕ್ಷಣ ಪಡೆದು ಸಂಗೀತ ವಿಶಾರದಾ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ. ಕರ್ನಾಟಕ ಸರ್ಕಾರದ ಸಿನಿಯರ್ ಪರೀಕ್ಷೆಯಲ್ಲಿ ತೇರ್ಗಡೆ. ಹಾಮೋನಿಯಂ ವಾದನದಲ್ಲಿ ಪರಿಶ್ರಮ ಉಂಟು.

ಮುಂಬೈ ತಮಿಳ್‌ನಾಡು, ಕೊಪ್ಪಳ, ರಾಯಚೂರ, ಗದಗ, ಗುಜರಾತ ಮುಂತಾದ ಕಡೆ ಸಂಗೀತ ಕಚೇರಿ ಮಾಡಿದ್ದಾರೆ. ಸಂಗೀತ ಅಧ್ಯಾಪಕಿಯಾಗಿ ವೃತ್ತಿ.

# ಶ್ರೀಮತಿ ಸುಶಿಲಾ ಮೆಹೆತಾ

**೨೬-೬-೧೯೩೭**ರಲ್ಲಿ ಹುಬ್ಬಳ್ಳಿಯಲ್ಲಿ ಕಲಾವಿದ ಮನೆಯಲ್ಲಿ ಜನನ. ಸೋದರತ್ತೆ ಲಲಿತಾ ಉಭಯಕರ್ ಪ್ರಸಿದ್ಧ ಗಾಯಕಿ. ರಾಮರಾವ್ ನಾಯಕರಲ್ಲಿ ಆಗ್ರಾಘರಾಣೆಯ ಸುದೀರ್ಘ ಸಂಗೀತ ಅಭ್ಯಾಸ.

ಬೆಂಗಳೂರ ಸಂಗೀತ ಸಭೆಯಲ್ಲಿ **೧೯೫೯**ರಲ್ಲಿ ಮೊದಲ ಕಚೇರಿ. ನಂತರ ಗಾನಕಲಾ ಪರಿಷತ್ತು. ರಾಮಸೇವಾ ಮಂಡಳಿ ಚಾಮರಾಜ ಪೇಟೆ, ಪುರಂದರ ದಾಸರ **೪**ನೇ ಶತಮಾನೋತ್ಸವ. ಹುಬ್ಬಳ್ಳಿಯ ಆರ್ಟ್ಸ್ ಸರ್ಕಲ್, ಸುರ್ ಸಾಗರ್, ಸಂಗೀತ ನೃತ್ಯ ಅಕಾಡಮಿ ಮುಂತಾದ ಸಂಸ್ಥೆಗಳ ಆಶ್ರಯದಲ್ಲಿ ಸಂಗೀತ ಸಮ್ಮೇಳನಗಳು ಹಾಗೂ ಉತ್ಸವಗಳಲ್ಲಿ ಕಚೇರಿ ಮಾಡಿದ್ದಾರೆ.

ಎಂ.ಎನ್. ಶೀಲಾರವರ ಜೊತೆಗೆ ಶಿವಮೊಗ್ಗಾ, ಡಾವಣಗೇರೆ, ಬೆಂಗಳೂರ ಮುಂತಾದ ಕಡೆ ಜುಗಲ್ ಬಂದಿ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಭರತ ನಾಟ್ಯದಲ್ಲೂ ಸಾಕಷ್ಟು ಪರಿಶ್ರಮವಿದ್ದು ಕಾರ್ಯಕ್ರಮಗಳನ್ನು ನೀಡಿದ್ದಾರೆ. ಆಕಾಶವಾಣಿ ಬೆಂಗಳೂರು ಕೇಂದ್ರದಿಂದ ಇವರ ಕಾರ್ಯಕ್ರಮಗಳು ಪ್ರಸಾರವಾಗುತ್ತಿವೆ. ಹವ್ಯಾಸಿ ಕಲಾವಿದೆ.

# ಶ್ರೀಮತಿ ವತ್ಸಲಾ ದಾಸಪ್ಪ ಮವಾರಿ

ಶಿರಸಿಯಲ್ಲಿ **೧೦.೧.೧೯೪೬**ರಲ್ಲಿ ಜನನ. ತಂದೆ ದಾಸಪ್ಪಾ ಮವಾರಿ. ತಾಯಿ ಲಕ್ಷ್ಮೀ ದಾಸಪ್ಪ ಮವಾರಿ. ಪಂ. ಜಿ.ಎನ್.ಹೆಗಡೆ ಬೆಳ್ಳಿಕೇರಿ ಅವರಿಂದ ಸಂಗೀತ ಅಭ್ಯಾಸ. ನಂತರ ಪಂ. ಮೋಹನ ದಾಸ್ ಚಿಕ್ಕರಮನಿ ಮುಂಬೈ ಇವರಲ್ಲಿ ನಿರಂತರ ಅಭ್ಯಾಸ. **೩೫** ವರ್ಷಗಳ ಕಾಲ ಆಗ್ರಾ ಘರಾಣೆಯಲ್ಲಿ ಸಂಗೀತ ಸಾಧನೆ. ಗಾಯನ ವಿಭಾಗದಲ್ಲಿ ಸಂಗೀತ ವಿದ್ವತ್, ಗಂಧರ್ವ ಮಹಾ ವಿದ್ಯಾಲಯದಿಂದ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತಕ್ಕೆ ಸಂಬಂಧಪಟ್ಟ ಎಲ್ಲಾ ಪರೀಕ್ಷೆಗಳಲ್ಲೂ ರಾಜ್ಯಕ್ಕೆ ತೃತಿಯ ಸ್ಥಾನಗಳಿಸಿದ್ದಾರೆ.

ರಾಜ್ಯದ ಒಳ ಹೊರಗೆ ಅನೇಕ ಕಡೆಗಳಲ್ಲಿ ಕಳೆದ **೨೦** ವರ್ಷಗಳಿಂದ ಗಾಯನ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಕಾರವಾರದಲ್ಲಿ ನಡೆದ ಕರಾವಳಿ ಉತ್ಸವದಲ್ಲಿ ಕಾರ್ಯಕ್ರಮ ನೀಡಿದ್ದಾರೆ. ಸಾವಂತವಾಡಿ ಮಹಾರಾಜರಿಂದ ಬಂಗಾರದ ಪದಕ, ಅಲ್ಲದೇ ಅನೇಕ ಪ್ರಶಸ್ತಿಗಳನ್ನು ಗಳಿಸಿರುತ್ತಾರೆ.

## ಶ್ರೀಮತಿ ಲಲಿತಾ ಎಚ್.ಕಾಯ್ಕಿಣಿ

ಇವರು ೧೮-೧೨-೧೯೪೫ರಲ್ಲಿ ಜನಿಸಿದರು. ಚಿದಾನಂದ ನಗರಕರ್ ಅವರಿಂದ ಮುಂಬೈಯಲ್ಲಿ ಆಗ್ರಾ ಘರಾಣೆಯ ಸಂಗೀತ ಶಿಕ್ಷಣ ಪಡೆದರು. ಲಖ್ನೋ ವಿಶ್ವವಿದ್ಯಾಲಯದ ಸಂಗೀತ ವಿಶಾರದಾ ಪರೀಕ್ಷೆಯಲ್ಲಿ ತೇರ್ಗಡೆ ಮತ್ತು ಗಂಧರ್ವ ಮಹಾವಿದ್ಯಾಲಯದ ಮಧ್ಯಮ ಪರೀಕ್ಷೆಯಲ್ಲಿ ತೇರ್ಗಡೆ.

೧೯೬೬ರಲ್ಲಿ ಮುಂಬೈಯಲ್ಲಿ ಮೊದಲ ಕಾರ್ಯಕ್ರಮ. ಅನಂತರ ಬೆಂಗಳೂರಿನ ಮಹಾರಾಷ್ಟ್ರ ಮಂಡಳಿ, ಶೃತಿ ಅರವಿಂದ ಸಂಗೀತ ವಿದ್ಯಾಲಯ ಮುಂತಾದ ಕಡೆ ಕಚೇರಿಗಳು ನಡೆದಿವೆ. ೧೯೭೭ರಿಂದ ಮನೆಯಲ್ಲಿಯೇ ಲಲಿತಾ ಸಂಗೀತ ವಿದ್ಯಾಲಯವನ್ನು ನಡೆಸುತ್ತಿದ್ದಾರೆ. ಶಾಲೆಯೊಂದರಲ್ಲಿ ಸಂಗೀತ ಶಿಕ್ಷಕಿಯಾಗಿ ವೃತ್ತಿ.